8. ವಿಷಯ: ನಿಯಮ 69ರ ಮೇರೆಗೆ ರಾಜ್ಯದಲ್ಲಿ

ಉಂಟಾಗಿರುವ ಬರಗಾಲದ ಪರಿಸ್ಥಿತಿ ಬಗ್ಗೆ (ಮುಂದುವರೆದ ಚರ್ಚೆ)

ಶ್ರೀ ಹೆಚ್. ಆಂಜನೇಯ (ಭರಮಸಾಗರ) :- ಈಗ ಬರಗಾಲ ಅನ್ನತಕ್ಕಂಥಾದ್ದು ಏನಾಗಿದೆಯೆಂದರೆ ನಾವು ಒಂದು ಸಮೀಕ್ಷೆ ಮಾಡಿದ್ದೇವೆ. ನೂರು ವರ್ಷದಲ್ಲಿ ಎಷ್ಟು ಸಲ ಬರಗಾಲ ಹಬ್ಬಿತ್ತು ಈ ರಾಜ್ಯದಲ್ಲಿ ಎಂದು. 60 ಬಾರಿ ಬರಗಾಲ ಬಂದಿದೆ, 30 ಬಾರಿ ತೀವ್ರತರವಾದ ಒಂದು ಬರಗಾಲ ಬಂದಿದೆ. ಈ ಬರಗಾಲ ಬಂದಿರತಕ್ಕಂಥ ಸಂದರ್ಭದಲ್ಲಿ ನಮ್ಮ ಜನರು ಎದುರಿಸತಕ್ಕಂಥ ಸಮಸ್ಯೆಯನ್ನು ಶಾಶ್ವತವಾಗಿ ನಾವು ಪರಿಹರಿಸುವಂಥ ಕಾರ್ಯವನ್ನು ಎಂದಿನಿಂದಲೂ ಕೂಡ ಆಡಳಿತ ಮಾಡಿಕೊಂಡು ಬಂದಂಥ ಪಕ್ಷಗಳು ಯಾವುದೇ ಇರಬಹುದು. ರಾಜಕಾರಣಿಗಳು ಇರಬಹುದು. ಶಾಶ್ವತವಾಗಿ ಬರವನ್ನು ತಡೆಹಿಡಿಯತಕ್ಕಂಥ ಮತ್ತು ಬರವನ್ನು ಬರದೇ ಇರತಕ್ಕಂಥ ರೀತಿಯಲ್ಲಿ ಇದಕ್ಕೆ ಏನು ನಾವು ಶಾಶ್ವತವಾಗಿ ಪರಿಹರಿಸಬಹುದು ಅನ್ನುವುದರ ಬಗ್ಗೆ ಗಂಭೀರವಾದ ಚಿಂತನೆಯನ್ನು ಮಾಡಲಿಲ್ಲ. ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಇಲ್ಲಿ ಪ್ರದರ್ಶನವನ್ನು ಮಾಡಲಿಲ್ಲ. ಎಲ್ಲೆಲ್ಲಿ ಬರಗಾಲವಿದೆ ಎನ್ನತಕ್ಕಂಥ ಪ್ರದೇಶಗಳಿಗೆ ಇವತ್ತು ಕುಡಿಯುವ ನೀರಿಲ್ಲ. ಕುಡಿಯುವ ನೀರು ಏಕಿಲ್ಲ ಎನ್ನುವುದನ್ನು ನಾನು ಇಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಎಲ್ಲಾ ಊರುಗಳಲ್ಲಿಯೂ ನಾವೀಗಾಗಲೇ ಕೊಳವೆ ಬಾವಿಗಳನ್ನು ಕೊರೆದಿದ್ದೇವೆ. ಆ ಬಾವಿಗಳಲ್ಲಿ ಇವತ್ತು ನೀರಿಲ್ಲ, ಕಾರಣವೇನೆಂದರೆ, ಇವತ್ತು ಅಂತರ್ಜಲ ಸಂಪೂರ್ಣವಾಗಿ ಬತ್ತಿಹೋಗಿದೆ. ಮಳೆ ಯಾವ ಪ್ರಮಾಣದಲ್ಲಿ ಬರಬೇಕಾಗಿತ್ತು, ಆ ಪ್ರಮಾಣದಲ್ಲಿ ಮಳೆ ಬರಲಿಲ್ಲ, ಈ ಕಾರಣದಿಂದ. ಕೃಷ್ಣ ಭೈರೇಗೌಡರು ಹೇಳಿದರು, ಒಂದೊಂದು ಹಳ್ಳಿಯಲ್ಲಿ 8-8 ಬೋರ್‌ವೆಲ್‌ಗಳನ್ನು ಕೊರೆದರೂ ಕೂಡ ನೀರು ಬರುತ್ತಿಲ್ಲವೆಂದು ಹೇಳಿದರು. ಆ ರೀತಿಯಾದಂಥ ಹಳ್ಳಿಗಳಲ್ಲಿ ಇವತ್ತು ಎಲ್ಲಿ ನೀರೇ ಸಿಗುವುದಿಲ್ಲ ಎನ್ನತಕ್ಕಂಥ ಊರುಗಳಲ್ಲಿ ವಿಶೇಷವಾಗಿ ಜಿಲ್ಲಾ ಪಂಚಾಯತ್‌ನವರು ಆಸಕ್ತಿಯನ್ನು ವಹಿಸಬೇಕು. ಏನೆಂದರೆ, ಎಲ್ಲಿ ನೀರು ಇದೆಯೋ ಆ ನೀರನ್ನು ಟ್ಯಾಂಕರ್ ಮೂಲಕ ಹಳ್ಳಿಗೆ ಸರಬರಾಜು ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕಾಗುತ್ತದೆ. ನಮ್ಮ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಕುಮಾರಸ್ವಾಮಿಯವರು ಹೇಳಿದರು ಕುಡಿಯುವ ನೀರಿನ ಬಗ್ಗೆ. ನಾವು ಅದಕ್ಕೆ ಬೇಕಾಗಿರತಕ್ಕಂಥ ಹಣದ ಕೊರತೆ ಇಲ್ಲ, ಎಷ್ಟು ಹಣವನ್ನು ಬೇಕಾದರೂ ನಾವು ಕೊಡಲಿಕ್ಕೆ ತಯಾರಿದ್ದೇವೆ. ಎಲ್ಲಾ ಜಿಲ್ಲಾ

ಪಂಚಾಯತ್‌ನಲ್ಲಿಯೂ ಹಣವನ್ನು ಕುಡಿಯಲಿಕ್ಕೆ ಕಾದಿರಿಸಿದ್ದೇವೆಂದು. ಅದರಿಂದ ನಾವು ಶಾಸಕರು ಎಲ್ಲಿ ನೀರು ಲಭ್ಯವಿಲ್ಲವೋ ಅಂಥ ಕಡೆಗೆ ಈ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ನನ್ನ ಕ್ಷೇತ್ರಗಲಲ್ಲಿ ಹಾಗೆ ಆಗಿತ್ತು. ಕೆರೆಗಳ ಹಳ್ಳಿ ಎನ್ನುವಂಥ ಒಂದು ಹಳ್ಳಿಯಲ್ಲಿ 10 ಸಾರಿ ನಾವು ಜಿಯಾಲಜಿಸ್ಟ್ ಅನ್ನು ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿದ್ದೇವೆ. 10 ಸಾರಿ ಕೊಳವೆಬಾವಿಗಳನ್ನು ಕೊರೆಸಿದರೂ ನೀರು ಲಭ್ಯವಾಗಲೇ ಇಲ್ಲ. ಕೊನೆಗೆ ಏನಾದರೂ ಮಾಡಿ ಎಂದಾಗ 5 ಕಿ.ಮೀ. ಅಂತರದಲ್ಲಿ ಒಂದು ಬೋರ್‌ವೆಲ್ ಅನ್ನು ಕೊರೆದಿದ್ದಾರೆ, ಮೊನ್ನೆ ನೀರು ಬಿದ್ದಿದೆ. ಆ ನೀರು ಬಿದ್ದಿರತಕ್ಕಂಥ ನೀರನ್ನು ತೆಗೆದುಕೊಂಡು ಹೋಗಲಿಕ್ಕೆ ಲಕ್ಷಾಂತರ ರೂಪಾಯಿಗಳ ಹಣ ಬೇಕು. ಆಯಿತು, ಅದನ್ನೇನಾದರೂ ಮಾಡಲೇಬೇಕು ಎಂದು ನಾವು ಜಿಲ್ಲಾ ಪಂಚಾಯತ್‌ಗೆ ಒತ್ತಾಯ ಮಾಡಿದ ಮೇಲೆ ಪೈಪ್‌ಲೈನ್ ಅನ್ನು ಈಗ ಅಳವಡಿಸುತ್ತಿದ್ದಾರೆ. ಮಳೆ ಬಿದ್ದ ಮೇಲೆ ಅಂತರ್ಜಲ ವೃದ್ಧಿಯಾಯಿತು ಅಂದರೆ ಈಗ ಉಳಿದಿರತಕ್ಕಂಥ ಬೋರ್‌ವೆಲ್‌ಗಳೆಲ್ಲಾ ರೀಚಾರ್ಜ್ ಆಗುತ್ತದೆ. ಅಲ್ಲಿಯವರೆಗೆ ನಮಗೆಲ್ಲಾ ಬಹಳ ಕಷ್ಟವಾಗುತ್ತದೆ. ಆದ್ದರಿಂದ ವಾಜಪೇಯಿಯವರು ಒಂದು ದೊಡ್ಡ ಕಾರ್ಯಕ್ರಮವನ್ನು ಈ ದೇಶಕ್ಕೆ ಕೊಡಬೇಕೆಂದು ಹೇಳಿದ್ದರು. ಏನೆಂದರೆ, ಗಂಗಾ ಕವೇರಿಯ ನದಿ ಜೋಡಣೆ ಆಗಬೇಕು, ನದಿಜೋಡಣೆಯಾದಾಗ ಕುಡಿಯುವ ನೀರು, ವಿದ್ಯುತ್ ಮತ್ತು ರೈತನಿಗೆ ಬೇಕಾಗಿರುವುದು ಏನೆಂದರೆ ನೀರು, ಕರೆಂಟ್ ಇವೆರಡೂ ಬಹಳ ಅವಶ್ಯಕ. ಆದ್ದರಿಂದ ನೀರನ್ನು ನಾವು ಎಲ್ಲೆಲ್ಲಿ ಡ್ಯಾಮ್‌ಗಳನ್ನು ಕಟ್ಟಿ ಎಲ್ಲೆಲ್ಲಿ ನೀರು ಹರಿಯುತ್ತಿದೆ, ವತ್ತು ನಮ್ಮ ನದಿಗಳು ಹರಿದು ಸಮುದ್ರ ಸೇರುತ್ತಿವೆಯೋ, ಅಂಥ ಕಡೆಗೆ ಡ್ಯಾಮ್‌ಗಳನ್ನು ಕಟ್ಟಿ ಬಿಟ್ಟು, ಎಲ್ಲಿ ನೀರಾವರಿ ಇಲ್ಲವೋ ಅಂಥ ಪ್ರದೇಶಕ್ಕೆ ನೀರನ್ನು ಹರಿಸುವಂಥ ಕೆಲಸವನ್ನು ಮಾಡಬೇಕು, ನೀವು ಎಷ್ಟು ಸುಮ್ಮನೆ ಭಿಕ್ಷೆ ಕೊಡುತ್ತೀರೋ, ಸಾಲ ಮನ್ನಾ ಮಾಡುತ್ತೀರೋ, ಇಂಥವೆಲ್ಲಾ ಕಾರ್ಯಕ್ರಮವನ್ನು ನಿಲ್ಲಿಸಿ ನೀರು ಎಲ್ಲೆಲ್ಲಿಲ್ಲ ಅಂಥ ಪ್ರದೇಶಕ್ಕೆ ನೀರಾವರಿ ಮಾಡತಕ್ಕಂಥ ಕೆಲಸವನ್ನು ಮಾಡಿದರೆ ಖಂಡಿತವಾಗಿ ನಮ್ಮ ರೈತ ಭಿಕ್ಷೆಯನ್ನು, ಯಾವುದೇ ಸಾಲಮನ್ನಾವನ್ನು ಕೇಳುವುದಿಲ್ಲ. ನೀರು, ವಿದ್ಯುತ್ ಸರಿಯಾಗಿ ಅವರಿಗೆ ಕೊಟ್ಟುಬಿಡಿ. ನೀರು ಮತ್ತು ವಿದ್ಯುತ್ ಇವೆರಡೂ ಕೊರತೆಯಿರುವುದರಿಂದ ಸರ್ಕಾರ ಗಂಭೀರವಾಗಿ ಇವತ್ತು ಚಿಂತನೆಯನ್ನು ಮಾಡಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಎಲ್ಲೆಲ್ಲಿ ನಮ್ಮ ನದಿಗಳು ಸಮುದ್ರ ಸೇರುತ್ತವೋ, ಆ ನೀರನ್ನೆಲ್ಲಾ ನೀರಾವರಿ ಇಲ್ಲದಂಥ ಪ್ರದೇಶಕ್ಕೆ, ಇವತ್ತು ನಮ್ಮ ಚಿತ್ರದುರ್ಗ, ತುಮಕೂರು, ಕೋಲಾರ

ಇರಬಹುದು, ಮೂರು ಜಿಲ್ಲೆಗಳು ಇವತ್ತು ಬರಗಾಲದ ದವಡೆಯಲ್ಲಿ ನರಳುತ್ತಿವೆ, ಅಂಥ ಒಂದು ಜಿಲ್ಲೆಗಳಿಗೆ ನೀರು ಕೊಡುವ ಕೆಲಸವಾಗಬೇಕು. ಅಪ್ಪರ್ ಭದ್ರಾ ಬರುತ್ತದೆ. ಕಾರ್ಯಾಚರಣೆ ಮಾಡೇ ಮಾಡುತ್ತೇವೆಂದು ಹೇಳಿ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಿಂದ ನಡೆಯುತ್ತಿದೆ. ಹಿಂದೆ ನಮ್ಮ ಮುಖ್ಯಮಂತ್ರಿಗಳಾದಂಥ ಜೆ.ಎಚ್. ಪಟೇಲ್‌ರವರು ಕೂಡ ತುಂಗಾ ತಿರುವು ಎನ್ನತಕ್ಕಂಥ ಒಂದು ಯೋಜನೆಗೆ ಶಂಕುಸ್ಥಾಪನೆಯನ್ನು ಮಾಡಿದರು, ಮುಂದೆ ಬರತಕ್ಕಂಥ ಸರ್ಕಾರಗಳು ಹಿಂದೆ ಇದ್ದಂಥ ಮುಖ್ಯಮಂತ್ರಿಗಳು ಏನು ಮಾಡಿದ್ದರು ಎಂಬುದರ ಬಗ್ಗೆ ಪರಿಶೀಲನೆ ಮಾಡಲಿಕ್ಕೇ ಹೋಗುವುದಿಲ್ಲ. ಅವರು ಮಾಡಿದ್ದು ಕಾರ್ಯಕ್ರಮ ಇದನ್ನು ನಾನು ಅನುಷ್ಠಾನಕ್ಕೆ ತಂದುಬಿಟ್ಟರೆ, ಅದು ಜೆ.ಎಚ್. ಪಟೇಲ್‌ರಿಗೆ, ನಿಜಲಿಂಗಪ್ಪ, ವೀರೇಂದ್ರ ಪಾಟೀಲ್‌ರಿಗೆ ಶ್ರೇಯಸ್ಸು ಸಿಕ್ಕಿಬಿಡುತ್ತದೆನ್ನುವ ಸಣ್ಣತನ ನಮ್ಮಲ್ಲಿರುವುದರಿಂದ ಈ ರೀತಿಯಾದಂಥ ಒಂದು ರಾಜ್ಯಕ್ಕೆ ಇಚ್ಛಾಶಕ್ತಿ ಕೊರತೆಯಿಂದ ಈ ರಾಜ್ಯ ಬರಗಾಲಕ್ಕೆ ತುತ್ತಾಗುತ್ತಿದೆ. ಈ ಬರಗಾಲವನ್ನು ಶಾಶ್ವತವಾಗಿ ನಿವಾರಣೆ ಮಾಡಲಿಕ್ಕೆ ನಮ್ಮ ಮುಂದೆ ಇರತಕ್ಕಂಥಾದ್ದು ಒಂದೇ ಒಂದು ಪರಿಹಾರ. ನೀರು ಎಲ್ಲೆಲ್ಲಿ ವೇಸ್ಟ್ ಆಗಿ ಹೊರಟುಹೋಗುತ್ತದೆ, ಅಂಥ ನೀರನ್ನು ಈ ಒಣ ಭೂಮಿಗೆ, ಬಂಜರು ಭೂಮಿಗೆ ಹರಿಸತಕ್ಕಂಥ ಕೆಲಸವನ್ನು ನಾವು ಪ್ರಾಮಾಣಿಕವಾಗಿ ಮಾಡಿದ್ದೇ ಆದರೆ, ಖಂಡಿತವಾಗಿ ನೀರಿನ ಬರ ಎಲ್ಲಿಯೂ ಕೂಡ ಇರುವುದಿಲ್ಲವೆನ್ನುವಂಥ ಒಂದು ಅಂಶವನ್ನು ನಾನು ಈ ಸಂದರ್ಭದಲ್ಲಿ, ಮಾನ್ಯ ಅಧ್ಯಕ್ಷರೇ, ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅದರ ಜತೆ ನಾವೇನು ಪಾಪದ ಕೆಲಸ ಮಾಡುತ್ತೇವೆ ಎಂಬುದನ್ನೂ ನಾವು ವಿವೇಚನೆ ಮಾಡಬೇಕು. ನಮ್ಮ ನಿಸರ್ಗವನ್ನೆಲ್ಲಾ ನಾಶಪಡಿಸುತ್ತಿದ್ದೇವೆ. ನಮ್ಮಪ್ಪ ನಮ್ಮಜ್ಜ ಹಾಕಿದ ಮರಗಳನ್ನೆಲ್ಲ ಕಡಿದು ಮಾರಿಕೊಂಡು ತಿನ್ನುತ್ತಾ ಇದ್ದೇವೆ. ಒಂದು ಗಿಡಮರ ನೆಡುವುದಕ್ಕೆ ನಾವು ರೆಡಿಯಿಲ್ಲ. ಎಲ್ಲಾದರೂ ಒಂದು ಉತ್ತಮವಾದ ಕೆರೆಯನ್ನು ನಿರ್ಮಾಣ ಮಾಡೋಣ ಅಂದರೆ ಅಲ್ಲಿ ರಾಜಕೀಯ. ಇಂಥ ರಾಜಕೀಯವೆಲ್ಲ ಬಿಟ್ಟು ಮಳೆ ಬಂದ ಸಂದರ್ಭದಲ್ಲಿ ಅಲ್ಲಲ್ಲೇ ನೀರನ್ನು ತಡೆಹಿಡಿಯುವ ಇಂಗು ಗುಂಡಿಗಳನ್ನು ನಿರ್ಮಿಸುವಂತಹ ಮತ್ತು ಎಲ್ಲೆಲ್ಲಿ ಬೋರ್‌ವೆಲ್ ಇವೆ, ಅವನ್ನು ರೀಚಾರ್ಜ್ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಅದಕ್ಕೆ ವಿಶೇಷ ಹಣ ಕೊಟ್ಟು ಮುಂದಿನ ವರ್ಷಗಳಲ್ಲಿ ನೀರಿಗೆ ತೊಂದರೆಯಾಗದ ರೀತಿಯಲ್ಲಿ ಇಂದಿನಿಂದಲೇ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕೆ ಬೇಕಾದಷ್ಟು ಯೋಜನೆಗಳಿವೆ, ರಾಜ್ಯಸರ್ಕಾರದ ಯೋಜನೆ ಇದೆ, ಕೇಂದ್ರಸರ್ಕಾರದ ಯೋಜನೆ

ಇದೆ. ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವ ಕೆಲಸವಾಗಬೇಕು. ಎಲ್ಲಿ ನೀರಿನ ಹರಿವಿದೆಯೋ, ಅಲ್ಲಿ ಇವತ್ತು ಚೆಕ್ ಡ್ಯಾಂ ಕಟ್ಟುತ್ತಾ ಇಲ್ಲ. ಹರಿವಿಲ್ಲದ ಕಡೆ ಕಂಟ್ರಾಕ್ಟರನ್ನು ಉದ್ಧಾರ ಮಾಡುವುದಕ್ಕಾಗಿ ಚೆಕ್ ಡ್ಯಾಂ ಕಟ್ಟುವುದು ಕೆಲವು ಕಡೆಯೆಲ್ಲಾ ನೋಡಿದ್ದೇವೆ. ಅದ್ಯಾವ ತಜ್ಞರು ಹೇಳುತ್ತಾರೋ, ಗೊತ್ತಿಲ್ಲ. ನೀರೇ ಬರದ ಕಡೆ ಸಣ್ಣ ಸಣ್ಣ ಕೆರೆಗಳನ್ನು ನಿರ್ಮಾಣ ಮಾಡುವುದು – ಇಂತಹ ಅವೈಜ್ಞಾನಿಕ ಕಾರ್ಯಕ್ರಮಗಳು ನಡೆಯುತ್ತಾ ಇರುವುದರಿಂದ ಅಂತರ್ಜಲ ವೃದ್ಧಿಗಾಗಿ ಸರ್ಕಾರ ಇಟ್ಟಿರುವ ಹಣ ಇವತ್ತು ಪೋಲಾಗಿಹೋಗುತ್ತಿದೆ. ಆದ್ದರಿಂದ ತಜ್ಞರು ವರದಿ ಕೊಟ್ಟ ಮೇಲೆ 10, 20 ಲಕ್ಷದ ಕಾಮಗಾರಿಗಳನ್ನು ಆರಂಭಿಸಲು ಸರ್ಕಾರ ಮೊದಲು ಸರಿಯಾದ ತಜ್ಞರನ್ನು ನೇಮಕ ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತ, ಮಳೆ ಬರುವವರೆಗೂ ಈ ಸಮಸ್ಯೆಗಳು ಕಾಡುತ್ತಲೇ ಇರುತ್ತವೆ. ಜನರಿಗೆ ನಾವು ಸಮಾಧಾನವಾಗಿ ಹೇಳಿ, "ನೋಡಪ್ಪ, ನಮ್ಮ ಕೈಯಲ್ಲಿಲ್ಲ. ಅಂತರ್ಜಲ ಸಂಪೂರ್ಣವಾಗಿ ಬತ್ತಿಹೋಗಿದೆ, 20 ಬೋರ್‌ವೆಲ್ ಹಾಕಿದರೂ ನೀರು ಸಿಗುತ್ತಿಲ್ಲ. ಆದ್ದರಿಂದ ನಿಮಗೆ ಟ್ಯಾಂಕರ್ ಮೂಲಕವಾದರೂ ನೀರು ತಂದುಕೊಡುತ್ತೇವೆ. ಆದ್ದರಿಂದ ಸುಧಾರಿಸಿಕೊಂಡು ಮಳೆ ಬರುವವರೆಗೂ ಬೋರ್‌ಗಳು ರೀಚಾರ್ಜ್ ಆಗುವವರೆಗೂ ಸಹಕರಿಸಬೇಕು" ಎಂದು ರಾಜ್ಯಸರ್ಕಾರ ಪ್ರಾರ್ಥನೆ ಮಾಡಬೇಕಾಗುತ್ತದೆ. ನಮ್ಮಂಥ ಜನಪ್ರತಿನಿಧಿಗಳು ಕೂಡ ಅವರನ್ನು ವಿಶ್ವಾಸದಲ್ಲಿಟ್ಟುಕೊಂಡು ಕುಡಿಯುವ ನೀರು ಕೊಡುವ ಕೆಲಸವನ್ನು ನಾವೆಲ್ಲರೂ ಪಕ್ಷಾತೀತವಾಗಿ ಮಾಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ್) :– ಅಧ್ಯಕ್ಷರೇ, ಸಾಕಷ್ಟು ಜನ ಹಲವಾರು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಕುಡಿಯುವ ನೀರಿನ ನಿರ್ವಹಣೆ ಬಗ್ಗೆ ಸದನ ಪ್ರಾರಂಭವಾಗುವುದಕ್ಕೆ ಮುಂಚೆ ಮತ್ತು ಮಧ್ಯದಲ್ಲಿ ನಾವು ಗ್ರಾಮ ಪಂಚಾಯ್ತಿ ಅಧ್ಯಕ್ಷರ ಒಂದು ಸಭೆ ಮತ್ತು ಕಾರ್ಯದರ್ಶಿಗಳದ್ದು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳದ್ದು. ಹೀಗೆ ಸುಮಾರು ಮೂರ್ನಾಲ್ಕು ಸಭೆಗಳನ್ನು ಮಾಡಿದ್ದೇನೆ. ನನ್ನ ಆಳಂದ ಕ್ಷೇತ್ರ ಮತ್ತು ರೇವೂನಾಯಕರದು – ಎರಡೂ ಕಂದಾಯ ವಿಭಾಗ. ಎರಡೂ ಸೇರಿ ಒಂದು ಪರಿಷ್ಕೃತ ಪಟ್ಟಿ ಮಾಡಿ 2.13 ಕೋಟಿ ಮೇಲ್ಪಟ್ಟು ಕಳಿಸಿ ಆಗಲೇ ಮೂರು ತಿಂಗಳಾಗಿದೆ. ರೇವೂನಾಯಕರೇನೋ ಸುದೈವದಿಂದ ಮಂತ್ರಿಗಳಾಗಿದ್ದಾರೆ ಮತ್ತು ಅವರು ಯಡಿಯೂರಪ್ಪನವರಿಗೆ ಹತ್ತಿರವಾಗಿರುವ

ಕಾರಣಕ್ಕಾಗಿ ನೇರವಾಗಿ 25 ಲಕ್ಷ ಅವರು ತಂದು ಆ ಜನಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ನಾವು ಯಾವ ಪಾಪ ಮಾಡಿದ್ದೇವೋ ಏನೋ ಗೊತ್ತಿಲ್ಲ, ಏನೋ 8 ಲಕ್ಷ, ಅನಂತರ 4 ಲಕ್ಷ ಬಂದಿದೆ. ಅದೇ ತರಹ ಶಹಬಾದ್ ಕ್ಷೇತ್ರದವರಿಗೆ 10 ಲಕ್ಷ, ಹೀಗೆ ತಾರತಮ್ಯ ಮಾಡುವುದು ಸರಿಯಲ್ಲ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರವೇನು ಮಾತು ಕೊಟ್ಟಿದೆ, ಆ ಮಾತನ್ನು ಅವರು ನಡೆಸಿಕೊಡಬೇಕು. ಮತ್ತು ಅದಕ್ಕೆ ಎಷ್ಟು ದುಡ್ಡು ಬೇಕೋ, ಅದನ್ನು ಒದಗಿಸಲು ಮುಂದಾಗಬೇಕು. ಈಗ Task Force Committee ಬಗ್ಗೆ ಸದನದಲ್ಲಿ ಬಹಳ ಚರ್ಚೆಯಾಯಿತು. ವಾಸ್ತವಿಕವಾಗಿ ಕ್ರಿಯಾಪಡೆಗಳು ಜೀವಂತವಾಗಿದ್ದಾವೆ. ಅವನ್ನು ಯಾವ ಸರ್ಕಾರವೂ ರದ್ದು ಮಾಡಿಲ್ಲ, ಯಾವ ಬದಲಾವಣೆಗಳನ್ನೂ ಮಾಡಿಲ್ಲ. ನಾನೂ ಸಭೆಗಳನ್ನು ನಡೆಸಿ ಎಲ್ಲಾ ವಿವರಗಳನ್ನು ಒದಗಿಸಿ, ನಮಗೆ ಇಷ್ಟು ದುಡ್ಡು ಬೇಕು ಅಂತ ಕೇಳಿದ್ದೇವೆ. ಆದರೆ ನಾವು ಜಿಲ್ಲಾಧಿಕಾರಿಗಳ ಹತ್ತಿರ ಕೇಳಿದಾಗ ದುಡ್ಡಿಲ್ಲ ಎನ್ನುತ್ತಾರೆ. ಇನ್ನು ಯೋಜನೆಗಳನ್ನು ನಾವು ಏನು ತಗೊಂಡಿದ್ದೀವಿ, ಅಲ್ಲಿ ಬೋರ್‌ವೆಲ್ ಹಾಕುವುದಿಲ್ಲ. ಬೋರ್‌ವೆಲ್ ಹಾಕಿದರೆ ಕೊಲ್ಯಾಪ್ಸ್ ಆಗಿ ನೀರು ಹೋಗಿದೆ. ಅದರಿಂದ 5 ಕಿಮೀನಲ್ಲಿ ಮತ್ತೆ ಬೋರ್ ಹಾಕಿದ್ದೇವೆ. ಅದಕ್ಕೆ ಪೈಪ್‌ಲೈನ್ ಮಾಡಬೇಕಾದರೆ ಲಕ್ಷಗಟ್ಟಲೆ ದುಡ್ಡು ಬೇಕು. ನನಗೆ ಬರೀ 4 ಲಕ್ಷ ಕೊಟ್ಟಿದ್ದಾರೆ. ಇದು ಒಂದು ಊರಿಗೂ ಸಾಕಾಗುವುದಿಲ್ಲ. ಕುಡಿಯುವ ನೀರಿಗೆ ಕೇಳಿದರೆ ಗ್ರಾಮೀಣಾಭಿವೃದ್ಧಿ ಇಲಾಖೆ, ಬರ ಪರಿಹಾರಕ್ಕೆ ಕೇಳಬೇಕಾದರೆ ಜಿಲ್ಲಾಧಿಕಾರಿ – ಒಬ್ಬರಿಗೊಬ್ಬರ ಮಧ್ಯೆ ತಾಳೆ ಇಲ್ಲ. ಒಟ್ಟಿನಲ್ಲಿ ದುಡ್ಡು ಸಿಗುತ್ತಾ ಇಲ್ಲ. ನಾನು ಜಗದೀಶ ಶೆಟ್ಟರ ಹತ್ತಿರ ಮಾತನಾಡಿದೆ. ಉದ್ಯೋಗ ಖಾತರಿ ಯೋಜನೆ ಬಂದ ಮೇಲೆ ಗ್ರಾಮೀಣರಿಗೆ ನಾವು ಉದ್ಯೋಗ ಕೊಡಬಹುದು, ತೆರೆದ ಬಾವಿ ತೆರೆಯಬಹುದು, ಆದರೆ ಪಟ್ಟಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರ ಎಳ್ಳಿನಷ್ಟೂ ಪ್ರಯತ್ನ ಮಾಡಿಲ್ಲ. ಇವತ್ತು ಪಟ್ಟಣ ಪ್ರದೇಶದಲ್ಲಿ ಬರ ಪರಿಹಾರ ಕಾಮಗಾರಿ ತಗೊಳ್ಳೋ ಹಾಗಿಲ್ಲ. ಉದ್ಯೋಗ ಖಾತರಿ ತಗೊಳೋ ಹಾಗಿಲ್ಲ. ಒಟ್ಟಿನಲ್ಲಿ ಪಟ್ಟಣ ಪ್ರದೇಶದಲ್ಲೂ ಬಹಳ ದೊಡ್ಡ ಸಮಸ್ಯೆಯಾಗಿದೆ. ಇದನ್ನು ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಕಾನೂನು ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ ಅಂತ ಅಧಿಕಾರಿಗಳು ಹೇಳುತ್ತಾರೆ. ಈ ತೊಡಕನ್ನು ನೀವು ಬಗೆಹರಿಸದೇ ಹೋದರೆ ಜನ ಅನಾವಶ್ಯಕವಾಗಿ ತೊಂದರೆಗೊಳಗಾಗುತ್ತಾರೆ. ದಯಮಾಡಿ ಪಟ್ಟಣ ಪ್ರದೇಶಕ್ಕೆ ನೀರು ಕೊಡಲು ನೀವು ಯಾವ ಯೋಜನೆಯಿಂದ ದುಡ್ಡು ಕೊಡುತ್ತೀರೋ

ಅದು ಸರ್ಕಾರಕ್ಕೆ ಬಿಟ್ಟ ವಿಚಾರ. ಆ ಪ್ರಯತ್ನ ಮಾತ್ರ ಮಾಡಬೇಕು. ಈಗ ಏನಾಗಿದೆ ಎಂದರೆ ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡುವ ಕೆಲಸ ನಾವು ಪ್ರತಿ ವರ್ಷ ಮಾಡುತ್ತಿದ್ದೇವೆ. ಒಂದು ಶಾಶ್ವತ ಪರಿಹಾರ ಹುಡುಕುವ ಕೆಲಸ ನಾವು ಮಾಡದೇ ಹೋದರೆ ಈ ಬರ ಪರಿಹಾರ ಎಂಬುದು ಸಿದ್ಧರಾಮಯ್ಯ ಹೇಳಿದಂತೆ ಇದು ಅಧಿಕಾರಿಗಳಿಗೆ ಹಬ್ಬ ಅಷ್ಟೆ. ಮೊದಲಿಗೆ, ಒಂದು ಅಲ್ಪಕಾಲೀನ ಕಾರ್ಯ, ಹೇಗೆ ಜನರಿಗೆ ತಕ್ಷಣಕ್ಕೆ ನೀರು ಕೊಡಬಹುದು, ಜೊತೆಗೆ ಶಾಶ್ವತ ಪರಿಹಾರಕ್ಕಾಗಿ ಯಾವ್ಯಾವ ಕ್ರಮ ಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಕೂಡ ಒಂದು ಯೋಜನೆ ಆಗಬೇಕು. ಅದಕ್ಕೆ ನಿಷ್ಠೆಯಿಂದ ದುಡ್ಡು ಖರ್ಚು ಮಾಡಲು ಹೊರಟರೆ, ಜನರಿಗೂ ಅದರಲ್ಲಿ ಕೆಲಸ ಕೊಡುವ ಮೂಲಕ ಹಳ್ಳಿಹಳ್ಳಿಗೆ ಗೋಕಟ್ಟೆ, ಚೆಕ್‌ಡ್ಯಾಂ, ಸಣ್ಣ ಕೆರೆ ಈ ತರಹ ಏನಾದರೂ ಮಾಡಿದರೆ 10 ವರ್ಷದಲ್ಲಿ ಈ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಆ ದಿಕ್ಕಿನಲ್ಲಿ ಕೂಡ ಸರ್ಕಾರ ಒಂದು ಯೋಜನಾಬದ್ಧ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಲ್ಲದಿದ್ದರೆ, ಅದು ಗಂಭೀರವಾಗುತ್ತದೆ. ನಮ್ಮ ಹಳ್ಳಿಗಾಡಿನಲ್ಲಿ ನಿಮಗೆ ಗೊತ್ತಿರುವಂತೆ ಈಗ ಜಾತ್ರೆ ಸಮಯ. ಅದೇ ತರಹ ಮದುವೆಗಳು. ಯಾವ ಹಳ್ಳಿಯಲ್ಲಿ ಕೂಡ ನೀರಿಲ್ಲ. ಅದಕ್ಕೇ ನೀರು ಸಿಗುವ ಕಡೆ ಮದುವೆ, ಜಾತ್ರೆಗಳು ನಡೆಯುತ್ತಿವೆ. ಜಾತ್ರೆಗಳು ನಮ್ಮ ಸಾಂಸ್ಕೃತಿಕ ಜೀವನದ ಒಂದು ಭಾಗ. ಆದರೆ ಅಲ್ಲಿ ಕುಡಿಯಲು ನೀರಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳನ್ನು ಕೇಳಿದರೆ, ಜಾತ್ರೆಗಳಿಗೆ ನೀರು ಕೊಡಲು ನಮಗೆ ಅಧಿಕಾರವಿಲ್ಲ, ಪಂಚಾಯ್ತಿಗಳನ್ನು ಕೇಳಿ ಎನ್ನುತ್ತಾರೆ. ಪಂಚಾಯ್ತಿಗಳನ್ನು ಕೇಳಿದರೆ, ಅವರ ಹತ್ತಿರ ಅಷ್ಟೊಂದು ದುಡ್ಡಿಲ್ಲ. ಜಾತ್ರೆಗಳಂತೂ ನಿಲ್ಲಿಸುವ ಹಾಗಿಲ್ಲ. ಮದುವೆಗಳು ಆಗಲೇಬೇಕು. ಅದಕ್ಕೆ ದುಡ್ಡು ಯಾರು ಕೊಡೋರು? ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಇನ್ನೊಂದು, ಕೆಲವು ಕಡೆ ನಾವು ಬೋರ್ ಕೊರೆದಾಗ ಫ್ಲೋರೈಡ್ ಸಿಗುತ್ತದೆ. ಸರ್ಕಾರದ ಹತ್ತಿರವೂ ಮಾಹಿತಿ ಇದೆ ಯಾವ್ಯಾವ ಭಾಗದಲ್ಲಿ ಈ ಫ್ಲೋರೈಡ್ ಇದೆ ಅಂತ. ಇದನ್ನು ಗಮನದಲ್ಲಿಟ್ಟುಕೊಂಡು ಅಲ್ಲಿಗೆ ಟ್ಯಾಂಕರ್‌ಗಳ ಮೂಲಕ ನೀರು ಒದಗಿಸಬೇಕು. ಈಗಾಗಲೇ ನನ್ನ ಕ್ಷೇತ್ರದ 10 ಗ್ರಾಮಗಳಿಗೆ ನೀರೊದಗಿಸುತ್ತಿದ್ದೇವೆ. ಬೇಸಿಗೆ ಮುಗಿಯುವುದರೊಳಗೆ ಇನ್ನೂ ಎಷ್ಟು ಹಳ್ಳಿಗಳಿಗೆ ಒದಗಿಸಬೇಕಾಗುತ್ತದೆ. ಅದಕ್ಕೆ ತಗಲುವ ದುಡ್ಡೆಷ್ಟು ಎಂಬುದು ನಮಗೆ ಗೊತ್ತಿದೆ. ಇದರಲ್ಲಿ ದುಡ್ಡಿನ ದುರುಪಯೋಗವಾಗುವುದೂ ಇದೆ. ಹಾಗಾಗಿ ಸಾಗಾಣಿಕೆ ಮಾಡುವುದು ಖಾಯಂ ಪರಿಹಾರವಲ್ಲ. ಇದಕ್ಕೊಂದು ಶಾಶ್ವತ ಪರಿಹಾರ ಕಂಡುಹಿಡಿಯಲು ಸರ್ಕಾರ

ಮುಂದಾಗದಿದ್ದರೆ ಮತ್ತೊಂದು ಪರಿಹಾರ ಇದಕ್ಕೆ ಸಾಧ್ಯವಿಲ್ಲ. ಸಿದ್ದರಾಮಯ್ಯನವರು ಹೇಳಿದಂತೆ ಯಾವ ಸಚಿವರೂ ಯಾವ ಹಳ್ಳಿಗೂ ಬಂದು ಜನ–ಅಧಿಕಾರಿಗಳ ಹತ್ತಿರ ಕುಡಿಯುವ ನೀರಿನ ಕುರಿತು ಮಾತನಾಡಿಲ್ಲ. ಅವರಿಗೆ ಸಮಯವೂ ಇಲ್ಲವೇನೋ. ಕ್ಷೇತ್ರಕ್ಕೆ ಹೋಗುವುದು, ಬೆಂಗಳೂರಿಗೆ ಬರುವುದು, ಮತ್ತೆ ಇಲ್ಲಿಂದ ಅಲ್ಲಿಗೆ – ಈ ತರಹ ಆಗಿಬಿಟ್ಟರೆ ಇವರೇನು ಬರೀ ಕ್ಷೇತ್ರದ ಮಂತ್ರಿಗಳಾಗಿದ್ದಾರೋ ಅಥವಾ ರಾಜ್ಯಕ್ಕೇ ಮಂತ್ರಿಗಳಾಗಿದ್ದಾರೋ ಎಂಬುದು ನಮಗೊಂದು ಒಗಟಾಗಿದೆ. ಮಂತ್ರಿಗಳಾದವರು ಜಿಲ್ಲೆಗೆ ಬರಬೇಕು, ಸ್ಥಳೀಯ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು. ಅದನ್ನು ಯಾವ ತರಹ ಪರಿಹಾರ ಮಾಡಬೇಕು ಅಂತ ಬಂದು ರಾಜ್ಯಸರ್ಕಾರದವರ ಜತೆ ಕುಳಿತು ಮಾತನಾಡಿ ಅದನ್ನು ಬಗೆಹರಿಸುವಂತಹ ಪ್ರಯತ್ನ ಒಬ್ಬ ಮಂತ್ರಿ ಕೂಡ ಇಲ್ಲೀವರೆಗೆ ಮಾಡಲಿಲ್ಲ. ಜಿಲ್ಲಾ ಸಚಿವರು ಕೂಡ ಎಲ್ಲಾ ತಾಲ್ಲೂಕುಗಳಿಗೂ ಪ್ರವಾಸ ಮಾಡುವ ಮೂಲಕ ಅಲ್ಲಿನ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಪ್ರಯತ್ನ ಸರ್ಕಾರದಲ್ಲಿ ಆಗುತ್ತಿಲ್ಲವೆಂದು ನಾನು ಹೇಳುತ್ತೇನೆ. ಒಂದು ವೇಳೆ ಕುಡಿಯುವ ನೀರಿಗೆ ದುಡ್ಡು ಕೊಟ್ಟು ಸಮರ್ಪಕವಾಗಿ ವ್ಯವಸ್ಥೆಯನ್ನು ಸರ್ಕಾರ ಮಾಡದೇ ಹೋದರೆ, ದಂಗೆ ಏಳುತ್ತದೆ. ಮೊನ್ನೆ ಸಿಪಿಎಂನವರು ಗುಲ್ಬರ್ಗಾದಲ್ಲಿ ಬಂದ್‌ಗೆ ಕರೆ ಕೊಟ್ಟಿದ್ದರು. ಗುಲ್ಬರ್ಗಾ ಬಂದ್ ಆಯಿತು. ಇನ್ನು ಹಳ್ಳಿ ಹಳ್ಳಿಯಲ್ಲೂ ಕೂಡ ರಸ್ತೆ ರೋಖೋ ನಡೆಯುತ್ತಿದೆ. ಹಳ್ಳಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಬಿಂದಿಗೆ ತೆಗೆದುಕೊಂಡು ಬೀದಿಗೆ ಬರುತ್ತಿದ್ದಾರೆ, ಪಂಚಾಯತಿಗಳಿಗೆ ಕೀಲಿ ಹಾಕುತ್ತಿದ್ದಾರೆ, ಶಾಸಕರುಗಳಿಗೆ ಘೇರಾವ್ ಮಾಡುತ್ತಿದ್ದಾರೆ. ಗಂಭೀರವಾದ law and order problem ಆಗುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಉದ್ಭವವಾಗುತ್ತದೆ. ಆಗ ಪೋಲೀಸರು ಬಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ಯಾವ ಪಂಚಾಯತಿ ಅಧಿಕಾರಿಗಳು ಬಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ಹಾಗಾಗಿ ಈ law and order problem ಕಡೆ ಸರ್ಕಾರ ತನ್ನ ಗಮನ ಹರಿಸಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಗಮನಿಸಬೇಕು ಮತ್ತು ಕ್ಷೇತ್ರಕ್ಕೆ ಒಂದು ಕ್ರಿಯಾ ಯೋಜನೆ ಮಾಡಿ ಕೇಳಿರುವ ಅಷ್ಟೂ ದುಡ್ಡನ್ನು ಸಂಪೂರ್ಣವಾಗಿ ಕೊಡಬೇಕು. ಕೊಡದೇ ಹೋದರೆ, ಮಾನ್ಯ ಅಧ್ಯಕ್ಷರೆ, ಇವತ್ತು ಅಧಿವೇಶನದ ಕೊನೆಯ ದಿವಸವಾಗಿದೆ. ನಾಳೆ ಬೀದಿಗೆ ಬಂದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಉಗ್ರ ಹೋರಾಟ ಮಾಡಬೇಕಾಗುತ್ತದೆ. ಈ ರೀತಿ ಮಾಡದೇ ಹೋದರೆ, ಜನರಿಗೆ ಉತ್ತರ ಕೊಡುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಈ ಹೋರಾಟಗಳು, ಚಳವಳಿಗಳು,

ಪಂಚಾಯತಿಗಳಿಗೆ ಕೀಲಿ ಹಾಕುವುದು, ಶಾಸಕರುಗಳಿಗೆ, ಅಧಿಕಾರಿಗಳಿಗೆ ಘೇರಾವ್ ಮಾಡುವುದನ್ನು ತಪ್ಪಿಸಬೇಕಾಗಿದ್ದರೆ, ಅದಕ್ಕೆ ಬೇಕಾದಷ್ಟು ದುಡ್ಡನ್ನು ದಯಮಾಡಿ ಕೊಡಬೇಕು. ಕೊಡದೇ ಹೋದರೆ ನಾವು ಬೀದಿಗೆ ಬಂದು, ಹೋರಾಟ ಮಾಡಬೇಕಾಗುತ್ತದೆಂಬ ಎಚ್ಚರಿಕೆಯ ಮಾತನ್ನು ಕೊಟ್ಟು, ಇಷ್ಟು ಹೊತ್ತು ನನಗೆ ನಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ನಂಜಾಮರಿ (ತಿಪಟೂರು) :– ಮಾನ್ಯ ಅಧ್ಯಕ್ಷರೆ, ನನ್ನ ತಿಪಟೂರು ಕ್ಷೇತ್ರದಲ್ಲಿನ ಕುಡಿಯುವ ನೀರು ಮತ್ತು ಬರಗಾಲದ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಮ್ಮ ತಿಪಟೂರು ಕ್ಷೇತ್ರವೆಂದರೆ, ಅದು ಹೇಮಾವತಿ ನೀರು ಬರುತ್ತಿರುವ ಜಾಗವಾಗಿದೆ. ಮೊದಲನೆಯದಾಗಿ, ತುಮಕೂರು ಜಿಲ್ಲೆ. ಆ ಜಾಗದಲ್ಲಿ ಏನಾಗಿದೆಯೆಂದರೆ, ಸುಮಾರು 3–4 ವರ್ಷಗಳಿಂದ ಮಳೆಯಾಗದ ಕಾರಣಗಳಿಂದಾಗಿ ಇವತ್ತು ತಿಪಟೂರು ಕ್ಷೇತ್ರವೆಂದರೆ, 'ಕಲ್ಪತರು ನಾಡು' ಎಂದು ಇಡೀ ರಾಜ್ಯದಲ್ಲಿ, ಇಡೀ ಭಾರತ ದೇಶದಲ್ಲೇ ಹೆಸರುವಾಸಿಯಾಗಿರುವ ಕ್ಷೇತ್ರವಾಗಿದೆ. ಆ ಜಾಗದಲ್ಲಿ ಇವತ್ತು ಏನಾಗಿದೆಯೆಂದರೆ, ಯಾರಾದರೂ ಬಂದರೆ, ತೋಟಕ್ಕೆ ಹೋಗಿ ಒಂದು ಎಳನೀರು ಕುಡಿಸುವುದಕ್ಕೆ ಎಳನೀರೂ ಇಲ್ಲದಂತಾಗಿದೆ! ತೆಂಗಿನಕಾಯಿ ಬಗ್ಗೆ ಹೇಳುವುದಾದರೆ, ಬೇರೆ ಕಡೆಗಳಲ್ಲಿಯೂ ತಿಪಟೂರು ತೆಂಗಿನಕಾಯಿ ಎಂದರೆ, ಬಹಳ ಹೆಸರುವಾಸಿಯಾಗಿದೆ. ಇವತ್ತು ಯಾವುದೇ ಕೆರೆಗಳು ತುಂಬದೇ, ಬೋರ್‌ವೆಲ್‌ಗಳೆಲ್ಲವೂ ಸಂಪೂರ್ಣ ಬತ್ತಿಹೋಗಿರುವುದರಿಂದ, ಒಂದು ತಿಂಗಳಿನಿಂದ ಕುಡಿಯುವುದಕ್ಕೂ ಸಹ ನೀರಿಲ್ಲದಂತಾಗಿದೆ. ಅಲ್ಲಿ ಎರಡು ಹೋಬಳಿಗಳಿವೆ. ಹೊನ್ನವಳ್ಳಿ ಮತ್ತು ಕಸಬಾ ಹೋಬಳಿ. ಒಂದು ನೂರು ಹಳ್ಳಿಗಳಿಗೂ ಮೇಲ್ಪಟ್ಟು ಇರುವ ಕ್ಷೇತ್ರಕ್ಕೆ, ಸುಮಾರು 50 ಹಳ್ಳಿಗಳಿಗೆ ಶಿವರಾತ್ರಿ ಹಬ್ಬದಿಂದ ನಾವು ಟ್ಯಾಂಕರ್‌ನಲ್ಲಿ ಗ್ರಾಮ ಮತ್ತು ತಾಲ್ಲೂಕು ಪಂಚಾಯತಿ ಮೂಲಕ ನೀರನ್ನು ಪೂರೈಸುತ್ತಿದ್ದೇವೆ. ನಿನ್ನೆ ಸಹ ಒಂದು ಊರಿನಲ್ಲಿ ಆರು ಬೋರ್‌ಗಳನ್ನು ಕೊರೆದಿದ್ದೇವೆ. ಇವತ್ತು 700ರಿಂದ 850 ಅಡಿಗಳವರೆಗೆ ಬೋರ್ ಕೊರೆದರೂ ನೀರು ಬರಲಿಲ್ಲ. ಆ ಊರಿಗೆ ಪ್ರತಿನಿತ್ಯವೂ ಹತ್ತು ಟ್ಯಾಂಕರುಗಳಲ್ಲಿ ನೀರು ಪೂರೈಸಿದರೂ, ಅದು ದೊಡ್ಡ ಊರಾಗಿದೆ. ಒಂದೊಂದು ಮನೆಗೆ ಐದು ಬಿಂದಿಗೆಯಷ್ಟು ನೀರು ಕೊಡುತ್ತಿದ್ದೇವೆ. ಅಧ್ಯಕ್ಷರೆ, ನಾವು ಎಷ್ಟರ ಮಟ್ಟಿಗೆ ಶಾಸಕರಾಗಿರಬೇಕು? ನೀವೇ ಹೇಳಿ. ಇವತ್ತು ಎರಡು ಹೋಬಳಿಗಳಲ್ಲಿ ಸಂಪೂರ್ಣ ನೀರಿಲ್ಲದೇ 1,000 ಅಡಿ ಆಳದವರೆಗೆ ಕೊರೆದರೂ ಸಹ ನೀರು

ಸಿಗುತ್ತಿಲ್ಲ. ಅದಕ್ಕೋಸ್ಕರ ಸರ್ಕಾರ ಇವತ್ತು ಕುಡಿಯುವ ನೀರಿಗೋಸ್ಕರ ಹಣ ಒದಗಿಸಿಕೊಟ್ಟು ನೀರು ಸಿಗುವ ಬಾವಿಗಳು ದೂರದಲ್ಲಿರಬಹುದು, ಒಂದು ಊರಿಗೆ 1 ಕಿಲೋಮೀಟರ್ ಇರಬಹುದು, 2 ಕಿಲೋಮೀಟರ್‌ಗಳಷ್ಟು ದೂರದಲ್ಲಿ ಸಿಗಬಹುದು. ಯಾವುದೇ ಜಾಗದಲ್ಲಿ ಸಿಕ್ಕಿದರೂ ಸಹ ನಮ್ಮ ತಾಲ್ಲೂಕಿನಲ್ಲಿ ನೀರು ಕೊಡದಿರುವ ಗ್ರಾಮಗಳಿಗೆ ನೀರು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇವತ್ತು ಹೇಮಾವತಿ ಹರಿಯುವ ಜಾಗದ ಪಕ್ಕದಲ್ಲಿ 80ರಿಂದ 100 ಅಡಿಗಳಷ್ಟು ಆಳಕ್ಕೆ ಹೋಗಿದೆ. ನೀರು ಬರತಕ್ಕಂಥ ಕೆಲವು ಭಾಗಗಳಲ್ಲಿ ಸಹ ಹೇಮಾವತಿಯು ಕಾವೇರಿ ಬೇಸಿನ್‌ಗೆ ಸೇರಿದ ನಂತರವೂ ನೀರನ್ನು ಕೊಡುತ್ತಿಲ್ಲ. ಹೇಮಾವತಿ ನಾಲೆಯಿಂದ ನೀರು ಕೊಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ಮಾರ್ಚ್ 13ನೇ ತಾರೀಖು, ನೀರಾವರಿ ಮಂತ್ರಿಗಳಾದ ಈಶ್ವರಪ್ಪನವರು ನಮ್ಮ ತಾಲ್ಲೂಕಿಗೆ ಬಂದು ದೊಡ್ಡದೊಂದು ಸಭೆ ನಡೆಸಿದರು. ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅವರ ಇಲಾಖೆಗೆ ಸೇರಿರುವ ಇನ್ನಿತರ ಎಲ್ಲಾ ಅಧಿಕಾರಿಗಳನ್ನು ಕರೆದುಕೊಂಡು ಬಂದು, ಒಂದು ಸಭೆ ನಡೆಸಿ, ನಾವು ಏತ ನೀರಾವರಿ ಮುಖಾಂತರ ನೀರನ್ನು ಒದಗಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಅದನ್ನು ಇವತ್ತು ಸರ್ಕಾರ ತುರ್ತಾಗಿ ಮಾಡಬೇಕಾಗಿದೆ. ಈಗ ಸರ್ವೆ ಮಾಡುತ್ತೇವೆಂದು ಅದಕ್ಕೆ ಒಂದೆರಡು ವರ್ಷ ತೆಗೆದುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕೆ ಹಣ ಕೊಟ್ಟು ಈಗಲೇ ತುರ್ತಾಗಿ ಅಂದರೆ, ಈ ವರ್ಷದಲ್ಲಿ 3 ತಿಂಗಳು, 6 ತಿಂಗಳೊಳಗೆ ನೀರನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರದ ಮೇಲೆ ನಾನು ಒತ್ತಡ ತರುತ್ತಿದ್ದೇನೆ. ಇದಲ್ಲದೇ, ಇನ್ನೊಂದು ವಿಷಯ. ತಿಪಟೂರು ಬಗ್ಗೆ ಈ ಮೊದಲೇ ಹೇಳಿದಂತೆ, ಇಡೀ ರಾಜ್ಯದಲ್ಲೇ ಹೆಸರಾಗಿದೆ. ಇಡೀ ಭಾರತ ದೇಶದಲ್ಲಿ ಎಲ್ಲೆಲ್ಲಿಗೆ ಕೊಬ್ಬರಿ ಹೋಗುತ್ತದೋ, ಅಲ್ಲೆಲ್ಲಾ ತಿಪಟೂರು ಹೆಸರಾಗಿದೆ. ಇವತ್ತು ಅದು ನಗರಸಭೆಯಾಗಿದೆ. ಅಲ್ಲಿ 70,000ಕ್ಕಿಂತಲೂ ಕಡಿಮೆ ಜನರಿಲ್ಲ. ಅಲ್ಲಿಗೆ ಸುತ್ತಮುತ್ತಲಿರುವ 12 ಜಿಲ್ಲೆಗಳಿಂದ ಕಾಯಿ, ಕೊಬ್ಬರಿಗಳಿಗಾಗಿ ಬರುತ್ತಿದ್ದಾರೆ. ವಾಹನಗಳು ಅಲ್ಲಿಗೆ ಬರುತ್ತವೆ. ಅಧ್ಯಕ್ಷರೆ, ಅಲ್ಲಿನ ಜನ ಸಂದಣಿ ಎಷ್ಟಾಗಿದೆಯೆಂದರೆ, ಇವತ್ತು ಬೆಂಗಳೂರಿನಲ್ಲಿ ಏಕಮುಖ ರಸ್ತೆಯಾದರೂ ಓಡಾಡಬಹುದು. ಆದರೆ, ನಮ್ಮ ತಿಪಟೂರಿನಲ್ಲಿ ಖಂಡಿತವಾಗಿಯೂ ಓಡಾಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ಕಡೆ ಗಮನ ಹರಿಸಬೇಕು. ತಿಪಟೂರಿನಲ್ಲಿ ಕಳೆದ 8 ವರ್ಷಗಳಲ್ಲಾಗಿರುವ ಅಪಘಾತಗಳನ್ನು, ಸಾವುಗಳನ್ನು ನಾನು ಹೇಳುತ್ತಿದ್ದೇನೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು

ಹೇಳುತ್ತೇನೆ. ನಾನು ಮಾಹಿತಿಗಳನ್ನು ಪೋಲೀಸ್ ಇಲಾಖೆಯಿಂದ ತೆಗೆದುಕೊಂಡಿದ್ದೇನೆ. ಅಪಘಾತಗಳು ಮತ್ತು ಸಾವುಗಳು. 1997ರಾಲ್ಲಿ 38 ಅಪಘಾತಗಳು, 3 ಸಾವು, 1998ರಲ್ಲಿ 28 ಅಪಘಾತಗಳು, 3 ಸಾವು, 1999ರಲ್ಲಿ 17 ಅಪಘಾತಗಳು, 4 ಸಾವು, 2000ದಲ್ಲಿ 18 ಅಪಘಾತಗಳು, 8 ಸಾವು, 2001ರಲ್ಲಿ 21 ಅಪಘಾತಗಳು, 3 ಸಾವು, 2002ರಲ್ಲಿ 21 ಅಪಘಾತಗಳು, 7 ಸಾವು, 2003ರಲ್ಲಿ 24 ಅಪಘಾತಗಳು, 3 ಸಾವು.

ಛೇರ್ಮನ್ :– ನಂಜಾಮರಿಯವರೆ, ತಾವು ಬರಗಾಲದ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ.

ಶ್ರೀ ಬಿ. ನಂಜಾಮರಿ :– ಇದನ್ನೂ ಹೇಳಬೇಕು, ಸ್ವಾಮೀ. ಬರಕ್ಕೆ ಒಂದು ಸಲ, ಇದಕ್ಕೊಂದು ಸಲ ಮಾತನಾಡಲು ಅವಕಾಶ ಕೊಡುತ್ತೀರಾ? ನಮಗೆ ಯಾವುದೇ ಒಂದು ಸಮಯ ನಿಗದಿಪಡಿಸಿರುತ್ತೀರಿ. ಯಾವತ್ತೋ ಒಂದು ದಿವಸ session ಮುಗಿಯುವ ದಿವಸ ಒಂದು ನಿಮಿಷ ಕೊಡುತ್ತೀರಿ. ಇವೆಲ್ಲವನ್ನೂ ನಾವು ಮಾತನಾಡಬೇಕು. 2004ರಲ್ಲಿ 46 ಅಪಘಾತಗಳು, 7 ಸಾವು, 2005ರಲ್ಲಿ 37 ಅಪಘಾತಗಳು, 6 ಸಾವು, 2006ರಲ್ಲಿ 51 ಅಪಘಾತಗಳು, 8 ಸಾವು, 2007ರಲ್ಲಿ ಇಲ್ಲಿಯವರೆಗೆ 24 ಅಪಘಾತಗಳು ಮತ್ತು 2 ಸಾವು ಸಂಭವಿಸಿರುತ್ತದೆ. ಈ ಹಿನ್ನೆಲೆಯಲ್ಲಿ ರಸ್ತೆ ಅಗಲೀಕರಣ ಮಾಡಬೇಕೆಂದು ಪದೇ ಪದೇ ಕೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಅಗಲೀಕರಣವಾಗಿದೆ. ಇಡೀ ಭಾರತ ದೇಶದಲ್ಲಿ ಅಗಲೀಕರಣವಾಗಿದೆ. ಆದರೆ, ಈ ತಾಲ್ಲೂಕಿನಲ್ಲಿ ರಸ್ತೆ ಅಗಲೀಕರಣವಾಗಿಲ್ಲ. ಇದರತ್ತ ಸರ್ಕಾರ ತನ್ನ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಇಲ್ಲಿ ದಿನವೂ ಕಬ್ಬಿಣದ ಅದಿರು ಹೋಗುತ್ತಿರುತ್ತದೆ. ಸಾವಿರಾರು ಲಾರಿಗಳು ಹೋಗುತ್ತವೆ. ಆದಕಾರಣ, ಸರ್ಕಾರ ಅಲ್ಲಿನ ರಸ್ತೆಯನ್ನು ಅಗಲೀಕರಣ ಮಾಡಬೇಕೆಂದು ಹೇಳುತ್ತಾ, ಸರ್ಕಾರದ ಮೇಲೆ ನಾನು ಒತ್ತಡ ತರುತ್ತಾ, ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ):– ಮಾನ್ಯ ಅಧ್ಯಕ್ಷರೆ, ಬರ ಪರಿಹಾರಕ್ಕೂ ಬೆಂಗಳೂರಿಗೂ ಏನು ಸಂಬಂಧವೆಂದು ಕೆಲವು ಸ್ನೇಹಿತರು ಆಗಲೇ ಕೇಳುತ್ತಿದ್ದರು. ಬೆಂಗಳೂರಿಗೂ, ಬರಕ್ಕೂ, ನಿಮಗೂ ಏನು ಸಂಬಂಧವೆಂದು ಕೇಳುತ್ತಿದ್ದರು. ಎಲ್ಲಿಯೇ ಬಾ ಆದರೂ ಹೊರೆಯಾಗುವುದೇ ಬೆಂಗಳೂರಿಗೆ. ಇವತ್ತು

ಬೆಂಗಳೂರಿನ ಸ್ಥಿತಿ ಏನಾಗಿದೆಯೆಂದರೆ, ಸಮುದ್ರಕ್ಕೆ ನಂಟು ಉಪ್ಪಿಗೆ ಬರ ಎಂಬಂತಾಗಿದೆ. ಬೆಂಗಳೂರು ನಗರದಲ್ಲಿ ಬಹುಷ ಪ್ರತಿ ವರ್ಷ ಕುಡಿಯುವ ನೀರಿಗೆ ಬರವನ್ನು ಎದುರಿಸುತ್ತಿದ್ದೇವೆ. ಬೆಂಗಳೂರು ನಗರವನ್ನು ನಾವು ಯಾವತ್ತೂ ಬೆಳೆಸಬೇಕು, ಬೆಳೆಸಬೇಕೆಂದು ಹೇಳಿ ಇವತ್ತು ಬೃಹತ್ ಬೆಂಗಳೂರು ಮಾಡುವುದಕ್ಕೆ ಹೊರಟಿದ್ದೇವೆ. ತನ್ಮೂಲಕ ಬೃಹತ್ ಸಮಸ್ಯೆಗಳನ್ನು ಸೃಷ್ಟಿಸಿದ್ದೇವೆ. ಬೆಂಗಳೂರು ನಗರಕ್ಕೆ ಮೂಲವಾಗಿದ್ದ ತಿಪ್ಪಗೊಂಡನಹಳ್ಳಿ, ಹೆಸರಘಟ್ಟ ಮತ್ತು ಕಾವೇರಿ ಸೆಲೆಗಳಿಂದ ಬರುತ್ತಿದ್ದ ನೀರು ಇವತ್ತು ಸಂಪೂರ್ಣವಾಗಿ ಸಾಕಾಗುತ್ತಿಲ್ಲ. ಆಗಲೇ ಮಾತನಾಡಿದ ಕೆಲವರು ಬಹಳ ಉತ್ತಮವಾದ ಸಲಹೆ ಕೊಟ್ಟರು. ಈ ರಾಷ್ಟ್ರದಲ್ಲಿ ಕಳೆದ ನೂರು ವರ್ಷಗಳಿಂದಲೂ "ಬರ, ಬರ" ಎಂದು ಚರ್ಚೆ ಮಾಡುತ್ತಿದ್ದೇವೆ. ಶೇಕಡ 60 ಭಾಗದಷ್ಟು 'ಬರ'ವೇ ಇದೆ. ಆದರೆ, ಯುದ್ಧಕಾಲೇ ಶಸ್ತ್ರಾಭ್ಯಾಸ ಮಾಡುವುದನ್ನು ಬಿಟ್ಟು, ಇವತ್ತು ಶಾಶ್ವತವಾದ ನೆಲೆಗಟ್ಟು ಒದಗಿಸುವುದಕ್ಕೆ ಒಂದು ಚಿಂತನೆ ಮಾಡತಕ್ಕಂಥ ಪ್ರಯತ್ನ ಏಕೆ ಆಗಿಲ್ಲ ಎನ್ನುವಂತಹ ಪ್ರಶ್ನೆಯನ್ನು ನಾನು ತಮ್ಮ ಮುಂದಿಡುತ್ತೇನೆ. ಇವತ್ತು ಒಂದು emergency measures ತೆಗೆದುಕೊಳ್ಳಬೇಕು ಮತ್ತು ಬರ ನಿಯಂತ್ರಿಸುವುದಕ್ಕೆ ಶಾಶ್ವತವಾದ ಚಿಂತನೆಯಾಗಬೇಕೆಂದು ಮನವಿಯನ್ನು ತಮ್ಮ ಮುಖೇನ ಸರ್ಕಾರದ ಮುಂದಿಡುತ್ತಿದ್ದೇನೆ. ಏಕೆಂದರೆ, ನೀರು ಮೂಲಭೂತವಾಗಿ ಬದುಕಿಗೆ ತೀರಾ ಅವಶ್ಯಕವಾಗಿರುವಂಥಾದ್ದು. ಭೂಮಿಯಲ್ಲಿ ನಾಲ್ಕನೇ ಮೂರು ಭಾಗದಷ್ಟು ನೀರು ಇದ್ದರೂ ಶೇಕಡ ಎರಡರಷ್ಟು ಮಾತ್ರ ಕುಡಿಯುವುದಕ್ಕೆ ಅರ್ಹತೆ ಇರತಕ್ಕಂಥಾದ್ದು, ಯೋಗ್ಯತೆ ಇರತಕ್ಕಂಥಾದ್ದು. ಅಂತಹ ನೀರನ್ನು, ಅದು ಮಳೆ ಸ್ವರೂಪದಿಂದಿರಬಹುದು ಅಥವಾ ಕುಡಿಯುವುದಕ್ಕೆ ಅರ್ಹತೆ ಇರತಕ್ಕಂಥ ಬೇರೆ ಮೂಲಗಳಿಂದ ಬರತಕ್ಕಂಥ ನೀರನ್ನು ನಾವು conserve ಮಾಡುವುದರಲ್ಲಿ ಬಹುಶಃ ಬಹಳಷ್ಟು ವಿಫಲವಾಗುತ್ತಿದ್ದೇವೆ. ವಿಶೇಷವಾಗಿ, ಕರ್ನಾಟಕದಲ್ಲಿ ಬೆಂಗಳೂರು ನಗರದಲ್ಲಿ ವಿಶೇಷವಾಗಿ ವಿಫಲರಾಗುತ್ತಿದ್ದೇವೆ. Act ಗಳನ್ನು ಮಾಡುತ್ತೇವೆ, Bye-law ಗಳನ್ನು ಮಾಡುತ್ತೇವೆ, Building bye-law ಗಳನ್ನು ಮಾಡುತ್ತೇವೆ, ಆದರೆ ಅದರ enforcement ನಲ್ಲಿ ವಿಫಲರಾಗುತ್ತಿದ್ದೇವೆ. ಬೆಂಗಳೂರು ನಗರದಲ್ಲಿ ನಿನ್ನೆ ಮತ್ತು ಮೊನ್ನೆ ರಾತ್ರಿ ಎರಡಿ ದಿವಸ ಮಳೆ ಬಂತು. ಆ ರೀತಿ ಬಂದಿರತಕ್ಕಂಥ ನೀರನ್ನು ನಾವು ಎಲ್ಲಿ ಶೇಖರಣೆ ಮಾಡಿಕೊಂಡಿದ್ದೇವೆ? ಮೊದಲು ಬೆಂಗಳೂರು ನಗರದಲ್ಲಿ ಬಿದ್ದಂಥ ಮಳೆಯ ನೀರು 270 ಕೆರೆಗಳಲ್ಲಿ ಶೇಖರವಾಗುತ್ತಿತ್ತು. ಅಂತರ್ಜಲ automatically recharge ಆಗುತ್ತಿತ್ತು.

ಇವತ್ತು ಆ ಸ್ಥಿತಿಯಲ್ಲಿ ಇಲ್ಲ. ಮನೆಗಳ ಮೇಲೆ ಬಿದ್ದಂತಹ ನೀರು, ಹೊಂಡಗಳ ಮೇಲೆ ಬಿದ್ದು overflow ಆಗಿ flood ಆಗುತ್ತಿರತಕ್ಕಂಥಾದ್ದು ಇದೆ. ದಯವಿಟ್ಟು ನಾನು ಈ ಸಂದರ್ಭದಲ್ಲಿ ನಿಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಬೆಂಗಳೂರು ನಗರದಲ್ಲಿ ವಿಶೇಷವಾಗಿ ಬೇಸಿಗೆ ಬಂದಾಗ, ನಮಗೆ ಬಹಳ ಕಷ್ಟವಾಗುತ್ತದೆ, ಅದನ್ನು ಪರಿಹರಿಸಬೇಕು. ತಿಪ್ಪಗೊಂಡನಹಳ್ಳಿಯಲ್ಲಿ ನೀರಿನ ಸಂಗ್ರಹ ಸಂಪೂರ್ಣವಾಗಿ ಕಡಿಮೆಯಾಗಿದೆ. ಅಲ್ಲಿ ಸುಮಾರು 14–18 ಅಡಿಗಳಷ್ಟು ನೀರು ಮಾತ್ರ ಇದೆ. ಈಗ ಏನಾದರೂ ಅದನ್ನು ಪಂಪ್ ಮಾಡಲಿಕ್ಕೆ ಹೋದರೆ, ಹುಳ ಅಥವಾ ಹೂಳು ಬರುತ್ತದೆ. ಇವತ್ತು ಅದಕ್ಕೆ ಅವಕಾಶ ಕೊಡದಂತೆ, ಈ ಸಮಸ್ಯೆ ಬಗೆಹರಿಸಬೇಕು. ನಮ್ಮಲ್ಲಿರುವ 'ಮೇಕೆದಾಟು' ಸ್ಥಳದಲ್ಲಿ ಡ್ಯಾಂ ಕಟ್ಟಬೇಕು ಎನ್ನತಕ್ಕಂಥ ಪ್ರಸ್ತಾವನೆ ಹಿಂದೆ ಇತ್ತು. ದಯವಿಟ್ಟು ಅದನ್ನು ಸರ್ಕಾರ ತುರ್ತಾಗಿ ತೆಗೆದುಕೊಳ್ಳಬೇಕು. ಮೇಕೆದಾಟು ನಗರಕ್ಕೆ ಸುಮಾರು 150 ಕಿ.ಮೀ. ದುರವಿದೆ. ಈಗೇನು ನಾವು ನೀರನ್ನು ಡ್ರಾ ಮಾಡುತ್ತಿದ್ದೇವೆ, ಅದಕ್ಕಿಂತ ಇದು ಹತ್ತಿರವಾಗಿದೆ. ಎರಡನೆಯದಾಗಿ, ಒಂದು ಸಲಹೆ ಕೊಡುವುದೇನೆಂದರೆ, ಮುಂಬರುವ ಮಳೆಗಳಲ್ಲಿ ಬಹುಶಃ ಹೇಮಾವತಿ overflow ಆಗಬಹುದು. ಅದು ಈಗಾಗಲೇ ತುಮಕೂರಿನವರೆಗೂ ಬಂದಿದೆ, ಅಲ್ಲಿಂದ ಹೇಮಾವತಿಯ ಕೇವಲ 3 ಟಿಎಂಸಿ ನೀರನ್ನು ತಿಪ್ಪಗೊಂಡನಹಳ್ಳಿಗೆ ಪಂಪ್ ಮಾಡಿಕೊಂಡು, ಹೆಸರಘಟ್ಟಕ್ಕೂ ಅದನ್ನು ತೆಗೆದುಕೊಂಡು ಹೋಗುವುದಾದರೆ, ಬೆಂಗಳೂರು ನಗರದಲ್ಲಿ ಬೇಸಿಗೆ ಕಾಲದಲ್ಲಿ ಈ ಬರ ಮತ್ತು ಬರದಿಂದ ಆಗತಕ್ಕಂಥ ತೊಂದರೆ ನಿವಾರಣೆಯಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಾನ್ಯ ಕೃಷ್ಣ ಭೈರೇಗೌಡರು ಹಾಗೂ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ದಯವಿಟ್ಟು ಪರಮಶಿವಯ್ಯನವರ ವರದಿಯನ್ನು ಜಾರಿಗೆ ತರಬೇಕು. ಅದು ಏಕೆ ಇವತ್ತು cold storageಗೆ ಹೋಗಿದೆಯೋ ಗೊತ್ತಿಲ್ಲ. ಅದನ್ನು ಕಾರ್ಯಾನುಷ್ಠಾನ ಮಾಡಲಿಕ್ಕೆ political will ಅನ್ನು ಸರ್ಕಾರ ತೋರಿಸುತ್ತಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಬಹುಶಃ ಶಾಶ್ವತವಾದ ಯಾವ ಯೋಜನೆಯನ್ನೂ ಕೂಡ ಯಾವುದೇ ಬಜೆಟ್‌ನಲ್ಲೂ ನಾವು ಕಾಣುವುದಿಲ್ಲ. ಕೇವಲ ಅದನ್ನು ಸರ್ವೇ ಮಾಡಲಿಕ್ಕೆ ಬೇಕಾಗಿರುವಂಥ ಹಣವನ್ನು ಒದಗಿಸುವುದರಲ್ಲಿಯೂ ನಾವು ವಿಫಲರಾಗುತ್ತಿದ್ದೇವೆ. ಬಹುಶಃ ಇವತ್ತು Chief Secretaryಯವರು ಇಲ್ಲಿ ಇಲ್ಲ. ಇವತ್ತು Chief Secretaryಯವರು ಸಭೆಗಳಲ್ಲಿ ಏಕೆ ಇರಬೇಕು ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತೇನೆ. ಸದನದಲ್ಲಿ ಸಂಬಂಧಪಟ್ಟಂತಹ ಸಚಿವರಿಲ್ಲ, ಬೆಂಗಳೂರು ನಗರದ ಉಸ್ತುವಾರಿ ಹೊತ್ತಿರತಕ್ಕಂಥ ಮುಖ್ಯಮಂತ್ರಿಗಳಿಲ್ಲ, Finance Minister ಇಲ್ಲ. ಯಾರೂ ಇಲ್ಲ...

ಛೇರ್ಮನ್ :– ಮಾನ್ಯ ನರೇಂದ್ರಬಾಬುರವರೆ, ದಯವಿಟ್ಟು ಬೇಗ ಮುಗಿಸಿ.

ಶ್ರೀ ನೆ.ಲ. ನರೇಂದ್ರಬಾಬು :– ದಯವಿಟ್ಟು ಇಂತಹ ಒಂದು ಶಾಶ್ವತವಾದ ಅವ್ಯವಸ್ಥೆಯ ಬಗ್ಗೆ ಚಿಂತನೆಯಾಗಬೇಕು. ಇನ್ನು ವಿದ್ಯುತ್ತಿನ ಬಗ್ಗೆ ಹೇಳುವುದಾದರೆ, uninterrupted power supply ಆಗಬೇಕು. ಮಾನ್ಯ ವಿದ್ಯುತ್ ಸಚಿವರು ಈಗ ತಾನೇ ಇದ್ದರು, ಈಗ ಕಾಣುತ್ತಿಲ್ಲ. ಟಿ.ಜಿ. ಹಳ್ಳಿಯಲ್ಲಿ ಯಾವಾಗಲೂ ಪವರ್ ಪ್ರಾಬ್ಲಂ ಇರುವುದರಿಂದ ಅಲ್ಲಿ ನೀರನ್ನು ಪಂಪ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ತೊರೆಕಾಡನಹಳ್ಳಿಯಲ್ಲಿ ಪವರ್ ಸಪ್ಲೈ ಇಲ್ಲ. uninterrupted power supply ಅನ್ನು ಕುಡಿಯುವ ನೀರಿನ ವ್ಯವಸ್ಥೆಗೆ ಕೊಡಿಸಬೇಕು. ಒಂದು ದಿವಸ power shut down ಆದರೆ ಬೆಂಗಳೂರು ನಗರದಲ್ಲಿ ತೊಂದರೆಯಾಗುತ್ತದೆ. ಅದು ಇಲ್ಲಿ ಕುಳಿತಿರತಕ್ಕಂಥ ಅಧಿಕಾರಿಗಳಿಗೆ ಗೊತ್ತು. ಬೆಳಿಗ್ಗೆಯಿಂದ NHO's quartersನಲ್ಲಿ ನೀರು ಬಂದಿಲ್ಲ, 6th blockನಲ್ಲಿ ನೀರು ಬಂದಿಲ್ಲ, ಮತ್ತೊಂದು ಕಡೆ ಬಂದಿಲ್ಲವೆಂದು ದೂರುಗಳನ್ನು ನಾನು ಕೇಳಿದ್ದೆ. ಉನ್ನತ ಅಧಿಕಾರಿಗಳ ಮನೆಗಳಿಗೆ ಹೇಗೋ ನೀರು ಬರಬಹುದು. ಬೆಂಗಳೂರು ನಗರದಲ್ಲಿಯ ಮಧ್ಯಮವರ್ಗದ ಮನೆಗಳಿಗೆ ನೀರು ಸಿಗುವುದು ಕಷ್ಟ. ನಮಗೆ ಬೇರೆ ಇನ್ನ್ಯಾವುದೇ ನೀರಿನ source ಇಲ್ಲ. ನಮಗೆ open wellಗಳಲ್ಲಿ ನೀರು ಸಿಗುವುದಿಲ್ಲ. Mini water supplyಗಳಲ್ಲಿ ನೀರನ್ನು ಪಂಪ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಜಲಮಂಡಳಿ ಸುಮ್ಮರು ದಿವಸಗಳಿಂದ ವಿದ್ಯುತ್ ಬಿಲ್ ಕಟ್ಟಿಲ್ಲ. ಅದನ್ನು Bangalore City Corporationನವರು ಕಟ್ಟಲಿ ಎಂದು ಅವರು ಹೇಳುತ್ತಾರೆ. ಆದರೆ, ಅವರು ನಮಗೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಾರೆ. Water supplyನವರು ಇದು ನಮಗೆ ಸಂಬಂಧಪಡುವುದಿಲ್ಲ ಎನ್ನುತ್ತಾರೆ. ಅದಕ್ಕಾಗಿಯೇ ನಾನು ಅವತ್ತೇ ತುರ್ತಾಗಿ ಸಭೆಯೊಂದನ್ನು ಕರೆಯಿರಿ ಎಂದು ಹೇಳಿದ್ದೆ. ಇಲ್ಲಿ ಕುಳಿತುಕೊಂಡಿರುವಂತಹ ಮಾನ್ಯ ಸೋಮಣ್ಣನವರು ಸಚಿವರಾಗಿದ್ದರು. ಅವರು ಇದ್ದಾಗ ಬೇಸಿಗೆಗೆ ಮುಂಚಿತವಾಗಿ ಬೆಂಗಳೂರು ನಗರದ ಶಾಸಕರ ಸಭೆ ಕರೆದು, ಏನೇನು ಸಮಸ್ಯೆಗಳಿವೆ ಎಂದು ಕೇಳುತ್ತಿದ್ದರು. ಇವತ್ತು ಅಂತಹ ಯಾವುದೇ ವ್ಯವಸ್ಥೆ ಇಲ್ಲ. ಏಕೆ? ಏನಾಗಿದೆ? ಇಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ ಎಂದು ಆ ರೀತಿ ಮಾಡಲಾಗುತ್ತಿದೆಯೇ? ದಯವಿಟ್ಟು ತಮ್ಮ ಮುಖೇನ ಕೇಳುತ್ತೇನೆ. ಈ ಒಂದು political will ಏಕಿಲ್ಲ? ನಾವು ಯಾರಿಗೆ ಹೇಳಿಕೊಳ್ಳೋಣ? ಬೆಂಗಳೂರು ಮಹಾನಗರ ಪಾಲಿಕೆ ಇವತ್ತು ಅಸ್ತಿತ್ವದಲ್ಲಿಲ್ಲ. ಅದರ ಬಜೆಟ್ ಮಾಡುವ ಮುನ್ನ

ಬೆಂಗಳೂರು ಶಾಸಕರನ್ನು ಸಂಪರ್ಕಿಸತಕ್ಕಂತಹ ಕನಿಷ್ಠ ಸೌಜನ್ಯವನ್ನೂ ಸಹ ತೋರಿಸಿಲ್ಲ. ಇಂತಹ ಒಂದು ಸಂದರ್ಭದಲ್ಲಿ ನಾವು ಯಾರಿಗೆ ಹೇಳಿಕೊಳ್ಳೋಣ? ಪ್ರತಿಯೊಂದನ್ನೂ ವಿಧಾನಸಭೆಯಲ್ಲಿ ಹೇಳುವುದಕ್ಕಾಗುತ್ತದೆಯೇ? 223 ಶಾಸಕರುಗಳ ಮಧ್ಯೆ ನಾವು ಬೆಂಗಳೂರು ನಗರಾದ ಸಮಸ್ಯೆಗಳನ್ನೇ ಹೇಳುತ್ತಾ ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ದಯವಿಟ್ಟು ತಮ್ಮ ಮುಖೇನ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ದೂರದೃಷ್ಟಿಯಿಂದ ಸಮಗ್ರವಾಗಿ ಒಂದು ಯೋಜನೆ ಆಗಬೇಕು. 'ಯುದ್ಧಕಾಲೇ ಶಸ್ತ್ರಾಭ್ಯಾಸ' ಮಾಡುವುದನ್ನು ಬಿಟ್ಟು ಶಾಶ್ವತವಾದಂತಹ ನೆಲೆಗಟ್ಟಿನಲ್ಲಿ ಕೆಲಸ ಮಾಡಬೇಕು. ಇವತ್ತು ಕುದುರೆಮುಖ ಇರಬಹುದು, ಗಣಿ ವಿಚಾರದಲ್ಲಿ ಇರಬಹುದು. ನಾವು ಭೂಮಿಯ ನೈಸರ್ಗಿಕ ಅಸಮತೋಲನ ಮಾಡುವುದು ಇಂದಿನ ನೀರಿನ ಸಮಸ್ಯೆಗಳಿಗೆ ಮೂಲಭೂತ ಕಾರಣವಾಗಿದೆ. ಇವೆಲ್ಲದರ ಬಗ್ಗೆ ಸಮಗ್ರವಾಗಿ ಯೋಚಿಸಬೇಕು. ಏನೋ ಸಮಸ್ಯೆ ಬಂದಾಗ ಚಿಂತನೆ ಮಾಡಿ, ಸುಮ್ಮನಾಗಿ ಬಿಡುತ್ತಿದ್ದೇವೆ. ಶಾಶ್ವತವಾದ ನೆಲೆಗಟ್ಟಿನಲ್ಲಿ ಕೆಲಸ ಮಾಡಬೇಕು. ಮಾನ್ಯ ಅಧ್ಯಕ್ಷರೇ, ತಾವು ಹಿರಿಯರಿದ್ದೀರಿ, ತಮಗೆ ಗೊತ್ತಿದೆ. ತಾವು ಮಲೆನಾಡಿನಿಂದ ಬಂದಿರತಕ್ಕಂಥವರು. ಪಶ್ಚಿಮಘಟ್ಟ ಮತ್ತು ಮಲೆನಾಡು...

ಛೇರ್ಮನ್ :- ಮಾನ್ಯ ನರೇಂದ್ರಬಾಬುರವರೆ, ತಮ್ಮ ಸಮಯಾವಕಾಶ ಆಯಿತು. ಬೇಗ ಮುಗಿಸಿ.

ಶ್ರೀ ನೆ.ಲ. ನರೇಂದ್ರಬಾಬು :- ನಾನು ಒಂದೇ ಒಂದು ವಾಕ್ಯದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ರಾಜ್ಯದಲ್ಲಿ ಕೆಲವು ಸಲ ಅತಿವೃಷ್ಟಿ, ಕೆಲವು ಸಲ ಅನಾವೃಷ್ಟಿ ನೋಡುತ್ತಿದ್ದೇವೆ. ಈ ಅತಿವೃಷ್ಟಿಗೂ ಅನಾವೃಷ್ಟಿಗೂ ಕಾರಣ ನಾವು ಮಾಡಿಕೊಂಡಿರುವ ಸ್ವಯಂಕೃತ ಅಪರಾಧವೇ ಆಗಿದೆ. ಇದನ್ನು ತಪ್ಪಿಸಬೇಕಾದರೆ ದೂರದೃಷ್ಟಿ ಮುಖ್ಯ. ಮೊನ್ನೆ ಬಿಡಿಎನವರು CDP ಮಾಡಿರುವುದನ್ನು ನೋಡಿದರೆ ನಾಚಿಕೆಯಾಗುತ್ತದೆ. ಒಂದು ಸಿಟಿ ಪ್ಲಾನ್ ಹೇಗೆ ಇರಬೇಕು ಎಂದರೆ, ಅದು ದೂರದೃಷ್ಟಿಯಿಂದ ಕೂಡಿರಬೇಕು. 761 sq.kms. ವ್ಯಾಪ್ತಿಯ ನಗರ ಹೇಗೆ ಇರಬೇಕೆಂಬ ಬಗ್ಗೆ ಚಿಂತನೆಯಿಲ್ಲ. ಈ ರೀತಿ ಮಾಡುತ್ತಾ ಹೋದರೆ, ಪಕ್ಷಿಗಳು ಉಳಿಯುವುದಿಲ್ಲ, ಕೆರೆಗಳು ಉಳಿಯುವುದಿಲ್ಲ, ಕಾಡೂ ಉಳಿಯುವುದಿಲ್ಲ, ನಾಡೂ ಉಳಿಯುವುದಿಲ್ಲ. ಒಟ್ಟಾರೆಯಾಗಿ ರೈತರನ್ನು ಒಕ್ಕಲೆಬ್ಬಿಸಿ, ಈ ನಗರವನ್ನು ಕಟ್ಟಬೇಕಾಗಿಲ್ಲ. ಬೆಂಗಳೂರನ್ನು ಒಂದು civilized livable city ಯಾಗಿ ಮಾಡಬೇಕಾಗಿದೆ. ಆದರೆ ನಾವು ಇವತ್ತು ಇದನ್ನು 'crime city' ಮತ್ತು polluted city' ಮಾಡಲಿಕ್ಕೆ ಹೊರಟಿದ್ದೇವೆ.

ಅದು ಆಗುವುದು ಬೇಡ. ದೂರದೃಷ್ಟಿ ಈಗಲಾದರೂ ಬರಲಿ ಎಂಬ ಮನವಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) :- ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ನಮ್ಮ ಜಿಲ್ಲೆಗೆ ಬಂದಿದ್ದರು. ಈ ಬರ ಪರಿಹಾರದ ಪರಿಸ್ಥಿತಿಯನ್ನು ಅಲ್ಲಿ ಅವರು review ಮಾಡಿದರು. ಆಗ ನಾವೆಲ್ಲರೂ ಕೂಡಿ ತಮಗೆ ಅನೇಕ ಸಲಹೆಗಳನ್ನು ಕೊಟ್ಟೆವು. ಬಹಳಷ್ಟು ಸಲಹೆಗಳನ್ನು ತಾವು ಒಪ್ಪಿ, ಈ ಕಾರ್ಯಕ್ರಮ ನಡೆಸಬಹುದು ಎಂದು ಅಲ್ಲಿಯ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದಿರಿ. ದುರ್ದೈವದಿಂದ, ಇನ್ನೂ ಏನೂ ಚಾಲೂ ಆಗಿಲ್ಲ. ಯಾವ ಕೆಲಸವೂ ಚಾಲೂ ಆಗಿಲ್ಲ. ನಿಮಗೆ ನಮ್ಮ ಪರಿಸ್ಥಿತಿ ಸಂಪೂರ್ಣ ಗೊತ್ತಿದೆ. 10 ವರ್ಷಗಳಲ್ಲಿ ಆರೇಳು ವರ್ಷ ಬರಗಾಲಪೀಡಿತವಾಗುವಂತಹ ಪ್ರದೇಶಗಳು ನಮ್ಮದಾಗಿವೆ. ಅಲ್ಲೆಲ್ಲಾ ಜನ ಈ ಟೈಮ್‌ನಲ್ಲಿ ಬಹುತೇಕ ಕೆಲಸಕ್ಕೆ ಗುಳೆ ಹೋಗಿರುತ್ತಾರೆ. ಅದೇ ಪರಿಸ್ಥಿತಿ ಈಗಲೂ ಇದೆ. ಅದಕ್ಕಾಗಿ ಕೂಡಲೇ ಜನಕ್ಕೆ ಉದ್ಯೋಗ ಸಿಗುವಂತಹ ವ್ಯವಸ್ಥೆಯೊಂದನ್ನು ಮಾಡಬೇಕೆಂದು ಆಗಲೂ ನಾವು ಒತ್ತಾಯ ಮಾಡಿದ್ದೆವು. ಪ್ರತಿ ಗ್ರಾಮದಲ್ಲಿ ಹೊಲಕ್ಕೆ ಬದು ಹಾಕುವಂತಹ ಕೆಲಸ ನೀವು ಯುದ್ಧೋಪಾದಿಯಲ್ಲಿ ತೆಗೆದುಕೊಳ್ಳಿ, ವಾರದಲ್ಲಿ ನಾಲ್ಕು ದಿವಸವಾದರೂ ನೀವು ಉದ್ಯೋಗದ ಅವಕಾಶವನ್ನು ನೀಡಿ. ಎಷ್ಟು ಮಂದಿ ಗುದ್ದಲಿ ಹಿಡಿದುಕೊಂಡು ಬರುತ್ತಾರೋ, ಅವರೆಲ್ಲರಿಗೂ ಉದ್ಯೋಗ ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ಅದಕ್ಕೆ ಬೇಕಾಗುವಂತಹ ಹಣಕಾಸನ್ನು ತಾವು ಜೋಡಿಸಬೇಕು ಎಂದು ನಾವು ಹೇಳಿದ್ದೆವು, ಅದಕ್ಕೆ ತಾವು ಒಪ್ಪಿದ್ದಿರಿ. ಅಲ್ಲಿ ಅಧಿಕಾರಿಗಳಿಗೆ ತಾವು ಆದೇಶವನ್ನು ನೋಡಿದಿರಿ. ಎಷ್ಟು ಆಗಬಹುದು ಎಂಬ ಬಗ್ಗೆ ನೀವೆಲ್ಲಾ ಸರ್ವೆ ಮಾಡಿ immediate report ಕಳುಹಿಸಿರಿ ಎಂದು ಹೇಳಿದ್ದಿರಿ. ಅವರು ಕಳುಹಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಆದರೆ report ಬರಲಿಲ್ಲವೆಂದು ನೀವು ಕೆಲಸ ಕೊಡುವುದು ನಿಂತರೆ, ಪಾಪ! ಕೃಷಿ ಕಾರ್ಮಿಕರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಆ report ಬರಲಿ, ಬಾರದಿರಲಿ, ನಾಳೆ ಸೋಮವಾರದಿಂದ ಈ ಕೆಲಸ ಪ್ರಾರಂಭವಾಗಬೇಕೆಂದು ನೀವು ಆದೇಶ ಕೊಡುವಂತಹ ಕೆಲಸ ಮಾಡಬೇಕೆಂದು ಕೇಳುತ್ತೇನೆ. ಜಿಲ್ಲಾಧಿಕಾರಿಗಳು ಮತ್ತು ಅಲ್ಲಿಯ Transport Authority ಅಧಿಕಾರಿಗಳು ಈ ಸಮಯದಲ್ಲಿ ಮೇವು ಸಾಗಾಣಿಕೆ ಸಲುವಾಗಿ, Truck Association ಪದಾಧಿಕಾರಿಗಳನ್ನು ಕರೆಸಿ, ಮಾತನಾಡಿ, ಒಂದೊಂದು ಟ್ರಕ್ ಒಂದೊಂದು ದಿವಸ ಪುಕ್ಕಟೆಯಾಗಿ ಕೊಡಿಸುವಂತೆ ಮಾಡಬೇಕು. ಆ ರೀತಿ ಮಾಡಿ, ನೀವು fuel ಮಾತ್ರ ಹಾಕಿಸಿರಿ ಎಂದು ನಾವು

ಸೂಚನೆಯನ್ನು ಕೊಟ್ಟಿದ್ದೆವು. ಆದರೆ ಏನೂ ಆಗಿಲ್ಲ. Truck Association ಪದಾಧಿಕಾರಿಗಳನ್ನು ಕರೆದು ತಾವು ಸಹಾಯ ಕೇಳಿದರೆ ಅವರು ಸಹಾಯ ಮಾಡುತ್ತಾರೆ. ಆ ಕೆಲಸವನ್ನು ಯಾರಾದರೂ ಮಾಡಬೇಕಲ್ಲವೇ? ನಾವು ಆ ಕೆಲಸವನ್ನು ಮಾಡುವುದು ಸರಿಯಾಗುವುದಿಲ್ಲ. ಜಿಲ್ಲಾ ಆಡಳಿತದ ಜವಾಬ್ದಾರಿ ಹೊತ್ತವರು ಆ ಕೆಲಸ ಮಾಡುವುದು ಬಹಳ ಅನುಕೂಲಕರ. ದಯವಿಟ್ಟು ಇಂತಹ ಕೆಲಸ ತಾವು ಮಾಡಿಸಬೇಕು ಎನ್ನುವಂತಹ ಮಾತನ್ನು ನಾನೆ ಹೇಳುತ್ತೇನೆ. ಈಗ ಕುಡಿಯುವ ನೀರಿಗೆ ಎಲ್ಲಾ ಕಡೆಯೂ ತಾಪತ್ರಯವಾಗಿದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕುಡಿಯುವ ನೀರಿನ ತಾಪತ್ರಯವನ್ನು ನಿಲ್ಲಿಸಬೇಕೆಂದರೆ, ಈ ಒಂದೆರಡು ತಿಂಗಳಿನಲ್ಲಿ ಎಲ್ಲೆಲ್ಲಿ ಸಾಧ್ಯವಿದೆಯೋ, ಅಲ್ಲಿ ಕುಡಿಯುವ ನೀರು ಶೇಖರಣೆ ಮಾಡುವಂತಹ ಕೆಲಸವನ್ನು ಹೆಚ್ಚು ಆದ್ಯತೆ ಮೇಲೆ ಮಾಡಬೇಕು. ನಮ್ಮ ರೋಣ ತಾಲ್ಲೂಕಿನಲ್ಲಿ, ಮಾನ್ಯ ಕಳಕಪ್ಪ ಬಂಡಿಯವರು ಒಂದು ಕೆಲಸ ಮಾಡಿದ್ದಾರೆ. Series of tanks ಹಳ್ಳದೊಳಗೆ ತೆಗೆಸುತ್ತಾ ಅವರು ಹೋಗಿದ್ದಾರೆ. ಅದರಿಂದಾಗಿ ನೀರು ಕೆಲವು ಕಡೆ ನಿಂತಿದ್ದನ್ನು ನಾವು ನೋಡಿದ್ದೇವೆ. ಅಲ್ಲೆಲ್ಲಾ ದನಕರುಗಳಿಗೆ ಮತ್ತು ಜನಗಳಿಗೆ ಬಹಳ ಅನುಕೂಲವಾಗಿದೆ. ಅಲ್ಲಿ machine ಉಪಯೋಗ ಮಾಡಿ ಅವರು ಮಾಡಿದ್ದಾರೆ. ಈಗ ಉಳಿದಿರುವ ಒಂದೆರಡು ತಿಂಗಳುಗಳಲ್ಲಿ ನಾವು ಆ ಕೆಲಸವನ್ನು ಮಾಡಬೇಕೆಂದರೆ, ಕೆಲವು ಕಡೆ machine ಉಪಯೋಗ ಮಾಡುವುದು ಅನಿವಾರ್ಯವಾಗುತ್ತದೆ. ನೀವು ಅದಕ್ಕೆ ಅವಕಾಶವನ್ನು ಕೊಟ್ಟು ಬಿಡಬೇಕು. machine ಉಪಯೋಗ ಮಾಡಿ tender ಕರೆದು ಮಾಡಲಿ ಬೇಕಾದರೆ, ನಾವೇನೂ ಆಕ್ಷೇಪಣೆ ಮಾಡುವುದಿಲ್ಲ. ಆದರೆ ಪೈಪೋಟಿ ಮೇಲೆ ಆ ಕೆಲಸ ಆಗಬೇಕು. ನಮ್ಮ ಕಡೆ ಈ ಕಡೆ ಇದ್ದಂತೆ ಊರಿಗೊಂದು ಕೆರೆ ಇಲ್ಲ. ನಮ್ಮ ಕಡೆಯಲ್ಲೂ immediate ಯಾಗಿ ಊರಿಗೊಂದು ಕೆರೆ ಮಾಡಿಸಬೇಕು. ಮುಂದಿನ ಮಳೆಗಾಲದಲ್ಲಿ ಮಳೆಯಾಯಿತು ಎಂದರೆ ನೀರು ಬಂದು ನಿಲ್ಲುವಂತೆ ಒಂದು ಕೆರೆ ಕಟ್ಟಿಸಬೇಕು. ಆ ಕೆರೆಗೆ ಬೇಕಾಗುವಂತಹ ಜಮೀನನ್ನು ಖರೀದಿ ಮಾಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು ಎಂದು ನಾನು ಒತ್ತಾಯಿಸುತ್ತೇನೆ. ಎಲ್ಲೆಲ್ಲಿ ಹಳ್ಳ, curve ಇದೆಯೋ ಅಲ್ಲೆಲ್ಲಾ, ಸಣ್ಣ ಸಣ್ಣ series of check dams ನೀವು ಕಟ್ಟುವಂತೆ ಮಾಡಿದರೆ ಅನುಕೂಲವಾಗುತ್ತದೆ. May end ಗೋ, June ಮೊದಲನೇ ವಾರದೊಳಗೋ,

ನಮ್ಮಲ್ಲಿ ಮಳೆಯಾಗುತ್ತದೆ. ಆ ರೀತಿ ಮಳೆಯಾದಾಗ ನೀರು ಅಲ್ಲಿ ಬಂದು ನಿಲ್ಲುವಂತಹ ಕೆಲಸವಾಗುತ್ತದೆ. ಈ ಸಾರಿ ಹಿಂಗಾರು ಪ್ರಾರಂಭವಾಗುವುದಕ್ಕಿಂತ ಮೊದಲೇ, ನಮ್ಮ ಕೃಷಿ ಸಚಿವರು ಬೀಜದ್ದು ಬರೋಬರಿ ವ್ಯವಸ್ಥೆಯನ್ನು ಮಾಡಿ ಇಟ್ಟುಕೊಳ್ಳಬೇಕು. ಏಕೆಂದರೆ, ನಮ್ಮಲ್ಲಿ ಮುಂಗಾರು ಮತ್ತು ಹಿಂಗಾರಿನಲ್ಲಿ ರೈತರಿಗೆ ಬೀಜ ದೊರಕದೇ ಬಹಳ ತಾಪತ್ರಯವಾಗುತ್ತದೆ. ಮೊದಲೇ ನೀವು ಆ ಬೀಜದ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕಾಗಿ small farmers, medium farmers ಎಂದು ಭೇದಭಾವ ಮಾಡಬೇಡಿ. ಎಲ್ಲಾ farmers ಒಂದೇ ರೀತಿಯಾಗಿ ಪರಿಗಣಿಸಿ. ಈ ಬರಗಾಲ ಪೀಡಿತ ಪ್ರದೇಶದಲ್ಲಿ ಎಲ್ಲಾ ಭೂ ಮಾಲೀಕರ ಹಣೆಬರಹ ಒಂದೇ ರೀತಿ ಇರುತ್ತದೆ. ಆದ್ದರಿಂದಾಗಿ, ನೀವು ಆ ರೀತಿ ಏನೂ ಮಾಡದೆ, ಎಲ್ಲರಿಗೂ ಸಬ್ಸಿಡಿ ಕೊಟ್ಟು, ಬೀಜ ಬೇಗ ಸಿಗುವ ಹಾಗೆ ವ್ಯವಸ್ಥೆಯನ್ನು ಮಾಡಬೇಕು ಎನ್ನುವಂತಹಾ ಅಮಾತನ್ನು ಹೇಳುತ್ತೇನೆ. ಎಲ್ಲೆಲ್ಲಿ ಸಾಧ್ಯವಿದೆಯೋ, ಅಲ್ಲೆಲ್ಲಾ ಗೋಶಾಲೆಗಳನ್ನು ಮಾಡಬೇಕು. ಗೋಶಾಲೆಗೆ ನಮ್ಮ ರೈತರು ತಮ್ಮ ದನಕರುಗಳನ್ನು ಕಳುಹಿಸಲಿಕ್ಕೆ ಮನಸ್ಸು ಮಾಡುವುದಿಲ್ಲ, ಆದರೆ ಮೇವೂ ಸಿಗಲಿಲ್ಲ ಎಂದರೆ ಅನಿವಾರ್ಯವಾಗಿ ದನಕರುಗಳನ್ನು ಗೋಶಾಲೆಗೆ ಕಳುಹಿಸುವಂತಹ ಪ್ರಸಂಗ ಬರುತ್ತದೆ. ಅದಕ್ಕಾಗಿ ದಯವಿಟ್ಟು, ಈ fodder ಸಲುವಾಗಿ ವಿಶೇಷ ಲಕ್ಷ್ಯ ವಹಿಸಿ ತಾವು ಕೆಲಸ ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಬೇಗ ಇದಕ್ಕೆ ವ್ಯವಸ್ಥೆ ಮಾಡುತ್ತೇನೆ ಎನ್ನುವಂತಹ ಉತ್ತರ ನಿಮ್ಮ ಬಾಯಿಂದ ಕೇಳಿ, ನಾನು ಊರಿಗೆ ಹೋಗಬೇಕು ಎಂದು ಅಂದುಕೊಂಡಿದ್ದೇನೆ. ದಯವಿಟ್ಟು ಆ ಉತ್ತರವನ್ನು ನೀಡಬೇಕೆಂದು ಕೋರುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು :- ಈಗ ಚರ್ಚೆಯನ್ನು ಮುಕ್ತಾಯ ಮಾಡಲಾಗಿದೆ. ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :- ಇದರ ಬಗ್ಗೆ 3 ಗಂಟೆ 40 ನಿಮಿಷ ಚರ್ಚೆಯಾಗಿದೆ. ಇನ್ನು ಅಕ್ಷಯ ಪಾತ್ರೆಯದ್ದು, ಜಮ್ಮಾದವರದ್ದು ಮತ್ತು ಬೇರೆ ಬೇರೆ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆದ್ದರಿಂದ ಎಲ್ಲರೂ ದಯಮಾಡಿ ಸಹಕರಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರದ್ದು ಆದ ಮೇಲೆ ಮಾತನಾಡುತ್ತೇನೆಂದು ಕುಳಿತದ್ದೇ ಅಪರಾಧವೇ?

ಅಧ್ಯಕ್ಷರು :- ಈಗಾಗಲೇ ಎಲ್ಲಾ ವಿಚಾರಗಳನ್ನು ಬಹಳ ಜನರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನನ್ನನ್ನು ಕರೆದ ಮೇಲೆ ಅವರುಗಳೆಲ್ಲಾ ತೆಗೆದುಕೊಂಡಿದ್ದಾರ.

ಅಧ್ಯಕ್ಷರು :- ಮಾನ್ಯ ಸಚಿವರೆ, ತಾವು ಉತ್ತರ ಪ್ರಾರಂಭ ಮಾಡಿ. ಇದರ ಬಗ್ಗೆ ಉತ್ತರ ಅಲ್ಲದೆ 3 ಗಂಟೆ 40 ನಿಮಿಷ ಚರ್ಚೆಯಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನನ್ನನ್ನು ಕರೆದರು. ನಾನು ಬಿಟ್ಟುಕೊಟ್ಟಿದ್ದೆ ತಪ್ಪಾ? ಡಿ.ಆರ್. ಪಾಟೀಲರ ಹೆಸರೂ ಇದೆ.

ಅಧ್ಯಕ್ಷರು :- ಮಾಧುಸ್ವಾಮಿಯವರೆ, ದಯಮಾಡಿ ಕೇಳಿ. ನಿಮ್ಮದು ಬರಬೇಕು. ಅನಂತರ ಜಮ್ಮಾದ ಬಗ್ಗೆ. ಅವರು ಕಾದು ಕುಳಿತಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕಲ್ಲ? ಮಾನ್ಯ ಸಿದ್ಧರಾಮಯ್ಯನವರು ಎದ್ದಾಗ ಇದನ್ನು 2 ಗಂಟೆಯೊಳಗೆ ಮುಗಿಸಬೇಕೆಂದು ಆಗಲೇ ಹೇಳಿದೆ. ಈ ರೀತಿಯಾಗುವುದರಿಂದಲೆ ಯಾವುದರ ಚರ್ಚೆಯೂ ಸರಿಯಾಗಿ ಆಗುವುದಿಲ್ಲ. ಯಾರು ಹಿಂದೆ ಕುಳಿತಿದ್ದಾರೆ ಅವರ ಕ್ಷೇತ್ರದ್ದು, ಅವರ ವಿಚಾರಗಳು ಯಾವುದೂ ಚರ್ಚೆಯಾಗುವುದಿಲ್ಲ. ನಾನು ಆವತ್ತು ಬಿಎ.ಸಿ.ಯಲ್ಲಿ ಕೊನೆಯ ದಿವಸ ಮುಂದಿನ ಸಾಲಿನವರು ಯಾರೂ ಮಾತನಾಡಬೇಡಿ, ಕೊನೆಯಲ್ಲಿ ಕುಳಿತಿರುವವರು ಮಾತನಾಡಲಿ ಎಂದು ಹೇಳಿದ್ದೆ. ಅನೇಕ ಜನರು ಮಾತನಾಡಲು ಕಾದು ಕುಳಿತಿದ್ದಾರೆ. ಅದಕ್ಕೆ ನಾನು ಒತ್ತಾಯ ಮಾಡಿ ಇವತ್ತು ಹೌಸ್ ಇರಬೇಕೆಂದು ಹೇಳೀದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ನಾವು ಬಿಟ್ಟುಕೊಟ್ಟಿದ್ದೆ ತಪ್ಪಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹಾಗಾದರೆ ನಾವು ಬರಗಾಲದ ಬಗ್ಗೆ ಮಾತನಾಡುವುದೇ ಬೇಡವೇ?

ಅಧ್ಯಕ್ಷರು :- ಎಲ್ಲರೂ ಮಾತನಾಡಬೇಕು. ಯಾರೂ ಮಾತನಾಡಬಾರದು ಎಂದು ಇಲ್ಲ. 224 ಜನರು ಆಯ್ಕೆಯಾಗಿ ಬಂದಿದ್ದಾರೆ. ಆ 224 ಜನರೂ ಮಾತನಾಡಬೇಕು. ಅವರೇಕೆ ಮಾತನಾಡುವಂತೆ ಇಲ್ಲ?

(ಗೊಂದಲ)

ಎಲ್ಲರೂ ಅರ್ಥಮಾಡಿಕೊಳ್ಳಬೇಕು, ಸಹಕರಿಸಬೇಕು. ಚರ್ಚೆ ಆರಂಭವಾಗಿ ಮೂರೂ ಮುಕ್ಕಾಲು ಗಂಟೆಯಾಯಿತು. ನಾನು ಫಿಕ್ಸ್ ಮಾಡಿದ್ದು 2 ಗಂಟೆ ಎಂದು. ಬೇರೆ ಬೇರೆಯದಕ್ಕೆ ಕೊಟ್ಟಿದ್ದೇವಲ್ಲ, ಅದರ ಗತಿಯೇನಾಗಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :- ನನ್ನನ್ನು ಮಾತನಾಡಲು ಕರೆದರು. ಅನಂತರ ಡಿ.ಆರ್. ಪಾಟೀಲರು ಎರಡು ನಿಮಿಷ ಮಾತನಾಡುತ್ತೇನೆಂದರು. ಅವರಿಗೆ ಬಿಟ್ಟುಕೊಟ್ಟಿದ್ದೆ ತಪ್ಪಾ?

ಅಧ್ಯಕ್ಷರು :- ನನಗೇನೂ ಅರ್ಥವಾಗುವುದಿಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :- ಯಾರಿಗೆ ಅರ್ಥವಾಗುವುದಿಲ್ಲ? ಇದು ಒಳ್ಳೆಯ ಕತೆಯಾಯಿತಲ್ಲ? ಬರಗಾಲದ ಬಗ್ಗೆ ನಾವು ಮಾತನಾಡುವುದು ಬೇಡವೆ?

ಅಧ್ಯಕ್ಷರು :- ಆಯಿತು. ನೀವು ನಿಂತು ಮಾತನಾಡುತ್ತೇವೆಂದರೆ ಬಹಳ ಕಾಲ ತೆಗೆದುಕೊಳ್ಳುತ್ತೀರಿ. ಆದ್ದರಿಂದ ಒಂದೆರಡು ನಿಮಿಷ ಮಾತನಾಡಿ. ನಿಮ್ಮದು, ಇನ್ನೂ ಜಮ್ಮಾ, ಅಕ್ಷಯ ಪಾತ್ರೆಯ ಬಗ್ಗೆ ಬರಬೇಕು ಎಂಬುದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಹೌದು ಸಾರ್. ಅಲ್ಲಿ ಮಾತನಾಡುತ್ತೇವೆ. ಆದರೆ ಇಲ್ಲಿ ಎರಡೇ ನಿಮಿಷ ಮಾತನಾಡುತ್ತೇವೆ. ನಾನು ಏನೂ ಕೇಳುವುದಿಲ್ಲ. ನಾನು ತುಮಕೂರು ಜಿಲ್ಲೆಯ ಸಮಸ್ಯೆಯನ್ನು ಅನೇಕ ಸಲ ನಿಮ್ಮ ಮುಂದೆ ಹೇಳಿದ್ದೇನೆ. ತುಮಕೂರಿನಲ್ಲಿ ಇವತ್ತು ಎಲ್ಲಾ ರಿಲೀಫ್ ವರ್ಕ್ ನಿಂತಿದೆ. ಇಂಜಿನಿಯರ್ಸ್‌ಗಳೆಲ್ಲ ಯಾರೂ ಕೆಲಸ ಮಾಡುವುದಿಲ್ಲವೆಂದು ನಮಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಹಾರ್ಡ್ ಏರಿಯಾದಲ್ಲಿ ಮೆಶಿನ್‌ನನ್ನು use ಮಾಡಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಹೇಳಿದ್ದೇವೆ, ಇಲ್ಲಿಯವರೆಗೆ ನಿರ್ಧಾರ ತೆಗೆದುಕೊಂಡಿಲ್ಲ. ಅಲ್ಲಿ ಒಂದೇ ಒಂದು ಕೆಲಸವಾಗುತ್ತಿಲ್ಲ. ಇಡೀ ಜಿಲ್ಲೆಯ

ಕಾಮಗಾರಿಗಳು ಸ್ಥಗಿತವಾಗಿವೆ. ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಎರಡನೆಯದು, ಬೋರ್‌ವೆಲ್‌ಗಳು. ತಮಿಳುನಾಡಿನಿಂದ ಬಂದಿದ್ದ ಲಾರಿಗಳೆಲ್ಲ ವಾಪಸ್ ಹೋಗಿ ಬೋರ್ ಕೊರೆಯಲು ಒಂದು ಲಾರಿಯೂ ಇಲ್ಲ. ಜಿಲ್ಲಾಧಿಕಾರಿಗಳು, ಅಧಿಕಾರಿಗಳು ಹೊಸ ಬೋರನ್ನು ಹಾಕಬೇಡಿ, ಇರುವ ಬೋರನ್ನು ಮಾತ್ರ deepen ಮಾಡಬೇಕೆಂದು decision ತೆಗೆದುಕೊಳ್ಳುತ್ತಾರೆ. ಇದು ಸಾಧ್ಯವಾಗುವುದಿಲ್ಲ. ನಾವು ಈಗಾಗಲೇ 700–800 ಅಡಿ ಕೊರೆದು ನೀರನ್ನು ತೆಗೆದುಕೊಂಡಿದ್ದೇವೆ. ಹೊಸ ಬೋರನ್ನು ಮಾಡಲು ತಾವು permit ಮಾಡಿಸಬೇಕು. ಎಲ್ಲರೂ ಮಾತನಾಡಿದಂತೆ ಕೆ.ಇ.ಬಿ. energisation ಕೆಲಸ ನಮ್ಮಲ್ಲಿ ಆಗುತ್ತಿಲ್ಲ. ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿಯಲ್ಲೇನು ಹಣವಿತ್ತು, ಅದನ್ನು divert ಮಾಡಿ energisation ಮಾಡಿ ಎಂದು ಹೇಳಿದ್ದರೆ ಆಗುತ್ತಿತ್ತು, ಅದನ್ನೂ ಮಾಡಲಿಲ್ಲ. ರೇಷನ್ ಅಕ್ಕಿ ಇಲ್ಲ, ದುಡ್ಡು ಕೊಟ್ಟೇ ಕೆಲಸ ಮಾಡಿಸಿ ಡಿ.ಸಿ.ಯವರು circular issue ಮಾಡಿದ್ದಾರೆ. ಇದರ ಪರಿಣಾಮವೇನಾಗುತ್ತದೆ, ತಾವು ಹೇಳಬೇಕು. ಬಹಳ ಜನರು ಮಾತನಾಡಿರುವುದರಿಂದ ನಾನು ಜಾಸ್ತಿ ಮಾತನಾಡುವುದಿಲ್ಲ. ನಮಗೆ ಮುಖ್ಯವಾಗಿ ಕಾಮಗಾರಿಗಳು ಆರಂಭವಾಗುವಂತೆ ಮಾಡಬೇಕು. ಮೆಶಿನ್ ಬಳಸಲೇ ಬಾರದು ಎಂದು ನೀವು ನಿರ್ಧಾರ ತೆಗೆದುಕೊಳ್ಳುವುದಾದರೆ ಮೈನಿಂಗ್ ಏರಿಯಾದಲ್ಲಿ, ಹಾರ್ಡ್ ಇರುವ ಕಡೆ ನಾವು ಕೆಲಸ ಮಾಡುವಂತೆಯೇ ಇಲ್ಲ. ಮೇಲ್ಪದರ ತೆಗೆಯಲು ಮೆಶಿನ್ ಬಳಸಲೇ ಬೇಕು. ಆಮೇಲೆ ಆಳುಗಳು ಕೆಲಸ ಮಾಡಲು ಆಗುತ್ತದೆ. ನಾವು ಇಷ್ಟು ದಿವಸ ಈ ಸಭೆಯಲ್ಲಿ ನಿಂತುಕೊಂಡು ಹೇಳಿದರೂ ಒಂದು ಆದೇಶ ಕೊಡುವುದಿಲ್ಲ, ಒಂದು ಸೂಚನೆ ಕೊಡುವುದಿಲ್ಲ ಹೀಗಾದರೆ, ಯಾರಿಗೆ ಹೇಳಬೇಕು, ಏಕೆ ಈ ಸಭೆಯಲ್ಲಿ ಮಾತನಾಡಬೇಕು? ದಯಮಾಡಿ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಅದರ ಬಗ್ಗೆ ತಾವು ಉತ್ತರದಲ್ಲಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :– ದಯಮಾಡಿ ಎಲ್ಲರು ಸಹಕರಿಸಿ. ಎಲ್ಲರೂ ಎರಡೆರಡು ನಿಮಿಷವೆಂದರೆ ಎಷ್ಟು ಜನರು ನಿಂತಿದ್ದಾರೆ ನೋಡಿ. ಈ ರೀತಿಯಾದರೆ ಯಾವುದನ್ನೂ ಚರ್ಚೆ ಮಾಡಲು ಆಗುವುದಿಲ್ಲ. ಯಾವುದೇ ಒಂದು ವಿಚಾರದ ಬಗ್ಗೆ ಎಲ್ಲರಿಗೂ ಅವಕಾಶ ಕೊಡಲು ಆಗುತ್ತದೆಯೇ? ನನಗೇನೆಂಬುದು ಅರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ತಾವು ಯಾವಾಗಲಾದರೂ ಅವಕಾಶ ಕೊಡಿ, ನನಗೆ ಎರಡು ನಿಮಿಷ ಅವಕಾಶ ಕೊಡಿ. ತಾವು ಯಾವಾಗ ಕೊಡಬೇಕೆಂದು ಚಿಂತನೆ ಮಾಡಿದ್ದೀರಿ ರಾತ್ರಿ ಒಂದು ಗಂಟೆಯಾದರೂ ಚಿಂತೆ ಇಲ್ಲ ಎರಡು ನಿಮಿಷ ಕೊಡಿ.

ಅಧ್ಯಕ್ಷರು :- ಹಾಗಲ್ಲ, ಅವರದ್ದು ಅಕ್ಷಯ ಪಾತ್ರೆ, ಅನಂತರ ಜಮ್ಮಾ ವಿಷಯ ಇದೆಯಲ್ಲವೇ? ಜೊತೆಗೆ ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಚಾರಗಳಿವೆ. ಇವತ್ತು ಎಲ್ಲರಿಗೂ ಅವಕಾಶ ಕೊಡುತ್ತೇನೆಂದು ಹೇಳಿದ್ದೆ.

ಶ್ರೀ ವಾಟಾಳ್ ನಾಗರಾಜ್ :- ನಾಡಿದ್ದು ಇನ್ನೊಂದು ದಿವಸ ಸದನ ನಡೆಸಿ ಎಂದು ಸಲಹೆ ಮಾಡುತ್ತೇನೆ.

ಅಧ್ಯಕ್ಷರು :- ಅದನ್ನು ಮೊದಲೇ ಹೇಳಿದ್ದರೆ ಬಿ.ಎ.ಸಿ ಕರೆದು ತೀರ್ಮಾನ ಮಾಡಬಹುದಿತ್ತು. ತಾವು ಈಗ 7 ಗಂಟೆಯಲ್ಲಿ ಇದನ್ನು ಹೇಳುತ್ತಿದ್ದೀರಲ್ಲ?

ಶ್ರೀ ವಾಟಾಳ್ ನಾಗರಾಜ್ :- ಸೋಮವಾರ, ಮಂಗಳವಾರ ನಡೆಸಿಬಿಡಿ.

ಶ್ರೀ ಎನ್. ಧರ್ಮಸಿಂಗ್ :- ಗಡಿಭಾಗದಿಂದ ಬಂದಿದ್ದಾರೆ. ಆದ್ದರಿಂದ ಪ್ರಕಾಶ್ ಹುಕ್ಕೇರಿಯವರು ಒಂದು ನಿಮಿಷ ಮಾತನಾಡುತ್ತಾರೆ.

ಶ್ರೀ ಪ್ರಕಾಶ್ ಹುಕ್ಕೇರಿ :- ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :- ಹುಕ್ಕೇರಿಯವರೆ ಎರಡು ನಿಮಿಷದಲ್ಲಿ ಮುಗಿಸಬೇಕು. ಇಲ್ಲದಿದ್ದರೆ ಬೆಲ್ ಹೊಡೆದು ಕೂರಿಸಿಬಿಡುತ್ತೇನೆ.

ಶ್ರೀ ಪ್ರಕಾಶ್ ಹುಕ್ಕೇರಿ (ಸದಲಗ) :- ಮಾನ್ಯ ಅಧ್ಯಕ್ಷರೆ ಅವಕಾಶ ಕೊಟ್ಟಿದ್ದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತ ಒಂದೆರಡು ವಿಷಯವನ್ನು ಹೇಳಬಯಸುತ್ತೇನೆ. ನಾನು ಈ ಸದನದಲ್ಲಿ ಸುಮಾರು 20 ವರ್ಷಗಳಿಂದ ಇದ್ದೇನೆ. ಯಾವಾಗ ಬರಗಾಲ ಬರುತ್ತದೆ ಆಗ ಚಿಕ್ಕೋಡಿ ತಾಲ್ಲೂಕು ಬರಗಾಲದ ತಾಲ್ಲೂಕು ಎಂದು ಘೋಷಣೆಯಾಗುತ್ತದೆ. ಆದರೆ ಈ ಸಲ ಅಧಿಕಾರಿಗಳ ತಪ್ಪಿನಿಂದಲೋ ಅಥವಾ ಯಾರ ತಪ್ಪಿನಿಂದಲೋ ಚಿಕ್ಕೋಡಿ ತಾಲ್ಲೂಕು ಬರಗಾಲದ ತಾಲ್ಲೂಕು ಎಂಬುದರಿಂದ

ಬಿಟ್ಟುಹೋಗಿದೆ. ಈ ಸಲ ಏಕೆ ಚಿಕ್ಕೋಡಿ ಬರಗಾಲ ತಾಲ್ಲೂಕು ಎಂದು ಘೋಷಣೆಯಾಗಿಲ್ಲ? ಅಧಿಕಾರಿಗಳೇನು ಸರಿಯಾಗಿ ಮಾಹಿತಿ ಕೊಟ್ಟಿಲ್ಲವೆ? ದಯಮಾಡಿ ಅದರ ಬಗ್ಗೆ ಮಾಹಿತಿ ತರಿಸಿ ನೋಡಬೇಕು. ಚಿಕ್ಕೋಡಿ ತಾಲ್ಲೂಕು ಮೂರು ಜನ ಶಾಸಕರಿಗೆ ಬರುತ್ತದೆ. ದಯವಿಟ್ಟು ಚಿಕ್ಕೋಡಿ ತಾಲ್ಲೂಕನ್ನು ಬರಗಾಲದ ತಾಲ್ಲೂಕು ಎಂದು ಘೋಷಣೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸುತ್ತೇನೆ.

ಸುಮಾರು 24 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಕೊಡುವ ಪ್ರಸಂಗ ಬರುತ್ತದೆ. ಅದರ ಬಗ್ಗೆ ಸಾಕಷ್ಟು ಸಲ ನಿಮ್ಮ ಗಮನಕ್ಕೆ ತಂದಿದ್ದೇನೆ. ಇಲ್ಲಿಯವರೆಗೆ ಅದರ ಬಗ್ಗೆ ನೀವು ನಿರ್ಣಯ ತೆಗೆದುಕೊಂಡಿಲ್ಲ. ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. 2006–07 ರಲ್ಲೇನು ಜಿಲ್ಲಾಪಂಚಾಯಿತಿಗೆ ಸ್ಟೇಟ್ ಸೆಕ್ಟಾರ್ ಮತ್ತು ಸೆಂಟ್ರಲ್ ಸೆಕ್ಟಾರ್‌ನಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಿ ಅದು ಜಿಲ್ಲಾಪಂಚಾಯಿತಿಯ ಬಜೆಟ್‌ನಲ್ಲಿ ಬೇಗ ಮಂಜೂರಾಗುವುದಿಲ್ಲ. ನಮ್ಮ ಜಿಲ್ಲಾಪಂಚಾಯಿತಿಯಲ್ಲಿ ಸ್ಟೇಟ್ ಮತ್ತು ಸೆಂಟ್ರಲ್ ಸೆಕ್ಟಾರ್‌ನ ಎಸ್ಟಿಮೇಟ್ಸ್ ಮತ್ತು ಪ್ಲಾನ್ ಇನ್ನೂ ಟೆಂಡರ್ ಪ್ರೋಸೆಸ್‌ನಲ್ಲೇ ಇದ್ದಾರೆ. ಮಾರ್ಚ್‌ಗೆ ಬಜೆಟ್ ಮುಗಿದರೂ ಇನ್ನೂ ಟೆಂಡರ್ ಪ್ರೋಸೆಸ್‌ನಲ್ಲಿದ್ದಾರೆ. ರಾಜ್ಯ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತದೆ ಇನು ಏಕೆ ಟೆಂಡರ್ ಮಾಡಿ ಕಾಮಗಾರಿ ಕೆಲಸ ಪ್ರಾರಂಭ ಮಾಡಿಲ್ಲವೆಂದು ಅಧಿಕಾರಿಗಳನ್ನು ಕೇಳಿದೆ ಇನ್ನು ಮುಂದೆ ಆದಷ್ಟು ಬೇಗ ಮಾಡುತ್ತೇನೆಂದು ಹೇಳಿದರು. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಕಳೆದ ಎರಡು ವರ್ಷಗಳಲ್ಲಿ ಯಾವ್ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೋ ಅದನ್ನು ಆದಷ್ಟು state, central sector ನಲ್ಲಿ ಗ್ರಾಮಗಳನ್ನು ಆಯ್ಕೆ ಮಾಡಿ ಅನುದಾನ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದೆವು. ದಯವಿಟ್ಟು ಇದರ ಬಗ್ಗೆ ಒಂದು ಸಭೆಯನ್ನು ಕರೆಯಬೇಕು. ಅಧಿಕಾರಿಗಳು ಅದನ್ನು on going ಎಂದು ಮಾಡುತ್ತಾರೆ.

ಅಧ್ಯಕ್ಷರು :– ಸಾಕು ನಿಲ್ಲಿಸಿ. ಮುಖ್ಯ ಅಂಶಗಳನ್ನು ಹೇಳಿದಿರಲ್ಲ.

ಶ್ರೀ ಪ್ರಕಾಶ್ ಹುಕ್ಕೇರಿ :– ಅದು on going scheme ಆಗಬಾರದು. ಅದು ಪ್ರತಿ ವರ್ಷ ಮುಗಿಯುವ ವ್ಯವಸ್ಥೆಯಾಗಬೇಕು. ಹಿಡ್ಕಲ್ ಡ್ಯಾಂನಲ್ಲಿ ಸುಮಾರು 4 ಟಿ.ಎಂ.ಸಿ. ನೀರು ಇದೆ. ಅಲ್ಲಿಂದ ಕೆನಾಲ್ ಮೂಲಕ ನೀರನ್ನು ಬಿಟ್ಟರೆ ಈ

ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಅಧಿಕಾರಿಗಳನ್ನು ಕೇಳಿದರೆ 4 ಟಿ.ಎಂ.ಸಿ. ನೀರಿರುವುದರಿಂದ ಬಿಡಬೇಡಿ ಎಂದು ಆದೇಶ ಬಂದಿದೆ ಎಂದು ಹೇಳುತ್ತಾರೆ. ಹಿಡ್ಕಲ್ ಡ್ಯಾಂ ನಲ್ಲಿ 4 ಟಿ.ಎಂ.ಸಿ. ನೀರಿರುವುದರಿಂದ ಅದನ್ನು ಕೆನಾಲ್ ಮೂಲಕ ಹಳ್ಳಿಗಳಿಗೆ ಬಿಟ್ಟರೆ ಕುಡಿಯುವ ನೀರಿನ ವ್ಯವಸ್ಥೆ ಸಾಕಷ್ಟು ಆಗುತ್ತದೆ. ದಯವಿಟ್ಟು ಅದನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ (ನಿಪ್ಪಾಣಿ) :– ಮಾನ್ಯ ಅಧ್ಯಕ್ಷರೆ, ಚಿಕ್ಕೋಡಿ ತಾಲ್ಲೂಕು ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾಗಬೇಕು. ನಾವು ಕೆ.ಡಿ.ಪಿ. ಸಭೆಯಲ್ಲಿ ಮತ್ತು ಬೆಳಗಾಂಗೆ ಕಂದಾಯ ಸಚಿವರು ಬಂದಾಗ ಹೇಳಿದ್ದೆವು. ಆದರೂ ಅದು ಆಗಿಲ್ಲ. ಆದ್ದರಿಂದ ಚಿಕ್ಕೋಡಿ ತಾಲ್ಲೂಕನ್ನು ಬರಪೀಡಿತ ತಾಲ್ಲೂಕಿನಲ್ಲಿ ಸೇರಿಸಬೇಕು. ಏಕೆಂದರೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಮೂರು ಜನ ಶಾಸಕರ ಕ್ಷೇತ್ರ ಬರುತ್ತದೆ. ಅಲ್ಲಿ ಕುಡಿಯುವ ನೀರಿನ ಅಭಾವವಿದೆ. ಕಂದಾಯ ಸಚಿವರು ಅದರ ಬಗ್ಗೆ ಗಮನಹರಿಸಬೇಕು. ಕುಡಿಯುವ ನೀರಿಗೆ ಹಿಡ್ಕಲ್ ಡ್ಯಾಂನಿಂದ ಚಿಕ್ಕಲಗಾವ್ ಕೆರೆಯವರೆಗೆ ನೀರು ಬರುವಂತೆ ಜಿಲ್ಲಾಧಿಕಾರಿಯವರಿಗೆ ಆದೇಶ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :– ಮಾನ್ಯ ಅಧ್ಯಕ್ಷರೆ, ನಮ್ಮ ಬೀದರ್ ಜಿಲ್ಲೆಯೊಳಗೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕಾರಂಜ ಮತ್ತು ಚುಳಕಿನಾಲ ಎಂಬ ಎರಡು ನೀರಿನ ಪ್ರಾಜೆಕ್ಟ್ ಇದೆ. ಆದರೆ ನಮ್ಮ ಕ್ಷೇತ್ರದ ಯಾವ ಗ್ರಾಮಕ್ಕೂ ಕುಡಿಯುವ ನೀರಿಗೆ ಅವಕಾಶವಾಗಲಿಲ್ಲ. ಚುಳಕಿನಾಲ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಆದರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಬಸವಕಲ್ಯಾಣ ತಾಲ್ಲೂಕಿಗೆ ಮಾಡುತ್ತಾರೆ. ಒಂದು ಕಾರಂಜ ಮತ್ತೊಂದು ಚುಳಕಿನಾಲ. ಆ ಎರಡೂ ಯೋಜನೆಗಳು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಆದರೆ, ನನ್ನ ಕ್ಷೇತ್ರದ ಯಾವುದೇ ಗ್ರಾಮಕ್ಕೆ ಕುಡಿಯುವ ನೀರಿಗೆ ಅವಕಾಶವಾಗಲಿಲ್ಲ. ಚುಳಕಿನಾಲ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಕುಡಿಯುವ ನೀರಿನ ವ್ಯವಸ್ಥೆಯನ್ನು ಬಸವಕಲ್ಯಾಣ ತಾಲ್ಲೂಕಿಗೆ ಮಾಡುತ್ತಾರೆ. ಈ ಕಾರಂಜ ಯೋಜನೆ ನನ್ನ ಕ್ಷೇತ್ರದಲ್ಲಿರುವುದು, ನಮ್ಮ ರೈತರು ಜಮೀನನ್ನು ಕೊಟ್ಟರು, ಅದರಿಂದ ಭಾಲ್ಕಿ ಮತ್ತು ಬೀದರ್‌ನವರು ಕುಡಿಯುವ ನೀರನ್ನು ಬಳಸುತ್ತಾರೆ. ಆದರೆ ನನ್ನ

ಕ್ಷೇತ್ರದಲ್ಲೂ ಎರಡು ಡ್ಯಾಂ ಇರುವುದರಿಂಟ ಒಂದು ಗ್ರಾಮಕ್ಕೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ದೇಶ ಸ್ವತಂತ್ರ್ಯವಾದ ಮೇಲೆ ಇನ್ನೂ ಕೂಡ ನಾವು ಒಂದು ಗ್ಲಾಸ್ ಕುಡಿಯುವ ನೀರಿಗಾಗಿ ಕೇಳುತ್ತಿದ್ದೇವೆ. ಯಾವುದೇ ಸರ್ಕಾರ ಬಂದು ಹೋದರೂ ಕೂಡ ಶಾಶ್ವತವಾಗಿ ಕುಡಿಯುವ ನೀರನ್ನು ಪರಿಹಾರ ಮಾಡಲಿಲ್ಲ. ಇದು ಏತಕ್ಕೆ ಹೀಗೆ ಆಗುತ್ತದೆಂದು ಈ ವಿಚಾರವನ್ನು ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ.

ಈಗ ನಾವು ಈ ಏಪ್ರಿಲ್ ತಿಂಗಳಿನಲ್ಲಿದ್ದೇವೆ. ಟ್ಯಾಂಕರ್‌ಗಳ ಮೂಲಕ ಸುಮಾರು ಹಳ್ಳಿಗಳಿಗೆ ನಾವು ನೀರನ್ನು ಸರಬರಾಜು ಮಾಡುತ್ತೇವೆ, ಅದರಿಂದ ಏನು ಉಪಯೋಗವಿದೆ? ಅದರಿಂದ ಗುತ್ತಿಗೆದಾರನಿಗೆ, ಲಾರಿ ಮಾಲೀಕನಿಗೆ ಉಪಯೋಗವಿದೆ. ಅವನು ಹತ್ತು ಟ್ಯಾಂಕರ್‌ಗಳಲ್ಲಿ ನೀರನ್ನು ಸರಬರಾಜು ಮಾಡುತ್ತಾ ಅವನಿಗೆ ಉಪಯೋಗವಾಗುತ್ತಿದೆ. ಸರ್ಕಾರಕ್ಕೆ ಹಣವು ಉಳಿಯುವುದಿಲ್ಲ, ಬಡವರಿಗೆ ಎಲ್ಲಿ ನೀರಿಗೆ ಅಭಾವವಿದೆ ಅಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಆದುದರಿಂದ ದಯವಿಟ್ಟು ನಾನು ಸರ್ಕಾರಕ್ಕೆ ಒಂದು ಮನವಿಯನ್ನು ಮಾಡುತ್ತೇನೆ. ಉಳಿದ 8–10 ತಿಂಗಳಿಗೇನು ಬಾಕಿ ಇವೆ, ಗ್ರಾಮಗಳನ್ನು ಗುರ್ತಿಸಿ 6 ತಿಂಗಳ ಮುಂಚೆ ಕುಡಿಯುವ ನೀರಿಗೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕು.

– ಎರಡನೇ ವಿಷಯವೇನೆಂದರೆ, ಬರಗಾಲಕ್ಕೆ ಸಂಬಂಧಿಸಿದಂತೆ ನಮ್ಮ ಕಂದಾಯ ಮಂತ್ರಿಗಳಾದ ಜಗದೀಶ್ ಶೆಟ್ಟರ್‌ರವರು ಜಿಲ್ಲಾಧಿಕಾರಿಗಳ ಮುಖಾಂತರ ಹಣ ಕೊಡುತ್ತಾರೆ. ಅವರು ನಮಗೆ ಹೇಳಲಾರದೆ, ಕೇಳಲಾರದೆ ಅವರೇ ಒಂದು ಯೋಜನೆ ತಯಾರು ಮಾಡಿ, ಅಂದಾಜು ತಯಾರಿಸಿ ಖರ್ಚು ಮಾಡುತ್ತಾರೆ. ದಯವಿಟ್ಟು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಅದನ್ನು ತಡೆಹಿಡಿಯಬೇಕು. ಎಲ್ಲಾ ಶಾಸಕರ ನಿಧಿಯ ಹಣವನ್ನು ಜಿಲ್ಲಾಧಿಕಾರಿಗಳು ಹೇಳಿದ್ದಕ್ಕೆ ಕೊಡಬೇಕು, ನಾವು ಮತ್ತೊಂದು ಇನ್ನೊಂದು ಅಂದಾಜು ಮಾಡಿ ನಾವು ಕೊಟ್ಟರೆ ಅದನ್ನು ಅಪ್ರೂವಲ್ ಮಾಡುವುದಿಲ್ಲ. ನಮ್ಮ ಸರ್ಕಾರದ್ದು ಕಂಡಿಷನ್ ಇದೆ, ನೀವು ಇಂತಿಂತಿಹದ್ದಕ್ಕೆ ಕೊಡಲೇಕೆಂದು ಹೇಳುತ್ತಾರೆ. ಶಾಸಕರ ನಿಧಿ ಎಂದು ಹಣವಿರುವುದು, ಕೊಡುವುದು ಸರ್ಕಾರ, ಆದರೆ ಜಿಲ್ಲಾಧಿಕಾರಿಗಳು ಹೇಳಿದಂತೆ ನಾವು ಕಾರ್ಯಕ್ರಮವನ್ನು ರೂಪಿಸಬೇಕು. ಇದನ್ನು ತಪ್ಪಿಸಬೇಕೆಂದು ನಾನು ದಯವಿಟ್ಟು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. CRF ಮತ್ತು ನಬಾರ್ಡ್‌ನಿಂದ ರಸ್ತೆ ಕೆಲಸಗಳು ನಡೆಯುತ್ತಿವೆ, ಆದರೆ ಅವೆಲ್ಲವೂ ಕೂಡ ಕಳಪೆ ಮಟ್ಟದ್ದಾಗಿವೆ. ದಯವಿಟ್ಟು ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಅವರು ಯಾರೇ ಗುತ್ತಿಗೆದಾರರಿರಲಿ, ಅವರು ಎಂತಹವರೇ ಇರಲಿ, ಅದು ಹತ್ತು ವರ್ಷದಿಂದ ನಡೆಯುತ್ತಿದೆ, ಯಾವುದೇ ರಸ್ತೆ ಸರಿಯಾಗಿಲ್ಲ. 6 ತಿಂಗಳಿನಲ್ಲಿ ಮಾಡಿರುವ ರಸ್ತೆ 6 ತಿಂಗಳಿನಲ್ಲಿ ಹಾಳಾಗುತ್ತಿದೆ. ಆದುದರಿಂದ ದಯವಿಟ್ಟು ಇದನ್ನು ತನಿಖೆ ಮಾಡಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಾ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪ್ರಭಾಕರ ಬಂಗೇರ್ (ಬೆಳ್ತಂಗಡಿ) :- ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿಯು ಕೂಡ ಮಳೆ ಸಾಕಷ್ಟು ಬರುತ್ತದೆ, ಆದರೆ ನೀರಿನ ಬರವಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಅಲ್ಲಿ ಕುಡಿಯುವ ನೀರಿಗೂ ಕೂಡ ಕಷ್ಟವಾಗುತ್ತಿರುವ ಸಂದರ್ಭದಲ್ಲಿ ಶಾಶ್ವತವಾದ ಪರಿಹಾರವನ್ನು ಮಾಡುವ ಅವಶ್ಯಕತೆ ಇದೆ ಎಂದು ನನಗನಿಸುತ್ತಿದೆ. ಈ ಒಂದು ಸಂದರ್ಭದಲ್ಲಿ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡುವುದು ಕುಡಿಯುವ ನೀರಿನ ತಾತ್ಕಾಲಿಕ ಪರಿಹಾರ ಮಾಡುವುದರ ಜೊತೆಗೆ ಶಾಶ್ವತವಾದ ಪರಿಹಾರದ ಕಡೆಗೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಹಾಗಾಗಿ ಮಳೆ ನೀರು ನೇರವಾಗಿ ನದಿಗೆ ಹೋಗುವ ಸಂದರ್ಭದಲ್ಲಿ ಅಲ್ಲಲ್ಲಿ ನೀರನ್ನು ಇಂಗಿಸುವುದು, ಇಂಗಿಸಲು ಗುಂಡಿಗಳನ್ನು ತೆಗೆಯುವುದು ಮತ್ತು ಕೆರೆಗಳ ಹೂಳೆತ್ತುವುದನ್ನು ಮಾಡದಿದ್ದರೆ ಖಂಡಿತವಾಗಿಯೂ ಶಾಶ್ವತವಾದ ಪರಿಹಾರವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ನದಿಗಳಲ್ಲಿಯೂ ಕೂಡ ಅಲ್ಲಲ್ಲಿ ಕಿಂಡಿ ಅಣೆಕಟ್ಟುಗಳನ್ನು ಕಟ್ಟಿ ಆ ಮೂಲಕ ನೀರನ್ನು ಇಂಗಿಸುವ ವ್ಯವಸ್ಥೆಯನ್ನು ಮಾಡಿದಾಗ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಖಂಡಿತವಾಗಿಯೂ ನೀರಿನ ಸಮಸ್ಯೆ ಬಗೆಹರಿಯಬಹುದು. ಅದರ ಜೊತೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನದಿಗಳು ಪಶ್ಚಿಮವಾಗಿ ಹರಿಯುತ್ತಿರುವುದನ್ನು ಜೋಡಣೆ ಮಾಡಿದರೆ ಒಳ್ಳೆಯದು. ಹಿಂದಿನ ಮಾಜಿ ಶಾಸಕರಾದ ಎ.ಜಿ. ಕೊಡಗಿಯವರು ಪ್ರಸ್ತಾವನೆಯನ್ನು ಮಂಡಿಸಿದ್ದಾರೆ. ಆ ಪ್ರಕಾರ ನದಿಗಳನ್ನು ಜೋಡಣೆ ಮಾಡಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ, ಕೃಷಿಯ ಹಾಗೂ ವಿದ್ಯುತ್ ತಯಾರು ಮಾಡಲು ನೀರು ಸಿಗುತ್ತದೆಂದು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಹಿನ್ನೆಲೆಯಲ್ಲಿ ಅದಕ್ಕೆ ಸರಿಯಾದ

ಒಂದು ಸಮಿತಿಯನ್ನು ರಚನೆ ಮಾಡಿ ಅದನ್ನು ಕೂಡ ಮಾಡಿದಾಗ ಈ ಎರಡೂ ಜಿಲ್ಲೆಗೆ ಶಾಶ್ವತವಾದ ನೀರಿನ ಪರಿಹಾರವಾಗಬಹುದು.

ಇದಕ್ಕೆ ಸರ್ಕಾರ ಹೆಚ್ಚಿನ ಒತ್ತಡವನ್ನು ಕೊಡಬೇಕೆಂದು ಹೇಳುತ್ತೇನೆ. ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡುತ್ತಾ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಮುಖವಾಗಿ ಹರಿಯುತ್ತಿರುವ ನದಿಗಳನ್ನು ತಿರುಗಿಸಿದಾಗ, ಬಾಕಿ ಕಡೆಗಳಾದ ಕೋಲಾರ, ಚಿತ್ರದುರ್ಗ, ಸೇರಿದಂತೆ ಬೇರೆ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕಾಗಿದೆ. ಹಾಗಾಗಿ ಆ ನದಿಗಳನ್ನು ತಿರುಗಿಸಿದಾಗ ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ತೊಂದರೆಯಾಗುವ ಲಕ್ಷಣಗಳಿವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಬಗ್ಗೆ ಚರ್ಚೆಗಳನ್ನು ಮಾಡಿ ಸರಿಯಾದ ಕ್ರಮವನ್ನು ಸರ್ಕಾರ ಜರುಗಿಸಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಧನ್ಯವಾದಗಳು.

ಶ್ರೀ ಆರ್. ಧ್ರುವನಾರಾಯಣ್ (ಸಂತೆಮರಳ್ಳಿ) :- ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಬರ ಬಂದಿದ್ದರೂ ಈ ಸಾರಿ ನಮ್ಮ ಜಿಲ್ಲೆಗೆ ಭೀಕರವಾದ ಬರ ಬಂದಿದೆ, ಇದು ಮೊದಲಸಲವಲ್ಲ. ಮೊದಲಿನಿಂದಲೂ ಕೂಡ ನಮ್ಮ ಜಿಲ್ಲೆ ಬರ ಪ್ರದೇಶಕ್ಕೆ ತುತ್ತಾಗಿರುವ ಜಿಲ್ಲೆಯಾಗಿದೆ. ಮೊದಲಿನಿಂದಲೂ ಕೂಡ ನಮ್ಮ ಜಿಲ್ಲೆಯ ಬಗ್ಗೆ ಅಸಡ್ಡೆ ಅದು ಏತಕ್ಕೋ ಗೊತ್ತಿಲ್ಲ. ಈಗಾಗಲೇ ನನ್ನ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಇದೆ. ಜೊತೆಯಲ್ಲಿ ನನ್ನ ಜಿಲ್ಲೆಯಲ್ಲಿರುವ ಕೂಲಿ ಕಾರ್ಮಿಕರು ಕೆಲಸವನ್ನು ಹುಡುಕಿಕೊಂಡು ಕೊಡಗು ಜಿಲ್ಲೆಯಲ್ಲಿರುವ ಕಾಫಿ ಪ್ಲಾಂಟರ್ಸ್ ಹತ್ತಿರ ಸಾವಿರಾರು ಮಂದಿ ಕೆಲಸಕ್ಕೆ ಸೇರಿಕೊಂಡಿದ್ದಾರೆ. ಅದನ್ನು ಬಿಟ್ಟರೆ ಕೇರಳ ರಾಜ್ಯದಲ್ಲಿರುವ ಟೀ ಎಸ್ಟೇಟ್‌ಗಳು ಮತ್ತು ಊಟಿ ಈ ಭಾಗದಲ್ಲಿ ನಮ್ಮ ಚಾಮರಾಜನಗರ ಜಿಲ್ಲೆಯ ಬಹಳಷ್ಟು ಜನರು ಕೂಲಿ ಹುಡುಕಿಕೊಂಡು ವಲಸೆ ಹೋಗಿರುವುದು ಬಹಳ ನೋವಿನ ವಿಚಾರ. ಕುಡಿಯುವ ಸಮಸ್ಯೆ ಬಹಳಷ್ಟು ಇದೆ.

ನಾವು ಹಲವಾರು ಸಾರಿ ಜಿಲ್ಲಾ ಪಂಚಾಯಿತಿಯ CEO ಹತ್ತಿರ ಎಷ್ಟು ಮನವಿಗಳನ್ನು ಮಾಡಿದ್ದೇವೆ. ಆದರೆ ಜಿಲ್ಲಾ ಪಂಚಾಯಿತಿಗೆ ಒದಗಿಸುವ ಹಣವನ್ನು ನಮಗೆ ಕೊಡಲು ಬರುವುದಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ನೀರಾವರಿ ಮಾನ್ಯ

ಮಂತ್ರಿಗಳಾದ ರವೀಂದ್ರನಾಥ್‌ರವರು ಇಲ್ಲೇ ಇದ್ದಾರೆ, ಅವರ ಹತ್ತಿರ ಕೂಡ ನಾನು ಹಲವಾರು ಸಾರಿ ಹೋದೆ, ಅವರು ಕೂಡ CEO ರವರಿಗೆ ಎದುರುಗಡೆ ಮಾತನಾಡಿ ಹೇಳಿದ್ದಾರೆ. ಆದರೆ ಅವರು, ಅಲ್ಲೇನು ಲಿಂಕ್ ಡಾಕ್ಯುಮೆಂಟ್ ಇದೆ ಅದಕ್ಕೆ ಮಾತ್ರ ಉಪಯೋಗವಾಗುತ್ತದೆ, ತತ್‌ಕ್ಷಣ ಎಲ್ಲಿ ಬೋರ್‌ವೆಲ್ ನಿಂತಿದೆ ಅದಕ್ಕೆ ಉಪಯೋಗಿಸುವುದಕ್ಕೆ ಬರುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಆದರೂ ಕೂಡ ನಾವು ಯಾರೂ ರಿಗ್ ಓನರ್ಸ್ ಇದ್ದರೆ, ಅವರನ್ನು ಕರೆಯಿಸಿ ಮಾತನಾಡಿ, ನೀವು ಬೋರ್ ಕೊರೆಯಿರಿ, ಮತ್ತೆ ದುಡ್ಡು ಬಂದ ತಕ್ಷಣ ಅದಕ್ಕೆ ಹೊಂದಾಣಿಕೆ ಮಾಡಿಕೊಳ್ಳೋಣ ಎಂದು ನಾವು ಅಲ್ಪಸ್ವಲ್ಪ ಈ ಕಾರ್ಯದಲ್ಲಿ ತೊಡಗಿದ್ದೇವೆ. ನಿಜವಾಗಿಯೂ ಕೂಡ ಬಹಳಷ್ಟು ಕುಡಿಯುವ ನೀರಿನ ಸಮಸ್ಯೆ ನಮ್ಮ ಜಿಲ್ಲೆಯಲ್ಲಿದೆ.

ಇವತ್ತು ಅಧಿವೇಶನದ ಕೊನೆಯ ದಿವಸ ಇನ್ನೇನು ಒಂದು ಗಂಟೆಯಲ್ಲಿ ಮುಗಿಯುತ್ತದೆ. 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. 100 ಕೋಟಿ ಕೊಡುತ್ತೇವೆನ್ನುವ ಆಶ್ವಾಸನೆ ಇದೆಯೇ ವಿನಹಃ ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಲುವಾಗಿ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಯಾರೂ ಸಹ ಹೇಳಿಲ್ಲ. ಅಧಿವೇಶನ ಇನ್ನೇನು ಒಂದು ಗಂಟೆ ಸಮಯದಲ್ಲಿ ಮುಗಿಯುತ್ತಿದೆ, ದಯಮಾಡಿ, ಆ ಸಂಬಂಧಪಟ್ಟ ಮಂತ್ರಿಗಳು ಕೂಡ ಇದ್ದರೆ, ಅವರ ಹತ್ತಿರ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಈ ಅಧಿವೇಶನದಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಿ ತುಂಬಾ ಕುಡಿಯುವ ನೀರಿಗೆ ಸಮಸ್ಯೆ ಇದೆಯೋ ಅಲ್ಲಿ ಈಗ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆನ್ನುವುದನ್ನು ದಯಮಾಡಿ ಅವರು ಉತ್ತರ ಕೊಡುವ ಸಂದರ್ಭದಲ್ಲಿ ತಿಳಿಸಬೇಕೆಂದು ತಿಳಿಸುತ್ತೇನೆ.

ಇನ್ನು ಒಂದೇ ಒಂದು ಗಂಭೀರವಾದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರ ಬಂದು ವರ್ಷವಾಗಿದೆ. ಪ್ರಗತಿ ಪರಿಶೀಲನ ಸಭೆ ಮೂರು ತಿಂಗಳಿಗೊಂಡು ಸಾರಿ ಆಗಬೇಕು, ನಮ್ಮ ಜಿಲ್ಲೆಯಲ್ಲಿ 9 ತಿಂಗಳಾದರೂ ಪ್ರಗತಿ ಪರಿಶೀಲನ ಸಭೆಯಾಗಿಲ್ಲವೆಂದರೆ, ಬರದ ಬಗ್ಗೆ ಯಾವರೀತಿಯಾಗಬಹುದೆಂಬುದನ್ನು ತಾವೇ ಯೋಚನೆ ಮಾಡಬೇಕು. ಈ ಕುಡಿಯುವ ನೀರಿನ ಅಂತರಜಲ ಅಭಿವೃದ್ಧಿಯ ವಿಚಾರವಾಗಿಯೇ ಮೊನ್ನೆ ಡಿ.ಆರ್. ಪಾಟೀಲ್‌ರವರು ಒಂದು ಸಭೆಯನ್ನು ಕರೆದಿದ್ದರು. ನಿಜವಾಗಿಯೂ ನಮ್ಮಲ್ಲಿ ಹೊಸಪೇಟೆಯ ಒಬ್ಬ ಶಾಸಕರಿದ್ದಾರೆ, ಅವರ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಯಾವರೀತಿಯಾಗಿ ಪರಿಹಾರ

ಮಾಡಿದ್ದಾರೆಂಬುದನ್ನು ಸಹ ನಿದರ್ಶನವಾಗಿ ಹೇಳಿದ್ದಾರೆ. ವಾಟರ್ ಕನ್ಸರವೇಷನ್ ಅಕ್ಟಿವಿಟಿಸ್‌ಗೆ ಹೆಚ್ಚಿನ ಹಣವನ್ನು ನಾವು ಬಿಡುಗಡೆ ಮಾಡಿ, ಕೃಷಿ ಹೊಂಡಗಳನ್ನು ತೋಡಿಸುವುದು, ನಾಲ ಬದಗಳು, ಚೆಕ್ ಡ್ಯಾಂಗಳನ್ನು ಮಾಡಿದರೆ ನಿಜವಾಗಿ ಕೂಡ ಬಹಳಷ್ಟು ಸುಧಾರಣೆಯಾಗುತ್ತದೆ. ಆ ಒಂದು ನಿಟ್ಟಿನಲ್ಲಿ ಆ ಅಕ್ಟಿವಿಟಿಸ್‌ಗೆ ಹೆಚ್ಚಿನ ಹಣವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮುಖೇನ ಒತ್ತಾಯ ಮಾಡುತ್ತೇನೆ. ತತ್‌ಕ್ಷಣ ಒಂದು ಕ್ಷೇತ್ರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(7 : 00 pm)

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :- ಮಾನ್ಯ ಅಧ್ಯಕ್ಷರೆ, ಅವರೇನು ನಿಮಗೆ ಒಂದು ಸಲಹೆ ಕೊಟ್ಟರು, ಮಾನ್ಯ ಜಗದೀಶ್‌ರವರೇ, ನಾವು ಇವತ್ತು Assembly adjourn ಆದ ತಕ್ಷಣ ಕ್ಷೇತ್ರಗಳಿಗೆ ಹೋಗಬೇಕು. ರಿಗ್ ಓನರ್ಸ್‌ಗೆ ಹಣ ಬಾಕಿ ಇರುವುದರಿಂದ ಅವರು ಮುಂದೆ ಬಂದು ಕೆಲಸ ಮಾಡುತ್ತಿಲ್ಲ. ನಾಳೆ ಊರುಗಳಿಗೆ ಹೋದ ತಕ್ಷಣ ಜನ ಪ್ರಶ್ನೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ತಾವು ದಯಮಾಡಿ ದೊಡ್ಡ ಮನಸ್ಸು ಮಾಡಿ, ರಾತ್ರಿ ಒಳಗಾಗಿ Deputy Commissioners ಗೆ ಮತ್ತು CEO ಗಳಿಗೆ Telephonic message ಕೊಟ್ಟುಬಿಡಿ. ನಾಳೆಯಿಂದ at least, ಮಧ್ಯಾಹ್ನದಿಂದ ಆಚೆಗೆ ರಿಗ್ಸ್ ತಂದು ಕೆಲಸ ಮಾಡುವುದಕ್ಕೆ ನೀವು ಫೈನಾನ್ಸ್ ವ್ಯವಸ್ಥೆ ಮಾಡಿದರೆ ಪರವಾಗಿಲ್ಲ, ಅಸೆಂಬ್ಲಿ ಮುಗಿಯಿತು, ಹೇಳಿ ಬಂದಿದ್ದಕ್ಕೆ ಕೆಲಸ ಆಗುತ್ತಿದೆ ಎನ್ನುವ ಒಂದು ವಿಶ್ವಾಸ ಬರುತ್ತದೆ.

ಎರಡನೆಯದು ಕೆಲವು ಕಡೆ ಪೈಪ್‌ಲೈನ್ ಪ್ರಾಬ್ಲಮ್ ಇದೆ. ಒಂದು ಊರಿನಲ್ಲಿ 7 ರಿಂದ 8 ಬೋರ್‌ವೆಲ್‌ಗಳನ್ನು ಕೊರೆದರೂ ನೀರು ಸಿಗುವುದಿಲ್ಲ. ಕೆಲವು ಊರುಗಳಲ್ಲಿ ಸ್ವಲ್ಪ ಊರಿನಿಂದ ಆಚೆ ಹೋಗಿ ಕೊರೆಯಬೇಕಾಗುತ್ತದೆ. ಅಲ್ಲಿಂದ ಬರಬೇಕಾದರೆ ನಾವು We haveto draw the pipeline. ಅದು CEO ಕೊಡುತ್ತಾರೋ, Deputy Commissioner ಕೊಡುತ್ತಾರೋ, ಆ ambiguity ಇರುವುದು ಬೇಡ, ಅವರಿಗೆ clarify ಮಾಡಿ ಆ ಹಣ ಸಿಗುವ ಹಾಗೆ ಮಾಡಲಿ. ಬಹಳ ಮುಖ್ಯವಾದುದು ಏನೆಂದರೆ, ಮೇಲಿಂದ ಮೇಲೆ ಈ Deputy Commissioners ಗೆ ಪಾಪ ಯಾರು ಭಯ ಹುಟ್ಟಿಸುತ್ತಾರೋ ಗೊತ್ತಿಲ್ಲ. We

have a good Deputy Commissioner. ನಾವು ಬಹಳ ಬಂದೋಬಸ್ತ್ ಆಗಿ ರೋಡ್‌ಗಳನ್ನು ಮಾಡುತ್ತೇವೆ. 70 : 30 maintain ಮಾಡುತ್ತೇವೆ. ಯಾವ conditions ಅನ್ನೂ violate ಮಾಡುವುದಿಲ್ಲವೆಂದರೂ ಕೂಡ concrete ರೋಡ್ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ.

ಅಂದರೆ, ಜೆಲ್ಲಿ manual labour ನಿಂದ ಮಾಡಬೇಕು, ಮರಳು ಹೊತ್ತುಕೊಂಡು ಬರಬೇಕು, ಅಲ್ಲಿಂದ ಬಂದು ಕೆಲಸ ಮಾಡುವುದೆಲ್ಲವನ್ನೂ ಲೇಬರ್‌ನವರೇ ಮಾಡಬೇಕು, ಸಿಮೆಂಟ್ ಒಂದೇ ಬರತಕ್ಕಂಥಾದ್ದು. estimate ಮಾಡಿ ತೋರಿಸಿದರೂ ಕೂಡ ನಾನೇನು ಹೇಳುತ್ತೇನೆಂದರೆ, ಮಣ್ಣನ್ನು ತೆಗೆದು ಅಲ್ಲಿ ಹಾಕಿ ನಾಳೆ ಕೋಟ್ಯಾಂತರ ರೂಪಾಯಿ ಖರ್ಚಾಗಿದ್ದು ಲೆಕ್ಕ ಇರುತ್ತದೆ ಹೊರತು, ಯಾವುದೇ ಒಂದು ಶಾಶ್ವತವಾದ ಆಸ್ತಿ ನಿರ್ಮಾಣ ಮಾಡಿದಂತಾಗುವುದಿಲ್ಲ. ಗ್ರಾಮಗಳ ಒಳಗೆ ಇರತಕ್ಕಂಥ ರಸ್ತೆಗಳ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ. ಸುಮಾರು ಗ್ರಾಮಗಳಲ್ಲಿ ಒಂದು ಅಥವಾ ಎರಡು ರಸ್ತೆಗಳಿರುತ್ತವೆ. ಬರಗಾಲದ ನೆಪದಲ್ಲಿ ನಾವು ಆ ಒಂದು single drain ಮಾಡತಕ್ಕಂಥಾದ್ದು, concrete road ಮಾಡತಕ್ಕಂಥಾದ್ದು ಮಾಡಿದರೆ, ನಾವು ವ್ಯಯ ಮಾಡಿದ ಹಣ ಸಾರ್ಥಕವಾಗುತ್ತದೆ. ಶಾಶ್ವತವಾಗಿ ಅದು ಉಳಿಯುತ್ತದೆ.

ಯಾವ ಕಾರಣಕ್ಕೂ ನಿಮ್ಮ ರೆಗ್ಯುಲೇಶನ್ಸ್ ಏನಿದೆ, ಅದನ್ನು ವಯಲೇಟ್ ಮಾಡುವುದಿಲ್ಲ. ಅದಕ್ಕೆ ಯಾರು ಕಾರಣ ದಯಮಾಡಿ ಸ್ಪಷ್ಟೀಕರಣ ಕೊಟ್ಟು ಅಧಿಕಾರಿಗಳಿಗೆ ಹೇಳಿ. ಅವರ ರೆಗ್ಯುಲೇಶನ್ಸ್ ಅನ್ನು ನಾವು maintain ಮಾಡುತ್ತೇವೆ. ಶಾಶ್ವತವಾದ ಆಸ್ತಿ ನಿರ್ಮಾಣವಾಗಬೇಕು. ಲೋಕೋಪಯೋಗಿ ಇಲಾಖೆಯವರಿಗೆ ಕೆಲಸವೇ ಇಲ್ಲ. PWD ಯವರು ಏನು ಕೆಲಸ ಮಾಡಬಹುದು ಎಂದರೆ, mettle collection ಮಾಡಿ ಇಟ್ಟುಕೊಂಡರೆ ಸ್ವಲ್ಪ ಮಳೆ ಆದರೆ ಕೆಲವರು approache road ಗಳಿಗೆ consolidation ಮಾಡಿಕೊಟ್ಟರೆ ಶಾಶ್ವತವಾದಂತಹ ರಸ್ತೆ ಆಗುತ್ತದೆ. ಎಲ್ಲಾ asphalted road ಆಗಬೇಕು, black top road ಆಗಬೇಕೆಂದು ಹೇಳಿದರೆ ಆಗುವುದಿಲ್ಲ. ಮೊದಲು ನಾವು ಮಾಡುತ್ತಿದ್ದೆವು. ಈಗ mettle collection avoid ಮಾಡಿ ಬಿಟ್ಟಿದ್ದೀರಿ. ಇವರ ಕಲ್ಪನೆ ಹೇಗಿದೆ ಎಂದರೆ mettle collection ಇದ್ದರೆ, ನಾವೆಲ್ಲಾ ಹೋಗಿ ಕ್ರಶರ್‌ನಲ್ಲಿ ಹೊಡೆದುಕೊಂಡು ಬರುತ್ತೇವೆ ಎಂದು ಇದೆ. ನಮ್ಮಲ್ಲಿ ಎಲ್ಲಾ ಜನಾಂಗದ ಜನ ನಿಜವಾಗಿ ಹೋಗಿ ಕೈಯಲ್ಲಿಯೇ ಹೊಡೆಯತಕ್ಕಂಥದ್ದು ಇವತ್ತಿಗೂ ಇದೆ. ಆ ಜನರಿಗೆ ಕೆಲಸ ಸಿಗುತ್ತದೆ. mettle

collection ಮಾಡುತ್ತಾರೆ, ಆಸ್ತಿ ಇರುತ್ತದೆ, ನೀವು ಹೋಗಿ measurement ತೆಗೆದುಕೊಳ್ಳುತ್ತೀರಿ, ಅವರು ಏನು ಕೆಲಸ ಮಾಡುತ್ತಾರೆ ಅದಕ್ಕೆ payment ಕೊಡುತ್ತೀರಿ. estimate ನಲ್ಲಿ provision ಇಟ್ಟುಕೊಂಡಿರುತ್ತೀರಿ, ನಾಳೆ ದಿವಸ ಒಂದು ಚೂರು ಮಳೆ ಬಿದ್ದು ಹದ ಆದಾಗ ಅದನ್ನು consolidate ಮಾಡಿಕೊಳ್ಳುವುದಕ್ಕಾಗುತ್ತದೆ. ಇದಕ್ಕಿಂತ ಹೆಚ್ಚು ನಾನು ಏನೂ ಹೇಳುವುದಿಲ್ಲ. ದಯಮಾಡಿ ರಿಗ್ಸ್ ಮಾತ್ರ ನಾಳೆ ಮೂವ್ ಮಾಡುವ ಹಾಗೆ ಮಾಡದೇ ಹೋದರೆ, ಬಹಳ ತೊಂದರೆಯಾಗುತ್ತದೆ. ಅಧ್ಯಕ್ಷರೆ, ತಾವು ನಮಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆ ಸಲ್ಲಿಸುತ್ತಿದ್ದೇನೆ. ಮತ್ತೆ ನಾವು ಸೇರುವುದು ತಡವಾಗುತ್ತದೆ. ತಾವು ಅತ್ಯಂತ ಗಂಭೀರವಾಗಿ ಈ ವಿಚಾರದಲ್ಲಿ ಆಲೋಚನೆ ಮಾಡಿ, ಕಾರ್ಯೋನ್ಮುಖರಾಗಬೇಕು. ನಿಮಗೆ ನಮ್ಮ ಪೂರ್ಣ ಸಹಕಾರ ಇರುತ್ತದೆ. ದಯಮಾಡಿ ಒಳ್ಳೆಯ ಹೆಸರು ತೆಗೆದುಕೊಳ್ಳಿ.

ಅಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಜಯಪ್ರಕಾಶ್ ಹೆಗ್ಡೆ, ಮತ್ತು ಶ್ರೀರಾಮರೆಡ್ಡಿ ನೀವೆಲ್ಲಾ ಪ್ರತಿಯೊಂದು ವಿಷಯದಲ್ಲಿ ಮಾತನಾಡುತ್ತೀರಿ. ಇವತ್ತು ಸ್ವಲ್ಪ ತ್ಯಾಗ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, ಎರಡೇ ಎರಡು ವಿಚಾರ ಹೇಳಿ ಬಿಡುತ್ತೇವೆ. ಆ ಮೇಲೆ ನೀವು ನಮಗೆ ಮಾತನಾಡಿ ಎಂದು ಹೇಳಿದರೂ ಮಾತನಾಡುವುದಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಬರಗಾಲವನ್ನು ಅಧ್ಯಯನ ಮಾಡುವುದಕ್ಕಾಗಿ ನೀವು ನಮ್ಮ ಜಿಲ್ಲೆಗೆ ಬಂದಿದ್ದಿರಿ. ನೀವು ಅವತ್ತು ಏನು ಹೇಳಿದ್ದಿರಿ ಎಂದು ದಯವಿಟ್ಟು ದಾಖಲೆ ತೆಗೆಸಿ ನೋಡಿ. ಆ ಪ್ರಕಾರ ಒಂದೇ ಒಂದು ರೂಪಾಯಿ ರಿಲೀಸ್ ಆಗಿಲ್ಲ. ನೀವು ಹಣ ರಿಲೀಸ್ ಮಾಡಿದ್ದೀರಿ, ಅದರ ಬಗ್ಗೆ ನಾವು Action Plan ಮಾಡಿ ಕಳುಹಿಸಿದರೂ ಕೂಡ 15 ದಿವಸ, 20 ದಿವಸ, ಒಂದು ತಿಂಗಳಾದರೂ ಅದನ್ನು approve ಮಾಡುವುದಿಲ್ಲ. ದಯವಿಟ್ಟು ನೀವು ಇದನ್ನು ಸುಲಭಗೊಳಿಸದೇ ಹೋದರೆ ನೀವು ಕೊಟ್ಟಿದ್ದು waste ಆಗುತ್ತದೆ. ಇದು ಒಂದನೆಯದು

ಎರಡನೆಯದು ನೀವು ಒಂದು ಲಕ್ಷ, 50,000, ಎರಡು ಲಕ್ಷ ರೂಪಾಯಿಗಳಂತೆ ನೀವು ಒಂದೊಂದು ಕ್ಷೇತ್ರಗಳಿಗೆ ಕೊಟ್ಟರೆ, ಏನೂ ಮಾಡುವುದಕ್ಕಾಗುವುದಿಲ್ಲ. ನೀವು ಒಂದು ಕ್ಷೇತ್ರಕ್ಕೆ ಮಿನಿಮಮ್ ಒಂದು ಕೋಟಿ

ಹಣವನ್ನು ಕೊಡಲೇ ಬೇಕು. ಒಂದು ಕೋಟಿ ಹಣ ಬಂದಿಲ್ಲ. Installment ಎಂದು ಹೇಳುತ್ತಾರೆ, installment ಪ್ರಕಾರ 10–10 ಲಕ್ಷ ಕೊಡುತ್ತಾರೆ, ಅವರು ಕೊಡುವುದಿಲ್ಲ. ಒಂದೊಂದು Installment ಗೆ ಅವರು ಒಂದು ಕೋಟಿಯಷ್ಟು ಕೊಡಬೇಕು. ಮೂರನೆಯದು ನೀವು Calamity Relief Fund ಕಮಿಟಿ ಏನು ಮಾಡಿದಿರಿ, ಅದರಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಏಕೆ ಸೇರಿಸಿದಿರಿ ಎಂದು ಗೊತ್ತಿಲ್ಲ. ರೆವಿನ್ಯೂಗೂ ಜಿಲ್ಲಾ ಪಂಚಾಯಿತಿಗೂ ಏನು ಸಂಬಂಧ ಇದೆ? ಅವರನ್ನು ಏಕೆ ಸೇರಿಸಿದ್ದೀರಿ? ಅದನ್ನು ದಯವಿಟ್ಟು ತೆಗೆಯಿರಿ.

ಕುಡಿಯುವ ನೀರಿನ ಬಗ್ಗೆ ನೀವು ಹಣವನ್ನು ಎಷ್ಟು ಬೇಗ ಕೊಡುತ್ತೀರೋ ಅಷ್ಟು ನಿಮ್ಮ ಮರ್ಯಾದೆಯೂ ಉಳಿಯುತ್ತದೆ, ನಮ್ಮ ಮರ್ಯಾದೆಯೂ ಉಳಿಯುತ್ತದೆ. ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. Transportation ಇದೆ, ರಿಗ್‌ಗಳನ್ನು ಹಾಕಬೇಕಾಗಿದೆ, Service ಕೊಡಬೇಕಾಗಿದೆ, ಎಲ್ಲ ವಿಧವಾದ ಕೆಲಸ ಆಗಬೇಕಾಗಿದೆ. ಎಲ್ಲಾ ವಿಧವಾದ ಕೆಲಸಗಳು ಆಗಬೇಕಾದರೆ, ಹಿಂದಿನ ಸರ್ಕಾರದಲ್ಲಿ ಮಾನ್ಯ ಸತ್ಯನಾರಾಯಣರವರು ಮಂತ್ರಿಗಳಾಗಿದ್ದಾಗ ಒಂದು ಕೆಲಸ ಮಾಡಿದ್ದರು. ಅದನ್ನು ನೀವು ಮಾಡಿ. ಎಲ್ಲಾ ಇಲಾಖೆಗಳಿಗೂ ನೀವು ಕುಡಿಯುವ ನೀರಿಗಾಗಿ ಏನು ಹಣ ಕೊಟ್ಟಿದ್ದೀರಿ, ZP ಮತ್ತಿತರೆ ಎಲ್ಲ ಇಲಾಖೆಗಳಲ್ಲಿ ಏನೇನು ಹಣ ಇದೆ, ಮತ್ತು Task Force ಗೆ ಅಂತ ಏನು ಕೊಡುತ್ತೀರಿ, ಎಲ್ಲಾ ಹಣವನ್ನು ಪೂಲ್ ಮಾಡಿ ಒಂದೇ ಕಡೆ ಕೊಡಿ. ಸಮಸ್ಯೆ ಪರಿಹಾರವಾಗುತ್ತದೆ. ಅಷ್ಟಷ್ಟು ಅಲ್ಲಲ್ಲಿ ಹಂಚಿಬಿಟ್ಟರೆ ಅದು ಕೆಲಸವಾಗುವುದಿಲ್ಲ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಎಲ್ಲಾ ಹಣವನ್ನು ಪೂಲ್ ಮಾಡಿ Task Force ಗೆ ಕೊಟ್ಟರೆ, ಜೂನ್‌ವರೆಗೆ ಏನಾದರೂ ಸಮಸ್ಯೆ ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆ ಕೆಲಸ ಮಾಡಬೇಕು. ಬರಗಾಲದ ಬಗ್ಗೆ review ಮಾಡುವ ಸಂದರ್ಭದಲ್ಲಿ ಬೇರೆ ಕೆಲಸ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಬೋರ್‌ವೆಲ್‌ಗಳಿಗೆ ನೀರು ಕೊಡಬೇಕು. ನಮಗೆ ಕರೆಂಟ್ ಆರು ಗಂಟೆಗಳ ಕಾಲ ಕೊಡುತ್ತೀರಿ. ಅದು ನಮಗೆ ಸಿಗುತ್ತಿಲ್ಲ. ಮಾನ್ಯ ರೇವಣ್ಣನವರು ಸ್ವಲ್ಪ ನಿಜ ಹೇಳಬೇಕು. ಆರು ಗಂಟೆಗಳ ಕಾಲ ಕೊಡುವ ಕರೆಂಟ್‌ನ್ನು ನೀವು ಹಗಲು ಹೊತ್ತಿನಲ್ಲಿಯೇ ನಮಗೆ ಕರೆಂಟ್ ಕೊಡಬೇಕು. ಇದು ಮೊದಲನೆಯದು. ಬೆಳಗಿನ ಜಾವ ಮೂರು

ಗಂಟೆಗೋ 12 ಗಂಟೆಗೋ ಕರೆಂಟ್ ಕೊಟ್ಟರೆ ಯಾರೂ ಕುಡಿಯುವ ನೀರಿಗೆ ನೀರು ಬಿಡುವುದಿಲ್ಲ. ಏಪ್ರಿಲ್, ಮೇ ಮತ್ತು ಜೂನ್ ಈ ಮೂರು ತಿಂಗಳುಗಳ ಕಾಲ ನೀವು ಹಗಲಲ್ಲಿ ನಮಗೆ ಆರು ಗಂಟೆಗಳ ಕಾಲ ಕರೆಂಟ್ ಕೊಟ್ಟರೆ, ಕನಿಷ್ಠ ಎಲ್ಲ ಊರುಗಳಿಗೂ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಪಟ್ಟಣಗಳಲ್ಲಿ ಕೂಡ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಎರಡನೆಯದು ಮಾನ್ಯ ಸಚಿವರು ಸ್ವಲ್ಪ ಯೋಚನೆ ಮಾಡಬೇಕು. ಗುಜರಾತ್ ಮುಖ್ಯಮಂತ್ರಿಗಳು ನರ್ಮದಾ ನದಿಯಿಂದ 785 ಕಿ.ಮಿ. ಅಂದರೆ ಗಾಂಧಿ ಧಾಮದವರೆಗೆ ಹಳ್ಳಿಗಳಿಗೆ, ಪಟ್ಟಣಗಳಿಗೆ, ಕಾರ್ಖಾನೆಗಳಿಗೆ ಪೈಪ್ ಲೈನ್ ಮೂಲಕ ನೀರು ತೆಗೆದುಕೊಂಡು ಹೋಗಿದ್ದಾರೆ. ಇವು ಶಾಶ್ವತವಾದ ಪರಿಹಾರಗಳು. ನಮ್ಮ ರಾಜ್ಯದಲ್ಲಿ ಈ ತರಹ ಏಕೆ ಚಿಂತನೆ ಮಾಡುತ್ತಿಲ್ಲ? ಪ್ರತಿ ವರ್ಷ ಎಷ್ಟು ಹಣ ಖರ್ಚಾಗುತ್ತದೆ ಎಂದು ನೀವು ಟಾರ್ಗೇಟ್ ಮಾಡಿ. ಹತ್ತು ವರ್ಷಗಳ ದುಡ್ಡು ಒಂದು ಸಾರಿಹಾಕಿದರೆ, ನೀವು ಈ ಭಾಗದಲ್ಲಿ ಕೆ.ಆರ್.ಎಸ್. ಕಡೆಯಿಂದ ಎಲ್ಲಿಯಾದರೂ ಕುಡಿಯುವುದಕ್ಕೆ ನೀರು ಕೊಡಬಹುದು. ಆ ಭಾಗದಲ್ಲಿ ಕೃಷ್ಣ ನದಿಯಿಂದ ನೀರು ಕೊಡಬಹುದು. ಇದನ್ನು ಯಾರೂ ಚಿಂತನೆ ಮಾಡುವುದಿಲ್ಲ. ಇದಕ್ಕೆ ಏನಾಗಿದೆ ಎಂದರೆ, ಬರಗಾಲ ಬಂದರೆ, ಅಧಿಕಾರಿಗಳಿಗೆ, ಕಂಟ್ರ್ಯಾಕ್ಟರ್‌ಗಳಿಗೆ, ಕೆಲವು ರಾಜಕಾರಣಿಗಳಿಗೆ ಕೂಡ ಇದು ಹೊಟ್ಟೆ ತುಂಬುತ್ತದೆಯೇ ವಿನಃ ಇದರಿಂದ ಸಾಮಾನ್ಯ ಮನುಷ್ಯರಿಗೆ ನೀರು ಸಿಗುವುದಿಲ್ಲ.

ನೀವು ಗುಜರಾತಿಗೆ ಹೋಗಿ ನೋಡಿಕೊಂಡು ಬನ್ನಿ. ನರ್ಮದಾ ನದಿಯಿಂದ ಗಾಂಧಿ ಧಾಮ 780 ಕಿ.ಮೀ ಇದೆ. ನಾನು ಹೋಗಿ ನೋಡಿದ್ದೇನೆ. ಅದು ಪ್ರಾರಂಭ ಮಾಡುವ ದಿವಸ ನಾನು ಅಲ್ಲಿ ಇದ್ದೆ. ಮೂರು ವರ್ಷಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ನಾನು ಹೋಗಿ ನೋಡಿದೆ, ನನಗೆ ಅವತ್ತು ಬಹಳ ಸಂತೋಷವಾಯಿತು. ಪಾರ್ಟಿ ಮತ್ತೊಂದು ಮಗದೊಂದು ಬೇರೆ. ಅಭಿವೃದ್ಧಿ ಮಾಡುವಂತಹ ವಿಲ್ ಪವರ್ ಇದ್ದರೆ ಮಾಡಬಹುದು. ನಾನು ನಮ್ಮ ಸರ್ಕಾರ ಇದ್ದಾಗ ಕೂಡ ಅದನ್ನು ಹೇಳಿದ್ದೆ. ಆದರೆ ಆ ಸಮಯದಲ್ಲಿ ಬೇಗನೇ ಆಗಲಿಲ್ಲ. ಈಗ ನಿಮ್ಮದೇ ಆದ ಮುಖ್ಯಮಂತ್ರಿಗಳು ಇರುವುದರಿಂದ ನೀವು ಹೋಗಿ ನೋಡಿಕೊಂಡು ಬಂದು, ಇವರೆಡನ್ನೂ ಮಾಡಬೇಕು.

ಮಾನ್ಯ ರೇವಣ್ಣನವರು ಹಗಲ ಹೊತ್ತಿನಲ್ಲಿ ಕರೆಂಟ್ ಕೊಡಬೇಕು ನೀವು 10 ಗಂಟೆ ಕರೆಂಟ್ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಕನಿಷ್ಟ ಆರು ಗಂಟೆ Uninterrupted current ಕೊಡಿ. ಮಧ್ಯದಲ್ಲಿ ಕರೆಂಟ್ ಹೋಗುತ್ತದೆ. Automatic starter ಕೆಲವು ಕಡೆ ಇವೆ, ಕೆಲವರು ಹಾಕಿರುವುದಿಲ್ಲ. ನೀರೆತ್ತುವ ಬೋರ್‌ವೆಲ್‌ಗಳನ್ನು ಕೆರೆಗಳಲ್ಲಿ ಹಾಕಿದ್ದಾರೆ. ಅವರು ರಾತ್ರಿ ಹೊತ್ತು ಇಲ್ಲಿಂದ ಅಲ್ಲಿಗೆ ನಡೆದುಕೊಂಡು ಹೋಗುವುದಿಲ್ಲ. ಹಾಗಾಗಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ನೀರಿಗೆ ತೊಂದರೆಗಳಾಗಿವೆ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ infrastructure Development ಕಡೆ ಗಮನ ಹರಿಸಿ ಸ್ವಲ್ಪ ಹಣವನ್ನು ರಿಲೀಸ್ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ಎರಡು ವರ್ಷದ ಹಿಂದಿನ ಬಾಕಿಯನ್ನು ಕೊಡದೇ ನಾವು ಇನ್ನೂ ಸಾಲಗಾರರಾಗಿದ್ದೇವೆ. ಅದನ್ನು ನೀವು ಕೊಡಲಿಕ್ಕೆ ವ್ಯವಸ್ಥೆ ಮಾಡಿ. ಏಕೆಂದರೆ ಯಾರೂ ಕೆಲಸ ಮಾಡುವುದಕ್ಕೆ ಬರುತ್ತಿಲ್ಲ. ಅದನ್ನು ಪೇಮೆಂಟ್ ಮಾಡಿ, ಮುಂದೆ ಒಂದೊಂದು ಕೋಟಿ ಹಣ ಕೊಡಬೇಕೆಂದು ಹೇಳಿದ್ದಾರೆ ಅದನ್ನು ಕೊಡಬೇಕು Task Force ನ ಆದೇಶವನ್ನು ಮಾಡುತ್ತೇವೆ ಎಂದು ನಿನ್ನೆ ಮಾನ್ಯ ಪ್ರಕಾಶ್‌ರವರು ಹೇಳಿದರು. ಆದೇಶ ಆಗಿದೆಯಾ ಎಂದು ಹೇಳಬೇಕು. ನಮ್ಮಲ್ಲಿ ಎಲ್ಲಾ ಫೋನ್ ಬರುತ್ತಿದೆ. ಜಿಲ್ಲಾ ಪಂಚಾಯಿತಿಯವರಿಗೆ ದೂರವಾಣಿ ಮಾಡಿದರೆ ನಮಗೇ ನೀರಿಲ್ಲವೆಂದು ಫೋನ್ ಮಾಡುತ್ತಾರೆ ಬಾವಿಯಲ್ಲಿ ನೀರು ಇದೆ, ಆದರೆ ಪಂಚಾಯಿತಿಯುವರು ನೀರು ಕೊಡುತ್ತಿಲ್ಲವೆಂದು complaint ಇದೆ. ಕಾರಣವೇನೆಂದರೆ ಕರೆಂಟ್ ಇಲ್ಲ, ಟ್ಯಾಂಕ್‌ಗೆ ನೀರು ಹೋಗುತ್ತಿಲ್ಲ. ಕುಡಿಯುವ ನೀರನ್ನು ಕೊಡುವ ವ್ಯವಸ್ಥೆಗೆ uninterrupted current ಕೊಡುವ ವ್ಯವಸ್ಥೆಯಾಗಬೇಕು.

ಆಮೇಲೆ ಸಿಂಧ್ಯಾರವರು ಒಂದು ಸಲಹೆಯನ್ನು ಕೊಟ್ಟರು, ಮೀನುಗಾರರಿಗೆ ಡೀಸೆಲ್ ಸೇಲ್ಸ್ ಟ್ಯಾಕ್ಸ್ ಎಕ್ಸ್‌ಂಪ್‌ಶನ್ ಕೊಡುತ್ತೀರಿ, ಅದೇ ರೀತಿ ರೈತರಿಗೂ ಕೊಡುವ ವ್ಯವಸ್ಥೆಯನ್ನು ಮಾಡಿ. ಆಗ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲದೇ ಹೋದರೆ ತೋಟವೆಲ್ಲಾ ಒಣಗಿ ಹೋಗುವ ಹಂತಕ್ಕೆ ಬರುತ್ತದೆ. ಈಗ ನಾವೇನು ಮಾಡುತ್ತೇವೆಂದರೆ, ಯುದ್ಧ ಕಾಲೇ ಶಸ್ತ್ರಾಭ್ಯಾಸ. ಇದನ್ನು ನಾವು ಪ್ರಥಮದಲ್ಲಿಯೇ ಮಾತನಾಡಿದ್ದೇವೆ. ಪುನಃ ಈಗ ಮಾತನಾಡುತ್ತೇವೆ. ಇಲ್ಲಿಯವರೆವಿಗೂ ಏನೂ

ಕ್ರಮವನ್ನು ಕೈಗೊಂಡಿಲ್ಲ. ಆದಷ್ಟು ಬೇಗ ಇದಕ್ಕೆಲ್ಲಾ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ಈಗ ಟಾಸ್ಕ್‌ಫೋರ್ಸ್ ಬಗ್ಗೆ ನಾವೆಲ್ಲರೂ ಮಾತನಾಡಿದ್ದೇವೆ. ಹಿಂದೆ ಸತ್ಯನಾರಾಯಣ್‌ರವರು ಇದ್ದಾಗ ಕೂಡ ಅವರಿಗೂ ಈ ಬಗ್ಗೆ ಗೊತ್ತಿತ್ತು. ಈ ಸದನ ಮುಗಿದ ನಂತರ ಇನ್ನೂ ಮೂರು ತಿಂಗಳು ತೀವ್ರವಾದಂಥ ಒತ್ತಡ, ಬಿಸಿಲು ಇರುತ್ತದೆ. ಜನರಿಗೆ ನೀರು ಬೇಕಾಗಿದೆ. ಹಳೆಯ ಸಾಲ ಏನಿದೆ ಆ ಸಾಲ ಇನ್ನೂ ತೀರಿಲ್ಲ. ಅದು ತಮಗೆಲ್ಲರಿಗೂ ಗೊತ್ತಿದೆ. ನಾವೆಲ್ಲರೂ ಒಂದು ತರಹ ಸಾಲಗಾರರಾಗಿದ್ದು ಎಲ್ಲರೂ ಬಂದು ನಮ್ಮನ್ನೇ ಕೇಳುತ್ತಾರೆ. ಪ್ರತಿಯೊಬ್ಬರೂ ಬಂದು ಏನ್ ಸ್ವಾಮಿ ದುಡ್ಡು ಕೊಡಿಸಲಿಲ್ಲ, ಏನ್ ಸ್ವಾಮಿ ದುಡ್ಡು ಕೊಡಿಸಲಿಲ್ಲ ಎಂದು ಕೇಳುತ್ತಾರೆ. ಒಂದು ರೀತಿಯಲ್ಲಿ ಇಡೀ 224 ಶಾಸಕರುಗಳೂ ಕೂಡ ಸಾಲಗಾರರಾಗಿದ್ದೇವೆ. ಆದಕಾರಣ ಈಗ ನಾನು ತಮಗೆ ಹೇಳುತ್ತಿದ್ದೇನೆ, ಆ ಸಾಲವನ್ನು ತೀರಿಸಿ ಹೊಸದಾಗಿ ನೀವು ಪ್ರತಿ ಕ್ಷೇತ್ರಕ್ಕೂ ಟಾಸ್ಕ್‌ಫೋರ್ಸ್ ಮೂಲಕವೇ ಮಾಡಬೇಕು.

ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಗ್ರಾಮ ಪಂಚಾಯಿತಿಯವರನ್ನು ಜನರು ಕೇಳುವುದಿಲ್ಲ, ತಾಲ್ಲೂಕು ಪಂಚಾಯಿತಿಯವರನ್ನೂ ಕೇಳುವುದಿಲ್ಲ, ಜಿಲ್ಲಾ ಪಂಚಾಯಿತಿಯವರನ್ನೂ ಜನರು ಕೇಳುವುದಿಲ್ಲ, ಲೋಕಸಭಾ ಸದಸ್ಯರನ್ನೂ ಕೇಳುವುದಿಲ್ಲ, ರಾಜ್ಯಸಭೆ ಸದಸ್ಯರನ್ನೂ ಕೇಳುವುದಿಲ್ಲ, ವಿಧಾನ ಪರಿಷತ್‌ನ ಸದಸ್ಯರ ಹತ್ತಿರ ಕೂಡ ಜನರು ಕೇಳುವುದಿಲ್ಲ, ನೇರವಾಗಿ ಬಂದು ಜನ ಶಾಸಕರನ್ನೇ ಕೇಳುತ್ತಾರೆ. ಆದುದರಿಂದ ತಮಗೆ ನಾನು ಏನು ಹೇಳುತ್ತೇನೆಂದರೆ, ಇದರ ಬಗ್ಗೆ ಸ್ಪಷ್ಟವಾಗಿ ತಾವು ನೋಡಿಕೊಂಡು ಈ ಕೂಡಲೇ ಉತ್ತರ ಕೊಡುವಾಗ ಪ್ರತಿ ತಾಲ್ಲೂಕಿಗೆ ಪ್ರತಿ ಕ್ಷೇತ್ರಕ್ಕೆ ಇಷ್ಟು ಹಣವನ್ನು ಟಾಸ್ಕ್‌ಫೋರ್ಸ್‌ಗೆ ಬಿಡುಗಡೆ ಮಾಡಿದ್ದೇವೆಂದು ಹೇಳಬೇಕು. ನಮ್ಮ ಕ್ಷೇತ್ರ ಒಂದು ರೀತಿಯಲ್ಲಿ ತಬ್ಬಲಿ ಇದ್ದಂತೆ, ಯಾರೂ ಕೇಳುವವರಿಲ್ಲದ ತಬ್ಬಲಿ ಕ್ಷೇತ್ರ, ಇನ್ನು ನಮ್ಮ ಜಿಲ್ಲೆ ತಬ್ಬಲಿ ಜಿಲ್ಲೆ. ಏನೋ ನಿನ್ನ ಇದ್ದಕ್ಕಿದ್ದಂತೆ ಮುಖ್ಯಮಂತ್ರಿಗಳು ಎದ್ದು ನಾನು ನಿಮ್ಮ ಜಿಲ್ಲೆಗೆ ಬಂದುಬಿಡುತ್ತೇನೆಂದು ಹೇಳಿಬಿಟ್ಟಿದ್ದಾರೆ. ಅದೆಷ್ಟರ ಮಟ್ಟಿಗೆ ಅವರು ಬರುತ್ತಾರೋ ಗೊತ್ತಿಲ್ಲ.

ಅವರು ಬರಲಿ ಬರದೇ ಇರಲಿ, ನಾನು ಏನು ಹೇಳುತ್ತೇನೆಂದರೆ, ಅವರು ಈ ಸಂದರ್ಭದಲ್ಲಿ ಬರುವುದು ಬೇಡವೆನ್ನುತ್ತೇನೆ. ಬರಲಿ ಸಂತೋಷ. ಆದರೆ

ಈಗ ಅವರಲ್ಲಿಯೇ ಕಿತ್ತಾಟವಿದೆ, ಹೀಗಿರುವಾಗ ಅವರು ನಮ್ಮ ಊರಿಗೆ ಬರುವುದು, ನಿಮ್ಮ ಕಿತ್ತಾಟದಲ್ಲಿ ಅವರು ತಮ್ಮ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಳ್ಳುವುದು, ಇವೆಲ್ಲಾ ಆಗಬಾರದು. ಏಕೆಂದರೆ ಈ ರೀತಿ ಆಗಿ ನಮ್ಮ ಕ್ಷೇತ್ರಕ್ಕೆ, ನಮ್ಮ ಊರಿಗೆ ಕೆಟ್ಟ ಹೆಸರು ಬರುವುದು ಬೇಡ. ಆದುದರಿಂದ ಈ ರೀತಿಯ ಭವಿಷ್ಯದ ಮೇಲೆ, ಮೂಢನಂಬಿಕೆಗಳ ಮೇಲೆ ನಿಂತಿರುವಾಗ ನಮ್ಮ ಜನಕ್ಕೆ ಕೆಟ್ಟ ಹೆಸರು ಬರುವುದು ಬೇಡವೆನ್ನುವುದೊಂದೇ ನನ್ನ ಉದ್ದೇಶ. ಆದರೆ ಮುಖ್ಯಮಂತ್ರಿಗಳು ಬಂದರೆ ಅನೇಕ ವಿಧದಲ್ಲಿ ಅವರನ್ನು ಸ್ವಾಗತ ಮಾಡುತ್ತೇನೆ. ನೋಡಿ ಈಗ ನಮ್ಮ ಕಡೆ ರೇಷ್ಮೆ ಪೂರ್ತಿ ಹೊರಟುಹೋಯಿತು, ತೆಂಗು ಸಂಪೂರ್ಣ ಹೊರಟುಹೋಯಿತು, ಕಬ್ಬು ಹೊರಟುಹೋಯಿತು, ಏನೂ ಈಗ ಉಳಿದಿಲ್ಲ. ಇನ್ನು ನೀರಿಗೆ ಒಂದು ಸಾವಿರ ಅಡಿ ಹೋಗಬೇಕು. ಆದುದರಿಂದ ಇಡೀ ಜನ ತಮಿಳುನಾಡಿಗೆ ಹೋಗಬೇಕಾಗಿದೆ. ಇಡೀ ಜನ ಕೇರಳಕ್ಕೆ ಹೋಗುತ್ತಿದ್ದಾರೆ.

ಆದುದರಿಂದ ವಿಶೇಷವಾಗಿ ಗಡಿ ಜಿಲ್ಲೆ ಚಾಮರಾಜನಗರ ಜಿಲ್ಲೆಯನ್ನು ಉಳಿಸಬೇಕೆಂದು ತಮ್ಮ ಮೂಲಕ ಕಳಕಳಿಯ ಮನವಿಯನ್ನು ಮಾಡುತ್ತೇನೆ. ಕೊನೆಯದಾಗಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಬರಗಾಲ ಪರಿಹಾರ ಸಮಿತಿಯಲ್ಲಿ ಹಾಕಬಾರದು. ನೀವು ಯಾವುದೇ ಕಾರಣಕ್ಕೂ ಅವರನ್ನು ಆ ಸಮಿತಿಗೆ ಹಾಕಬಾರದು. ತಾಲ್ಲೂಕು ಪಂಚಾಯಿತಿ ಸದಸ್ಯರು ಇರಬಾರದು. ನಾನು ಕಂದಾಯ ಸಚಿವರಿಗೆ ಹೇಳುತ್ತಿದ್ದೇನೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಆ ಸಮಿತಿಯಲ್ಲಿ ಹಾಕುವುದು ಸರಿಯಾದಂಥ ಕ್ರಮವಲ್ಲ. ಇನ್ನು ಟಾಸ್ಕ್‌ಫೋರ್ಸ್ ಸಮಿತಿಯ ಬಗ್ಗೆ ಇಂದೇ ಸದನದಲ್ಲಿ ಪ್ರಕಟಣೆ ಮಾಡಬೇಕು. ಮಾನ್ಯ ಪ್ರಕಾಶ್‌ರವರೆ, ನೀವು ಶಿಷ್ಟಾಚಾರದ ಬಗ್ಗೆ ಹೇಳಿದಿರಿ. ಅದನ್ನೂ ಮರೆತಿದ್ದಾರೆ. ಶಾಸಕರ ಪರಿಸ್ಥಿತಿ ಬಗ್ಗೆಯೂ ಮರೆತಿದ್ದಾರೆ. ಅದರ ಬಗ್ಗೆ ಮಾನ್ಯ ಪ್ರಕಾಶ್‌ರವರು ಸವಿಸ್ತಾರವಾಗಿ ಹೇಳಬೇಕು. ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟ ಒಂದೂವರೆ ನಿಮಿಷದಲ್ಲಿಯೇ ಮಾತನಾಡಿ ಮುಗಿಸಿದ್ದೇನೆ. ನಾನು ಕೇಳಿರುವುದಕ್ಕೆ ಸರ್ಕಾರ ಉತ್ತರ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಇವೊತ್ತು ಪ್ರತಿ ಪಕ್ಷದ ನಾಯಕರು ಬರಗಾಲದ ಪರಿಸ್ಥಿತಿ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿಯಲ್ಲಿ ಹಲವಾರು ಹಿರಿಯ ಸದಸ್ಯರು ಹಾಗೂ ಇನ್ನಿತರ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿ ಬರಗಾಲ

ಸಮಸ್ಯೆ ವಿಚಾರದಲ್ಲಿ ಮಾತನಾಡಿ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮಾನ್ಯ ಸಿದ್ಧರಾಮಯ್ಯರವರಿರಬಹುದು, ಮಾನ್ಯ ಮಾಧುಸ್ವಾಮಿಯವರಿರಬಹುದು, ಮಾನ್ಯ ವಾಟಾಳ್ ನಾಗರಾಜ್‌ರವರಿರಬಹುದು, ಅದೇ ರೀತಿ ಶ್ರೀರಾಮರೆಡ್ಡಿಯವರು, ಮಾನ್ಯ ಹೆಗ್ಡೆಯವರು ಮಾನ್ಯ ಹುಕ್ಕೇರಿಯವರು, ಈ ರೀತಿ ಎಲ್ಲಾ ಭಾಗದ ಶಾಸಕರು ಇವೊತ್ತು ಇದರ ಬಗ್ಗೆ ಹೆಚ್ಚಿನ ಒಂದು ಕಳಕಳಿಯನ್ನು ಮತ್ತು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಬಹಳಷ್ಟು ಜಿಲ್ಲೆಗಳಿಗೆ ನಾನೇ ಸ್ವತಃ ಹೋಗಿ ರಿವ್ಯೂ ಮೀಟಿಂಗ್‌ಗಳನ್ನು ನಾನು ಮಾಡಿದ್ದೇನೆ.

ಹೀಗಾಗಿ ಇವೊತ್ತು ಏನು ಬರಗಾಲ ಪರಿಸ್ಥಿತಿ ಇದೆ ಅದು ಬಹಳ ಗಂಭೀರವಿದೆ. ತಾವೇನು ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ ಅದಕ್ಕೆ ನಾನೂ ಕೂಡ ಸಹಮತವನ್ನು ವ್ಯಕ್ತಪಡಿಸುತ್ತೇನೆ. 128 ತಾಲ್ಲೂಕುಗಳಲ್ಲಿಯೂ ಬರಗಾಲ ಪರಿಸ್ಥಿತಿ ಬಹಳ ಗಂಭೀರವಿದೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಅದೇ ಪರಿಸ್ಥಿತಿಗೆ ಬರುತ್ತಿದೆ. ಹೀಗಾಗಿ ಇಂದು ಜಲಾಶಯಗಳಲ್ಲಿಯೂ ಕೂಡ ನೀರಿನ ಮಟ್ಟ ಬಹಳ ಕಡಿಮೆ ಇದೆ. ಹಿಂದಿನ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಇಂದಿನ ಅಂಕಿಸಂಖ್ಯೆಗಳನ್ನು ತಾಳೆ ನೋಡಿದರೆ ಇಂದು ಜಲಾಶಯಗಳಲ್ಲಿ ನೀರಿನ ಮಟ್ಟ ಬಹಳ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಆ ಅಂಕಿಸಂಖ್ಯೆಗಳನ್ನು ಸದನದಲ್ಲಿ ಇಡುವುದು ಸರಿಯಾದ ಕ್ರಮವೆಂದು ನನ್ನ ಅಭಿಪ್ರಾಯ.

ಲಿಂಗನಮಕ್ಕಿ ಜಲಾಶಯದಲ್ಲಿ ನೀರಿನ ಸಾಮರ್ಥ್ಯ 151.75 ಮೀಟರ್‌ವರೆಗೂ ಇದ್ದರೆ ಇಂದು ಅಲ್ಲಿ 57.66 ಮೀಟರ್ ನೀರು ಮಾತ್ರ ಇರುವುದು. ಇನ್ನು ಸೂಪಾದಲ್ಲಿ ಪೂರ್ಣ ಸಾಮರ್ಥ್ಯ 145 ಇದ್ದರೆ ಇಂದು ಇರುವುದು ಕೇವಲ 63. ಕೆ.ಆರ್.ಎಸ್. ನಲ್ಲಿ ಪೂರ್ಣಮಟ್ಟ 49.5 ಟಿ.ಎಂ.ಸಿ ಇದ್ದರೆ ಇಂದು ಇರುವುದು ಕೇವಲ 13.83 ಟಿ.ಎಂ.ಸಿ ಮಾತ್ರ, ಹಾರಂಗಿಯಲ್ಲಿ 8.5 ಟಿ.ಎಂ.ಸಿ ಇರಬೇಕಿದ್ದು ಆದರೆ ಇಂದು 1.09 ಟಿ.ಎಂ.ಸಿ. ಮಾತ್ರ, ಕಬಿನಿಯಲ್ಲಿ ಪೂರ್ಣ ಮಟ್ಟ 19.51 ಟಿ.ಎಂ.ಸಿ ಇರುತ್ತದೆ, ಆದರೆ ಇಂದು ಇರುವುದು 11.21 ಟಿ.ಎಂ.ಸಿ ಮಾತ್ರ, ಹೇಮಾವತಿ ಪೂರ್ಣ ಮಟ್ಟ 37.10 ಇದ್ದರೆ ಇಂದು ಇರುವುದು 9.40 ಟಿ.ಎಂ.ಸಿ ಮಾತ್ರ, ಭದ್ರಾದಲ್ಲಿ 71.53 ಮ್ಯಾಕ್ಸಿಮಮ್ ಇರಬೇಕಾದ ಕಡೆ ಈಗ ಇರುವುದು 38.72 ಮಾತ್ರ, ಆಮೇಲೆ ಘಟಪ್ರಭಾದಲ್ಲಿ 51.00 ಸಾಮರ್ಥ್ಯವಿದ್ದರೆ ಈಗ ಇರುವಂಥದ್ದು ಕೇವಲ 5.54 ಮಾತ್ರ, ಮಲಪ್ರಭಾದಲ್ಲಿ 37.73 ಇರಬೇಕಾದ ಕಡೆ ಈಗ ಈಗ ಕೇವಲ 4.54

ಮಾತ್ರ ಇರುವುದು. ನಾರಾಯಣಪುರದಲ್ಲಿ 33.31 ಇರಬೇಕಾದ ಕಡೆ ಇವೊತ್ತು ಇರುವುದು 22.98 ಮಾತ್ರ. ಆಲಮಟ್ಟಿಯಲ್ಲಿ ಪೂರ್ಣ ಸಾಮರ್ಥ್ಯ ಮಟ್ಟ 123.08 ಇದ್ದರೆ ಇಂದು ಇರುವುದು 27.19 ಮಾತ್ರ.

ಈ ರೀತಿ ಇವೊತ್ತು ಜಲಾಶಯಗಳಲ್ಲಿ ನೀರಿನ ಸಂಗ್ರಹ ಕೂಡ ಕಡಿಮೆಯಾಗಿದೆ. ಹೀಗಾಗಿ ಇವೊತ್ತು ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇದರ ಬಗ್ಗೆ ಎರಡು ಮಾತಿಲ್ಲ. ಹೀಗಾಗಿ ಬಹುತೇಕ ಶಾಸಕರು ಈ ಬಗ್ಗೆ ಮಾತನಾಡಿ ಸರ್ಕಾರದ ಗಮನ ಸೆಳೆದು ಇದಕ್ಕಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಕೇಂದ್ರ ಸರ್ಕಾರದಿಂದ ಹಣ ಎಷ್ಟು ಬಂತು? ಎಷ್ಟು ಕಾಮಗಾರಿಗಳು ಈಗ ನಡೆಯುತ್ತಿವೆ ಎಂದು ಕೇಳಿದ್ದಾರೆ. ಅದೇ ರೀತಿ ಪ್ರತಿ ಪಕ್ಷದ ನಾಯಕರು ಮಾತನಾಡುತ್ತಾ ಕೆಲವೊಂದು ಜಿಲ್ಲೆಗಳಲ್ಲಿ ಯಾವ ರೀತಿಯಾಗಿ ಕಾಮಗಾರಿಗಳು ತೀವ್ರಗತಿಯಲ್ಲಿ ಆಗಬೇಕಾಗಿತ್ತೋ ಆ ರೀತಿಯಾಗುತ್ತಿಲ್ಲವೆಂದು ಹೇಳಿದ್ದಾರೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಕೆಲಸಕ್ಕೆ ಜನ ಬರುತ್ತಿದ್ದಾರೆ, ಆದರೆ ಅವರಿಗೆ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಮತ್ತು ಹೆಚ್ಚು ಕಾಮಗಾರಿಗಳನ್ನು ನಾವು ಕೊಡುವುದಕ್ಕೆ ಆಗುತ್ತಿಲ್ಲವೆಂದು ತಾವೆಲ್ಲರೂ ಹೇಳಿದ್ದೀರಿ. ಇದಕ್ಕೆ ನಾನು ಸ್ಪಂದಿಸುತ್ತೇನೆ.

ಇವೊತ್ತು ಇನ್ನು ದೊಡ್ಡ ಪ್ರಮಾಣದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಇವೊತ್ತು ಪ್ರತಿಯೊಂದು ತಾಲ್ಲೂಕಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಈ ಬರಗಾಲ ಕಾಮಗಾರಿಗಳ ಸಲುವಾಗಿಯೆಂದೇ ಎರಡೆರಡು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ಶಾಸಕರ ಅಧ್ಯಕ್ಷತೆಯಲ್ಲಿರುವ ಟಾಸ್ಕ್‌ಫೋರ್ಸ್ ಕಮಿಟಿ ಆಕ್ಷನ್ ಪ್ಲಾನ್‌ನ್ನು ತಯಾರು ಮಾಡಿಕೊಡಬೇಕು. ಆ ಆಕ್ಷನ್ ಪ್ಲಾನ್‌ನ್ನು ಡಿ.ಸಿ.ಯವರು ಅಪ್ರೂವಲ್ ಮಾಡಿ ಕಾಮಗಾರಿಗಳನ್ನು ಹಂಚುವಂಥ ಕೆಲಸವನ್ನು ಮಾಡುತ್ತಾರೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಹಿರಿಯ ಅಧಿಕಾರಿಗಳ ಒಂದು ಸಭೆಯನ್ನು ಕರೆದಿದ್ದರು. ಆ ಸಂದರ್ಭದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ವಾರ್ನಿಂಗ್ ಮಾಡಿದರು. ಇವೊತ್ತು ಕೆಲವೊಂದು ಜಿಲ್ಲೆಗಳಲ್ಲಿ ಕಾಮಗಾರಿಗಳು ಏನು ಯುದ್ಧೋಪಾದಿಯಲ್ಲಿ ಆಗಬೇಕಾಗಿತ್ತೋ ಆ ರೀತಿ ಆಗುತ್ತಿಲ್ಲವೆಂದು ಹೇಳಿದರು. ಕೆಲವೊಂದು ಕಡೆ ಶಾಸಕರು ಆಕ್ಷನ್ ಪ್ಲಾನ್‌ನ್ನು ಕೊಟ್ಟಿಲ್ಲವೆನ್ನುವ ಕಾರಣ ಕೂಡ ಅಧಿಕಾರಿಗಳ ಕಡೆಯಿಂದ ಬಂತು. ಅಂಥಾದ್ದು ಎರಡು ಮೂರು ಜಿಲ್ಲೆಗಳಲ್ಲಿ ಮಾತ್ರ ಕಂಡುಬಂದಿತಾದರೂ ಆದರೆ ಬಹುತೇಕ ಎಲ್ಲ

ಜಿಲ್ಲೆಗಳಲ್ಲಿ ನಮ್ಮ ಶಾಸಕರ ಅಧ್ಯಕ್ಷರೆಯಲ್ಲಿರುವ ಕಮಿಟಿ ಆಕ್ಷನ್ ಪ್ಲಾನ್‌ನ್ನು ತಯಾರು ಮಾಡಿಕೊಟ್ಟಿದ್ದಾರೆ. ಬಹಳಷ್ಟು ಎಲ್ಲ ಕಡೆಯಲ್ಲಿಯೂ ಇವೊತ್ತು ಆ ಆಕ್ಷನ್ ಪ್ಲಾನ್ ಅಪ್ರೂವಲ್ ಆಗಿ ಕಾಮಗಾರಿಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಈಗಾಗಲೇ 128 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ನಾವು ಘೋಷಣೆಯನ್ನು ಮಾಡಿದ್ದೇವೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮಾತನಾಡಿ ಚಿಕ್ಕೋಡಿಯನ್ನು ಏಕೆ ಘೋಷಣೆ ಮಾಡಲಿಲ್ಲವೆಂದು ಕೇಳಿದರು. ಇದೇ ರೀತಿ ಕೆಲವರು ಎಂಟ್ಹತ್ತು ಕಡೆಗಳಲ್ಲಿ ನಮ್ಮ ತಾಲ್ಲೂಕುಗಳನ್ನೂ ಕೂಡ ಬರಪೀಡಿತ ಪ್ರದೇಶವೆಂದು ಏಕೆ ಘೋಷಣೆ ಮಾಡಲಿಲ್ಲವೆಂದು ಕೇಳುತ್ತಿದ್ದಾರೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ :- ಚಿಕ್ಕೋಡಿಯನ್ನು ನೀವು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲೇಬೇಕಾಗುತ್ತದೆ. ಏಕೆಂದರೆ ಆ ಪರಿಸ್ಥಿತಿ ಅಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್ :- ಯಾವ ತಾಲ್ಲೂಕನ್ನು ಮಾಡಬೇಕು, ಬಿಡಬೇಕು ಎನ್ನುವಂಥದ್ದರ ಬಗ್ಗೆ ನಾವು ರಾಜಕೀಯವಾಗಿ ನಿರ್ಣಯವನ್ನು ಕೈಗೊಳ್ಳುವುದಿಲ್ಲ. ಇವೊತ್ತು 128 ತಾಲ್ಲೂಕುಗಳೆಂದು ನಾವೇನು ಘೋಷಣೆ ಮಾಡಿದ್ದೇವೆ. ಇವತ್ತು ಆ ಸಂದರ್ಭದಲ್ಲಿ ಮಳೆ ಎಷ್ಟು ಬಂತು? ಏನಾಯಿತು? ಆ ಆಧಾರದ ಮೇಲೆ ನಾವು ಮಾಡಿದ್ದೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಲೆನಾಡಿನ ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡುತ್ತೀರಿ. ಆದರೆ ಬಯಲುಸೀಮೆ ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡುವುದಿಲ್ಲವಲ್ಲ, ಇದು ಅನ್ಯಾಯ.

ಶ್ರೀ ಜಗದೀಶ್ ಶೆಟ್ಟರ್ :- ನಾನು ನಿಮ್ಮ ಜೊತೆ ಸಮಾಲೋಚನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು :- ಅವರು ಮಾತನಾಡುವುದಕ್ಕೆ ಬಿಡಿ. ಉತ್ತರ ಕೊಡಲಿ.

ಶ್ರೀ ಜಗದೀಶ್ ಶೆಟ್ಟರ್ :- ಪ್ರತಿಯೊಂದು ತಾಲ್ಲೂಕಿಗೆ ಇವತ್ತು ಬರಗಾಲ ಕಾಮಗಾರಿ ಸಲುವಾಗಿ 256 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು, ಪ್ರತಿಪಕ್ಷದ ನಾಯಕರು ಹಾಗೂ ಮಾನ್ಯ ಖರ್ಗೆಯವರು

ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿರುವ ವಿಚಾರದಲ್ಲಿ ಎಷ್ಟು release ಆಗಿದೆ? ಎಷ್ಟು ಖರ್ಚಾಗಿದೆ ಎಂದು ಪ್ರಸ್ತಾಪ ಮಾಡಿದರು. 2005–06 ಮತ್ತು 2006–07 ನೇ ಸಾಲಿನದು ಎರಡು ವರ್ಷದ್ದು include ಮಾಡಿ ಅವರು ಲೆಕ್ಕಾಚಾರವನ್ನು ಹೇಳಿದರು. 2005–06 ನೇ ಸಾಲಿನಲ್ಲಿ allocation CRF ನಲ್ಲಿ 114.66 ಕೋಟಿ ಇದ್ದು, ಅದರಲ್ಲಿ release ಆಗಿದ್ದು 235.60 ಕೋಟಿ ರೂಪಾಯಿ. Allocation 114.66 ಕೋಟಿ ರೂಪಾಯಿ ಇದ್ದು, ಆ ವರ್ಷ 86 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ CRF ಹಣ ಬಂದಿದ್ದು, ನಮ್ಮ ರಾಜ್ಯ ಸರ್ಕಾರ 149 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದರಿಂದ, ಒಟ್ಟು 235.60 ಕೋಟಿ ರೂಪಾಯಿ ಅಂದು CRF ನಲ್ಲಿ release ಆಯಿತು.

NCCF ನಿಂದ ಆ ವರ್ಷದಲ್ಲಿ 358.85 ಕೋಟಿ ರೂಪಾಯಿ release ಆಗಿದ್ದು, 2005–06 ರಲ್ಲಿ ಒಟ್ಟು 594.45 ಕೋಟಿ ರೂಪಾಯಿ release ಆಗಿರುವುದು. 594.45 ಕೋಟಿ ರೂಪಾಯಿ ಏನಿದೆ ಅದನ್ನು release ಮಾಡಲಾಗಿದೆ ಮತ್ತು ಖರ್ಚು ಮಾಡಲಾಗಿದೆ. 2006–07 ರಲ್ಲಿ allocation 120.38 ಕೋಟಿ ರೂಪಾಯಿ ಆಗಿದ್ದು, ಅದರಲ್ಲಿ ಕೇಂದ್ರ ಸರ್ಕಾರದಿಂದ release ಆಗಿದ್ದು 113.98 ಕೋಟಿ ರೂಪಾಯಿ ಮತ್ತು ರಾಜ್ಯ ಸರ್ಕಾರದ share 30 ಕೋಟಿ ರೂಪಾಯಿ ಇತ್ತು. ಆದರೆ ನಾವು release ಮಾಡಿದ್ದು 153.10 ಕೋಟಿ ರೂಪಾಯಿ. ಒಟ್ಟು CRF ನಲ್ಲಿ 267.08 ಕೋಟಿ ರೂಪಾಯಿಯನ್ನು release ಮಾಡಿದ್ದೇವೆ. ಈ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ NCCF 226.30 ಕೋಟಿ ರೂಪಾಯಿ ಬಂದಿದೆ. ಒಟ್ಟು 493.38 ಕೋಟಿ ರೂಪಾಯಿ ಹಣ NCCF and CRF ನಲ್ಲಿ ರಾಜ್ಯದ share ಎಲ್ಲಾ ಸೇರಿ ಹಣ release ಆಗಿದೆ. ಹಾಗಾಗಿ 493 ಕೋಟಿ ರೂಪಾಯಿ ಹಣ ಏನಿದೆ ಅದನ್ನು ಸಂಪೂರ್ಣವಾಗಿ ನಾವು release ಮಾಡಿದ್ದೇವೆ. ಇದರಲ್ಲಿ ನಾವು ಯಾವುದನ್ನೂ ಇಟ್ಟುಕೊಂಡಿಲ್ಲ.

ಇವತ್ತು ಬರಗಾಲದ ಪರಿಸ್ಥಿತಿ ಮತ್ತು flood ಗೆ ಎರಡಕ್ಕೂ ಸೇರಿ 226 ಕೋಟಿ ರೂಪಾಯಿ ಕೇಂದ್ರ ಸರ್ಕಾರ release ಮಾಡಿದರು. ಅದು ಕೇವಲ ಬರಗಾಲ ಅಥವಾ ಕೇವಲ flood ಎಂದು ಅಲ್ಲ. ಈ ವರ್ಷದ ಅನುಭವದ ಪ್ರಕಾರ ನಮಗೆ ಏನಾಯಿತು ಎಂದರೆ ಒಂದು ಕಡೆ flood, ಒಂದು ಕಡೆ drought ಇತ್ತು. ಈ ರೀತಿ ಎರಡೂ ಪರಿಸ್ಥಿತಿಯನ್ನು ಅನುಭವಿಸುವಂತಹ ಅನುಭವ ನಮ್ಮ

ರಾಜ್ಯದ ಜನತೆಗೆ ಒದಗಿಬಂತು. ಅದರ ಜೊತೆಗೆ 50,000 metric ton food grains ಅನ್ನು ಇವತ್ತು ಕೇಂದ್ರ ಸರ್ಕಾರದವರು release ಮಾಡಿದರು. ನಾವು ಕೇಂದ್ರ ಸರ್ಕಾರಕ್ಕೆ ಡಿಮ್ಯಾಂಡ್ ಮಾಡಿದ್ದು....

ಶ್ರೀ ಸಿದ್ಧರಾಮಯ್ಯ :– 2005–06 ಮತ್ತು 2006–07 ಎರಡೂ ಸೇರಿಸಿ 50,000 metric ton ಹೇಳುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ :– ನಾನು ಈ ವರ್ಷದ್ದು 50, 000 ಮೆಟ್ರಿಕ್ ಟನ್ ಎಂದು ಹೇಳಿದೆ. ಇವತ್ತು ನಾವು ಕೇಂದ್ರ ಸರ್ಕಾರಕ್ಕೆ 1,262.95 ಕೋಟಿ ರೂಪಾಯಿ ಹಣವನ್ನು ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದೇವೆ. ಅದರ ಜೊತೆಗೆ 5,74,000 Metric ton food grains ಕೊಡಬೇಕು ಎನ್ನುವಂತಹ ವಿನಂತಿಯನ್ನು ಕೇಂದ್ರ ಸರ್ಕಾರಕ್ಕೆ ಮಾಡಿಕೊಂಡಿದ್ದೇವೆ. ಅದರಲ್ಲಿ ಈ ವರ್ಷ 50,000 Metric ton ಬಂದಿದೆ.

ಶ್ರೀ ಎಸ್. ಸಿದ್ಧರಾಮಯ್ಯ :– ನೀವು ಮೇಲ್ಮನೆಯಲ್ಲಿ ಉತ್ತರ ಕೊಡುವಾಗ 256 ಕೋಟಿ ರೂಪಾಯಿ ಖರ್ಚಾಗಿದೆ, ಇನ್ನೂ 225 ಕೋಟಿ ರೂಪಾಯಿ P.D. account ನಲ್ಲಿ ಇದೆಯೆಂದು ಮಾರ್ಚ್ ತಿಂಗಳಿನಲ್ಲಿ ಹೇಳಿದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– 2005–06 ಮತ್ತು 2006–07 ಎರಡು ವರ್ಷದ್ದು ಸೇರಿ 1,103 ಕೋಟಿ ರೂಪಾಯಿ.

ಶ್ರೀ ಜಗದೀಶ್ ಶೆಟ್ಟರ್ :– ಅದನ್ನೇ ನಾನು ಹೇಳುತ್ತಿದ್ದೇನೆ. Last time ಏನು release ಆಗಿತ್ತು, ಅದು ಖರ್ಚಾಗಿದೆ.

ಶ್ರೀ ಸಿದ್ಧರಾಮಯ್ಯ :– ಒಂದು ವರ್ಷಕ್ಕೆ ನೀವು 149 ಕೋಟಿ ರೂಪಾಯಿ ಖರ್ಚು ಮಾಡಿರುವುದು. ಅದು ನಿಮ್ಮ treasury ಯಿಂದ ಬಿಡುಗಡೆ ಮಾಡಿರುವುದು. ಆಮೇಲೆ 153 ಕೋಟಿ ರೂಪಾಯಿ ಎರಡನೇ ವರ್ಷ. ಇನ್ನು ಉಳಿದಂತಹ ಹಣ ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣ ತಾನೇ? ಹೌದೋ, ಅಲ್ಲವೋ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :- ಇಲ್ಲ ಎಂದು ಹೇಳಲಿಲ್ಲವಲ್ಲ ನಾನು. ಇಲ್ಲವೆಂದು ಯಾರು ಹೇಳಿದರು?

ಶ್ರೀ ಎಸ್. ಸಿದ್ಧರಾಮಯ್ಯ :- ಮತ್ತೇ ಏಕೆ ನೀವು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರಿಸುತ್ತಿದೆಯೆಂದು ಹೇಳಿದಿರಿ. ಅದಾದಮೇಲೆ ನೀವು ಇನ್ನೇನು ಖರ್ಚು ಮಾಡಿದಿರಿ?

ಶ್ರೀ ಜಗದೀಶ್ ಶೆಟ್ಟರ್ :- ನಾನು ಹೇಳಿಯೇ ಇಲ್ಲ.

ಶ್ರೀ ಎಸ್. ಸಿದ್ಧರಾಮಯ್ಯ :- ಏಕೆಂದರೆ ನೀವು ಕೇಂದ್ರ ಸರ್ಕಾರದ ಮೇಲೆ ಸುಮ್ಮಸುಮ್ಮನೆ ಗೂಬೆ ಕೂರಿಸುತ್ತೀರಿ. ನೀವು ಉತ್ತರ ಕೊಡುತ್ತೀರಾ? ಅವರು ಕೊಡುತ್ತಾರ? ಅವರು ದಾರಿ ತಪ್ಪಿ ಬಿಡುತ್ತಾರೆ. ನೀವು ದಾರಿ ತಪ್ಪಿ ಬಿಡುತ್ತೀರಿ.

ಶ್ರೀ ಹೆಚ್.ಡಿ. ರೇವಣ್ಣ :- ಇವತ್ತು ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಿದ್ಧರಾಮಯ್ಯ ಹಾಗೂ ಮಲ್ಲಿಕಾರ್ಜುನ ಖರ್ಗೆಯವರು ಇದ್ದಾರೆ. ಇವತ್ತು ಕೇಂದ್ರ ಸರ್ಕಾರದ ಸಾವಿರ ಕೋಟಿ ರೂಪಾಯಿ ಹಣದಲ್ಲಿ 240 ಕೋಟಿ ರೂಪಾಯಿ ನಮಗೆ ಖರ್ಚು ಮಾಡಿದರು. ಅವರು ಮಹಾರಾಷ್ಟ್ರಕ್ಕೆ ಮತ್ತು ಆಂಧ್ರಪ್ರದೇಶಕ್ಕೆ ಎಷ್ಟು ಕೊಟ್ಟಿದ್ದಾರೆ ಅದನ್ನು ದಯಮಾಡಿ ಹೇಳಿ.

(ಗೊಂದಲ)

ಶ್ರೀ ಎಸ್. ಸಿದ್ಧರಾಮಯ್ಯ :- ಮಹಾರಾಷ್ಟ್ರಕ್ಕೆ ಎಷ್ಟು ಕೊಟ್ಟಿದ್ದಾರೆ? ಅಲ್ಲಿ ಪ್ರವಾಹ ಏನಿದೆ? ಅಲ್ಲಿ ಬರಗಾಲದ ಪರಿಸ್ಥಿತಿ ಏನಿದೆ? ಅಲ್ಲಿ ರೈತರು ಎಷ್ಟು ಜನ ಸತ್ತಿದ್ದಾರೆ? ಎಂದು ನಮಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ನೀವು ಏನು ಮಾತನಾಡುತ್ತೀರಿ?

ಶ್ರೀ ಎನ್. ಧರ್ಮಸಿಂಗ್ :- ಮಾನ್ಯ ಶೆಟ್ಟರ್‌ರವರೆ ತಾವು ಸರಿಯಾದ ರೀತಿಯಲ್ಲಿ ಉತ್ತರವನ್ನು ಪ್ರಾರಂಭ ಮಾಡಿದ್ದೀರಿ. ಇವತ್ತು ದಿನಾಂಕ 01-02-2007 ರಲ್ಲಿ Finance Department has given the figures. ರೇವಣ್ಣನವರೆ ನೀವು ಇಲ್ಲಿ ಏಕೆ ಇದ್ದೀರಿ, ಇಲ್ಲಿಂದ ಹೋಗಿ. ಏನು ಮಾತನಾಡುತ್ತೀರಿ? ಕೇಂದ್ರ ಸರ್ಕಾರ 113 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿತು. ಈಗಾಗಲೇ ಹೇಳಿದ ಹಾಗೆ 226 ಮತ್ತು 113 ಕೋಟಿ ರೂಪಾಯಿ ಸೇರಿಸಿದರೆ 340

ಕೋಟಿ ರೂಪಾಯಿ ಆಗುತ್ತದೆ. ಅದರಲ್ಲಿ ರಾಜ್ಯ ಸರ್ಕಾರ 153 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಬರ ಪರಿಹಾರಕ್ಕೆ ಒಟ್ಟು ಬಿಡುಗಡೆ ಮಾಡಿದ್ದು 193 ಕೋಟಿ ರೂಪಾಯಿ. ಫೆಬ್ರುವರಿವರೆಗೆ Finance Department ನವರು ನಿಮ್ಮ ಕಂದಾಯ ಇಲಾಖೆಗೆ ಕೊಟ್ಟಿದ್ದರಲ್ಲಿ 356 ಕೋಟಿ ರೂಪಾಯಿ ಖರ್ಚಾಗಿದೆ. ಇನ್ನೂ 136 ಕೋಟಿ ರೂಪಾಯಿ ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಇದೆ.

ನಾವು ಹೇಳುವುದೇನೆಂದರೆ ಹಣವನ್ನು ಜಿಲ್ಲಾಧಿಕಾರಿಗಳ P.D. account ನಲ್ಲಿ ಇಡಬೇಡಿ. ವಾಸ್ತವವಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಕೆಲಸವನ್ನು ಪ್ರಾರಂಭ ಮಾಡಲಿ ಮತ್ತು ಬರ ಪರಿಹಾರದ ವಿಚಾರದಲ್ಲಿ ನೀವು ಬರೀ ಅಂಕಿ ಅಂಶಗಳನ್ನು ತೋರಿಸಿ ಅಲ್ಲ, ಜನರ ವಿಶ್ವಾಸವನ್ನು ಮೂಡಿಸುವಂತಹ ರೀತಿಯಲ್ಲಿ ಕೆಲಸವನ್ನು ಮಾಡಬೇಕು. ನೀವು ಎಲ್ಲಾ ಕಡೆಗೆ ಕೆಲಸವನ್ನು ಪ್ರಾರಂಭ ಮಾಡಿದ್ದೇವೆಂದು ಹೇಳುತ್ತೀರಿ, ಆದರೆ ಎಲ್ಲೂ ಪ್ರಾರಂಭವಾಗಿಲ್ಲ. ನಮ್ಮ ಗುಲ್ಬರ್ಗಾ ಅಥವಾ ಬೇರೆ ಕಡೆಗೆ ನೋಡಿದರೆ ಕೆಲಸವೇ ಪ್ರಾರಂಭವಾಗುತ್ತಿಲ್ಲ. ಅದಕ್ಕೆ ಇವತ್ತಿನ ದಿವಸ ಎಲ್ಲಾ ಕ್ಷೇತ್ರದಲ್ಲಿ ದುಡ್ಡು ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡತಕ್ಕಂಥ ಒಂದು ಆಜ್ಞೆ ಕೊಡಿ ಎಂದು ಹೇಳಿದೆ.

ಶ್ರೀ ಜಗದೀಶ್ ಶೆಟ್ಟರ್ :- ಇವತ್ತು ಮಾನ್ಯ ಪ್ರತಿಪಕ್ಷದ ನಾಯಕರು 136 ಕೋಟಿ ರೂಪಾಯಿ ಇನ್ನೂ ಖರ್ಚು ಮಾಡಿಲ್ಲವೆಂದು ಏನು ಹೇಳಿದರು, ಮಾನ್ಯ ಖರ್ಗೆಯವರೂ ಕೂಡ ಅದನ್ನೇ ಹೇಳಿದರು. ಇವತ್ತು P.D. account ಎಂದು ಏನು ಹೇಳುತ್ತಿದ್ದೇವೆ, ಅಲ್ಲಿ ಹಣ ಏನು ಜಮಾ ಆಗಿದೆ, ಅಲ್ಲೆಲ್ಲಾ ಕೆಲಸ ಏನು ನಡೆಯುತ್ತಿದೆ, ಅಲ್ಲಿ third party inspection ಮಾಡಿ ಅದರ report ತೆಗೆದುಕೊಂಡು ಅದಕ್ಕೆ ಹಣ release ಮಾಡುವ ಕೆಲಸ ನಡೆಯುತ್ತಿದೆ. ಕೆಲವು ಕಡೆ ಜಿಲ್ಲಾಧಿಕಾರಿಗಳು ಹಣವನ್ನು release ಮಾಡುವುದಕ್ಕೆ ತೊಂದರೆ ಮಾಡಿದ್ದಾರೆ ಎನ್ನುವುದು ಗೊತ್ತಾಗಿದೆ. ಅಂತಹವರಿಗೆ ನಾವು ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಕಾಮಗಾರಿ ಕೆಲಸವಾದ ತಕ್ಷಣ ಅಲ್ಲಿ ಹಣ release ಆಗಬೇಕು. ಎಲ್ಲಿ ನಿಧಾನವಾಗಿ ಮಾಡುತ್ತಿದ್ದಾರೆ, ಕಾಮಗಾರಿ progress ಇದ್ದಾಗಲೂ ಕೆಲವರು release ಮಾಡುತ್ತಿಲ್ಲ ವೆಂದು ನಮಗೆ complaint ಬಂದವು. ಅದಕ್ಕೆ ನಾವು ಜಿಲ್ಲಾಧಿಕಾರಿಗಳಿಗೆ warning ಮಾಡಿದ್ದೇವೆ.

ಇವತ್ತು ಮಾನ್ಯ ಶಾಸಕರು ಏನು Action plan ಕೊಟ್ಟಿದ್ದು, ಅದು approve ಮಾಡಿದ್ದಾರೆ, ಅಂತಹ ಎಲ್ಲಾ ಕಡೆ ಕಾಮಗಾರಿಗಳು ಪ್ರಾರಂಭವಾಗಿವೆ. ಅದರಿಂದ ಇವತ್ತು 20, 97, 167 ಜನರಿಗೆ ಕೆಲಸವನ್ನು ನೀಡಿದ್ದೇವೆ. ಈಗ ಮಾನ್ಯ ಡಿ.ಆರ್. ಪಾಟೀಲರವರು ಹೇಳಿದರು. ನಾನು ಗದಗ್‌ಗೆ ಹೋಗಿದ್ದೆ, ಆಗ ಅಲ್ಲಿ ಅವರು ಕೆಲವೊಂದು ವಿಚಾರಗಳನ್ನು ಹೇಳಿದರು. ನಾವು ಅಲ್ಲಿ ಸೂಚನೆಯನ್ನು ಕೊಟ್ಟು ಬಂದಿದ್ದೆವು, ಅದು ಇದುವರೆಗೂ ಅನುಷ್ಠಾನವಾಗಿಲ್ಲವೆಂಬ ಮಾತನ್ನು ಹೇಳಿದರು. ಈ ಬಗ್ಗೆ ಮೊನ್ನೆ ಜಿಲ್ಲಾಧಿಕಾರಿಗಳ ಸಭೆ ನಡೆದಂಥ ಸಂದರ್ಭದಲ್ಲಿ, ನಾವು ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಎಚ್ಚರಿಕೆಯನ್ನು ಕೊಟ್ಟು ಕಳುಹಿಸಿದ್ದೇವೆ. ಎಲ್ಲೆಲ್ಲಿ ಕೆಲಸ ನಿಧಾನವಾಗಿ ಇದೆ, ಯಾವ ಕಾಮಗಾರಿಗಳು ಅನುಷ್ಠಾನವಾಗಬೇಕಾಗಿದೆ, ಹಣ ರಿಲೀಜ್ ಆಗಬೇಕಾಗಿದೆ, ಎಲ್ಲಿ ಗೋಶಾಲೆಗಳನ್ನು ತೆಗೆಯಬೇಕೆಂದು ಹೇಳಿದ್ದೇವೆ, ಅಲ್ಲಿ ಇದು ಆಗಿಲ್ಲವೆನ್ನುವಂಥಾದ್ದು. ಇದರ ಬಗ್ಗೆ ಸಾಕಷ್ಟು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ, ಮತ್ತು ಯುದ್ಧೋಪಾದಿಯಲ್ಲಿ ತಾವು ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಿ. ಇವತ್ತು ರಾಜ್ಯದಲ್ಲಿ ಏನು ಬರ ಪರಿಸ್ಥಿತಿ ಇದೆ, ಯುದ್ಧೋಪಾದಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೆನ್ನುವಂಥಾದ್ದು ಇದೆ. ಅದರ ಬಗ್ಗೆ ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಮಾಡುತ್ತಿದ್ದೇವೆ. ಇದನ್ನು ಇನ್ನು ಹೆಚ್ಚು ತೀವ್ರತೆಯಿಂದ ಮಾಡುವ ಪ್ರಯತ್ನವನ್ನು ನಾವು ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ತಾವು ಗೋಶಾಲೆಗಳ ಬಗ್ಗೆ ಹೇಳಿದ್ದೀರಿ, ಎಲ್ಲೆಲ್ಲಿ ಅವಶ್ಯಕತೆ ಇದೆ ಎಂಬುದನ್ನು ನೋಡಬೇಕು. ಏಕೆಂದರೆ ಕೆಲವು ಜಿಲ್ಲೆಗಳಿಗೆ ಹೋದಾಗ, ನಮಗೆ ಗೋಶಾಲೆಗಳ ಅವಶ್ಯಕತೆ ಇಲ್ಲ, ನಮಗೆ ಮೇವನ್ನು ಉಚಿತವಾಗಿ transport ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಆ ರೀತಿಯಲ್ಲಿ ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲಿ ಮೇವಿನ ಕೊರತೆ ಇದೆ, ಇವತ್ತು ಒಂದು ಕಡೆಯಿಂದ ಮತ್ತೊಂದು ಕಡೆಗೆ ಮೇವನ್ನು ಉಚಿತವಾಗಿ ತರುವಂಥ ವ್ಯವಸ್ಥೆಯನ್ನು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಇವತ್ತು 15 ಕಡೆಗಳಲ್ಲಿ ನಾವು ಗೋಶಾಲೆಗಳನ್ನು ತೆಗೆದಿದ್ದೇವೆ. ಅವುಗಳು ಕೊಪ್ಪಳ ಜಿಲ್ಲೆಯ ಕುಷ್ಟಗಿ, ಕೊಪ್ಪಳ, ಮೊಳಕಾಲ್ಮೂರು, ಚಿತ್ರದುರ್ಗ ಚಳ್ಳಕೆರೆ, ಮೊಳಕಾಲ್ಮೂರ ಮೆಸಗ್ರಿ ಅತ್ತಿ, ರಾಯಪುರದಲ್ಲಿ ಮೊಳಕಾಲ್ಮೂರು, ಚಳ್ಳಕೆರೆಯಲ್ಲಿ ಪರಶುರಾಮ್ ಚಾಳೂರು ಗೇಟ್, ಮುಂಡರಗಿಯಲ್ಲಿ ಎ.ಪಿ.ಎಂ.ಸಿ ಮುಂಡರಗಿ, ಮುಂಡರಗಿಯಲ್ಲಿ ಡಂಬರವಲ್ಲಿ,

ರೋಣದಲ್ಲಿ ಗಜೇಂದ್ರ ಗಡದಲ್ಲಿ, ಗದಗ್‌ನ ಲಕ್ಕುಂಡಿ, ಗದಗ್‌ನ ವೆಂಕಟಪುರದಲ್ಲಿ, ಗದಗ್‌ನ ಪಿಂಜಾಪುರದಲ್ಲಿ ಈ ರೀತಿ ಇವತ್ತು ಗೋಶಾಲೆಗಳ ಅವಶ್ಯಕತೆ ಎಲ್ಲೆಲ್ಲಿ ಇದೆ, ಅಲ್ಲಿ ತಕ್ಷಣವೇ ಗೋಶಾಲೆಗಳನ್ನು ನಾವು ತೆಗೆದಿದ್ದೇವೆ, ಮತ್ತು ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲಿ ತಕ್ಷಣವೇ ಗೋಶಾಲೆಗಳನ್ನು ತೆಗೆಯಬೇಕೆಂಬ ಸೂಚನೆಯನ್ನು ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ.

ಇನ್ನು ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಶಾಸಕರು ಹೇಳಿದರು. ಇವತ್ತು ಟಾಸ್ಕ್‌ಫೋರ್ಸ್ ಕಮಿಟಿ ಆಗಬೇಕು. ಮಾನ್ಯ ರವೀಂದ್ರನಾಥ್‌ರವರ ಇಲಾಖೆಗೆ ಬರುವಂಥಾದ್ದು, ಮತ್ತೆ ಹಿಂದಿನ ಬಾಕಿ ಕೊಡುವಂಥಾದ್ದು ಇದೆ, ಅದನ್ನು ಒಪ್ಪಿಕೊಳ್ಳುತ್ತಿದ್ದೇನೆ. ಹಿಂದಿನ ಬಾಕಿ ಕೊಡುವ ಬಗ್ಗೆ ಮೊನ್ನೆ ಚರ್ಚೆಯಾಗಿದೆ. ಅದರ ಬಗ್ಗೆ ನಾವು ನಿರ್ಣಯವನ್ನು ಕೈಗೊಳ್ಳುವವರು ಇದ್ದೇವೆ, ಮತ್ತೆ ಟಾಸ್ಕ್‌ಫೋರ್ಸ್ ಕಮಿಟಿಯನ್ನು ನಾವು ಮಾಡುವವರಿದ್ದೇವೆ. ಕುಡಿಯುವ ನೀರಿನ ಬಗ್ಗೆ ಸಾಕಷ್ಟು ಸಮಸ್ಯೆ ಇದೆ, ನಾನು ಮಾತನಾಡಿ ಮುಗಿಸುತ್ತೇನೆ. ನಾನು complete ಮಾಡುವುದಕ್ಕೆ ಬಿಟ್ಟರೆ complete ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಇವರು ಕುಡಿಯುವ ನೀರಿನ ಬಗ್ಗೆ ಬಹಳ ಗಂಭೀರತೆ ಇದೆಯೆಂದು ಹೇಳುತ್ತಿದ್ದಾರೆ. ಅದನ್ನು ನೀವು ಮಾಡಬೇಕಾಗಿತ್ತಲ್ಲವಾ?

ಶ್ರೀ ಜಗದೀಶ್ ಶೆಟ್ಟರ್ :- ನಾನು ಮಾತನಾಡಿ complete ಮಾಡುತ್ತೇನೆ. ಇದರ ಬಗ್ಗೆಯೂ ತಾವುಗಳು ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ. ಇವತ್ತು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಮತ್ತು ಮಾನ್ಯ ಹೆಚ್. ಆಂಜನೇಯರವರು ಹೇಳಿದರು. ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಸತತವಾಗಿ ಬರುತ್ತಿದೆ. ಮಾನ್ಯ ಕೆ. ಶ್ರೀನಿವಾಸಗೌಡರು ಒಂದು reference ಮಾಡಿದರು. ಇದಕ್ಕೆ ಒಂದು ಖಾಯಂ ಆದ ಪರಿಹಾರವನ್ನು ಕೊಡಿ ಎಂಬ ಮಾತನ್ನು ಹೇಳಿದರು. ಇದಕ್ಕೆ ಏನಾದರೂ ಒಂದು remedy ಯನ್ನು ಹುಡುಕಬೇಕೆನ್ನುವ ಮಾತನ್ನು ಹೇಳಿದರು. ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಎಂಬ ಮಾತನ್ನು ಹೇಳಿದರು. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಇವತ್ತು ಈ ಸರ್ಕಾರ ಇರಬಹುದು, ಯಾವುದೇ ಸರ್ಕಾರವಿರಬಹುದು. ತಜ್ಞರ ಸಮಿತಿಯಿಂದ ತೆಗೆದುಕೊಂಡ ಒಂದು ವರದಿಯನ್ನು ಇಟ್ಟುಕೊಂಡರೆ ಅದರ ಆಧಾರದ ಮೇಲೆ, ಇವತ್ತು ನಾವು

ಕಾಮಗಾರಿಯನ್ನು ಮಾಡುವಂಥಾದ್ದು ಇರಬಹುದು, ಅಥವಾ ಅದಕ್ಕೆ remedy ಮಾಡುವಂಥಾದ್ದು ಇರಬಹುದು, ಅದನ್ನು ಮಾಡಬಹುದಾಗಿದೆ. ಇವತ್ತು ಆ ಬಗ್ಗೆ ಕೂಡ ಸರ್ಕಾರ ಆಲೋಚನೆ ಮಾಡುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಇನ್ನು ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಹೇಳಿದರು. ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು ಏಕೆ ಇರಬೇಕು? ಎಂಬ ವಿಚಾರವನ್ನು ಹೇಳಿದರು. ತಾವು ಹೇಳಿದಂಥ ಸೂಚನೆಯನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ಅದರ ಬಗ್ಗೆ ಆದಷ್ಟು ಬೇಗ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರು ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರ ಅವಶ್ಯಕತೆ ಇಲ್ಲವೆಂಬ ಮಾತನ್ನು ತಾವು ಹೇಳಿದ್ದೀರಿ. ಅದರ ಬಗ್ಗೆ ನಾವು ವಿಚಾರ ಮಾಡಿ, ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೊ, ಆ ರೀತಿಯ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಹೇಳಿದರು, ಒಂದು permanent asset create ಆಗಬೇಕೆನ್ನುವಂಥಾದ್ದು, ಮತ್ತು ಕೆಲವೊಂದು ಕಡೆಗಳಲ್ಲಿ machine ಗಳನ್ನು ಉಪಯೋಗ ಮಾಡಬೇಕೆಂಬ ಸಲಹೆಯನ್ನು ಅವರು ಕೊಟ್ಟರು. ಇದು ಕೆಲವು ಕಡೆಗಳಲ್ಲಿ ಸಮಸ್ಯೆಯಾಗಿದೆ, ಏಕೆಂದರೆ Government of India ದು CRF ಹಣವನ್ನು ನಾವು receive ಮಾಡುವಂಥ ಸಂದರ್ಭದಲ್ಲಿ, ಅದಕ್ಕೆ guidelinesಇದೆ. ಆ guidelines ಇದ್ದು machine ಉಪಯೋಗ ಮಾಡಬಾರದೆಂದು ಇದೆ. ಈ ನಿಯಮಗಳು, ತೊಂದರೆಗಳು ಇವೆ, ಹಾಗಾಗಿ ಇದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಇವತ್ತು ಏನು ಸಮಸ್ಯೆಗಳು ಇವೆ........

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇವತ್ತು ನಿಯಮದಲ್ಲಿ, ಮತ್ತೊಂದು ಏನು ಇದೆ, ಅದು ನಮಗೆ ಗೊತ್ತಿರುವ ಹಾಗೆ nearly 40% ನೀವು ಮಿಷನರಿಗಾಗಲಿ, ಬೇರೆಯದಕ್ಕಾಗಲಿ, material ಗಾಗಲಿ ಹಣವನ್ನು ಖರ್ಚು ಮಾಡಬಹುದು. out of Rs.100, Rs.40 you can spend on that. ಆದರೆ ದುರ್ದೈವದಿಂದ ಏನಾಗಿದೆಯೆಂದರೆ, ಒಂದು ಸಾರಿ ನೀವು ಹೇಳಿದ ಮೇಲೆ, serioulу Deputy Commissioners, Assistent Commissioners, ಇವರೆಲ್ಲಾ ಹೆದರಿಕೊಂಡು,

ಯಾಕಪ್ಪ ಸುಮ್ಮನೆ ಕಿರಿಕಿರಿ, ಈಗ ಹೇಗೆ ಇದೆಯೋ ಹಾಗೆ ನಡೆದುಕೊಂಡು ಹೋಗಲಿ ಎಂದು, ಒಬ್ಬರೂ implement ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನೇ ಪಕ್ಕದ ರಾಜ್ಯದಲ್ಲಿ ನೋಡಿ, ಆಂಧ್ರಪ್ರದೇಶದವರು encourage ಮಾಡುವುದನ್ನು ಅವರು ಶೇ. 40ರಷ್ಟು ಖರ್ಚು ನೀವು ಮಾಡಿಯೆಂದು ಅದು de-silting ಇರಬಹುದು, ಅಥವಾ ನೀವು ಹೇಳಿದ ಹಾಗೆ hard rock ತೆಗೆದು ಹಾಕುವಂಥಾದ್ದು ಇರಬಹುದು. ಎಲ್ಲೆಲ್ಲಿ ನೀವು ಉಪಯೋಗ ಮಾಡಬಹುದೆಂದು asset creat ಮಾಡಬಹುದು. ಅಲ್ಲಿ ನೀವು ಆದೇಶವನ್ನು ಕೊಡಬೇಕು. ಆದರೆ ಏನಾಗಿದೆಯೆಂದರೆ, ಅಲ್ಲಿ ಕೇಳುವವರೇ ಇಲ್ಲ. ನೋಡುವವರೇ ಇಲ್ಲವೆಂದರೆ, guide ಮಾಡುವವರು ಯಾರು?

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಸಲಹೆಯನ್ನು ಕೊಟ್ಟಿದ್ದಾರೆ. ಇವತ್ತು CRFನ guide lines ಇವೆ. ಅದನ್ನು ನೋಡಿಕೊಂಡು ಎಲ್ಲಿ ಅವಕಾಶವಿದೆ, ಅಂಥಾ ಕಡೆಯಲ್ಲಿ machine ಉಪಯೋಗ ಮಾಡುವ ಬಗ್ಗೆ ನಾನು ವಿಚಾರ ಮಾಡುತ್ತೇನೆ, ಏಕೆಂದರೆ interpretation ಮಾಡಿಕೊಂಡು, ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೆಲವೊಂದು ಸಲಹೆಯನ್ನು ಕೊಟ್ಟರು. ಕೆಲವೊಂದು ಕಡೆ ಅವಕಾಶ ಇದೆಯೆಂಬ ಮಾತನ್ನು ಹೇಳಿದರು, ಹಾಗಾಗಿ CRFನ guidelines ಏನು ಇವೆ, ನಾನು ನೋಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಅವರೇ ಅಧ್ಯಕ್ಷರಾಗಿ ಇದ್ದಾಗ, de-silting ಕೆರೆಗಳು ಆಗಿದ್ದು, ನೀವು ಹೇಳಿದ ಹಾಗೆ ಅವರು ಹೇಳಿಕೊಂಡು ಇದ್ದಿದ್ದರೆ ನಾವು ಒಂದೇ ಒಂದು ಕೆರೆಯನ್ನು ಹೂಳನ್ನು ತೆಗೆಯುವುದಕ್ಕೆ ಆಗುತ್ತಾ ಇರಲಿಲ್ಲ. Minor irrigation ಗೆ ಇಷ್ಟು thrust ಕೊಟ್ಟು ಅವರು ಇದ್ದಾಗ 50% ದುಡ್ಡನ್ನು ಕೊಟ್ಟಿದ್ದರು. ಎಲ್ಲಾ ಕೆರೆಗಳನ್ನು ಸ್ವಲ್ಪ ಆಳ ಮಾಡಿ, ಹೂಳನ್ನು ತೆಗೆದೆವು. ನೀವು ನಿಮ್ಮ D.C ಯವರು ಹೇಳಿದ ಕತೆಯನ್ನೇ, ನೀವು ಇಲ್ಲಿ ಹೇಳಿಕೊಂಡು ನಿಂತರೆ, ನಾನು ಏನೂ ಮಾಡುವ ಹಾಗೆ ಇಲ್ಲ. ನಾವು ಊರಲ್ಲಿ ಶಂಕು ಊದುತ್ತಾ ಕುಳಿತುಕೊಳ್ಳಬೇಕಷ್ಟೇ. ನಿಮ್ಮ officers ಗೆ ಕೆಲಸವೆನ್ನುವುದು ಬೇಕೆ? ಅವರಿಗೆ ಮೋಜು ಬೇಕಾಗಿದೆ. ಆಫೀಸರುಗಳು ರಾಜ್ಯವನ್ನು ಹಾಳು ಮಾಡುವುದಕ್ಕೆ ಇರುವುದು. ನೀವು ಲೆಕ್ಕವನ್ನು ತೆಗೆಯಿರಿ, ಯಾವ ಜಿಲ್ಲೆಯಲ್ಲಿ ಮಿಷನ್‌ಅನ್ನು ಬಳಸುತ್ತಿಲ್ಲ, ತುಮಕೂರು ಒಂದಕ್ಕೆ ಇದು ಶಾಪನಾ? ನಾವು ಬರೆದುಕೊಟ್ಟು ಒಂದು ತಿಂಗಳಾಗಿದೆ. ಅಲ್ಲಿ

ಅಧಿಕಾರಿಗಳು CRF ಕೆಲಸಗಳನ್ನು ಮಾಡುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಏನಾದರೂ decision ತೆಗೆದುಕೊಳ್ಳಿ ಎಂದರೆ, ಇಲ್ಲಿ ನಾವು ಕತೆ ಕೇಳಿಕೊಂಡು ಕುಳಿತುಕೊಳ್ಳೋಣವೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಅಧ್ಯಕ್ಷರೆ, ನೀವು flood ಗೆಂದು ಕೊಟ್ಟ ದುಡ್ಡು ಕಳೆದ ವರ್ಷದ್ದು, ಇನ್ನೂ ಕೆಲಸವಾಗಿಲ್ಲ. ಅದರ ಹಿಂದಿನ ವರ್ಷದ್ದು ಈಗ inspection ಮಾಡಿ, bill heldup ಆಗುತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಕತೆಯನ್ನು ಕೇಳಿಕೊಂಡು ಕುಳಿತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ನಮಗೆ ಒಂದು ನಿಯಮ, ಒಂದು guideline ಎಂದು ಇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಇಟ್ಟುಕೊಳ್ಳಿ,, ನಾನು ತುಮಕೂರಿನಲ್ಲಿ ಏನು problem ಆಗಿದೆಯೆಂಬುದನ್ನು ನೋಡುತ್ತೇನೆ. ಅದನ್ನು ನೋಡಿ ಸರಿಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ.

ನಿಮ್ಮ D.C.ಗಳು ಹಿಟ್ಲರ್‌ಗಳು ಆಗಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಒಂದೂವರೆ ತಿಂಗಳಾಗಿದೆ, ಇವರು ಏಕೆ ಮಾಡಿದ್ದೀರೆಂದು ನೋಟಿಸ್ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :– CRF ನವರೇ guide lines ಮಾಡಿದ್ದಾರೆ. ಆ ಗೈಡ್‌ಲೈನ್ಸ್ ಪ್ರಕಾರ...........

ಶ್ರೀ ಜೆ.ಸಿ. ಮಾಧುಸ್ವಾಮಿ :– JCB ತಂದು ಕೆಲಸನವನ್ನು ಮಾಡುವಾಗ Guide line ಇರಲಿಲ್ಲವಾ? ನಿಮಗೆ ಕೊಡಲಾ ರೆಕಾರ್ಡ್‌ಗಳು, D.C.ಗಳು ಏನಾಗಿದ್ದಾರೆಂಬುದು ನಿಮಗೆ ಗೊತ್ತಾ?

ಶ್ರೀ ಜಗದೀಶ್ ಶೆಟ್ಟರ್ :– ತಾವು ಆ ಮಾಹಿತಿಗಳನ್ನು ನನಗೆ ಕೊಡಿ, action ತೆಗೆದುಕೊಳ್ಳೋಣ. ಸರ್ಕಾರ ಒಂದು ನಿಯಮ, guide lines ಪ್ರಕಾರ ಹೋಗಬೇಕಾಗುತ್ತದೆ, ಹಾಗೆ ನಾವು announcement ಮಾಡುವುದಕ್ಕೆ ಬರುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಿಯಮ ಬಿಟ್ಟು ಯಾರೂ ಹೋಗುವುದಿಲ್ಲ, ನಾವು ಎಲ್ಲರೂ ಹೇಳುವುದು ನಿಯಮಗಳು ಅಡ್ಡ ಬಾರದ ಹಾಗೆ ಏನಾದರೂ ಮಾಡಬೇಕೆಂದು ಹೇಳುತ್ತಿರುವುದು.

(ಗೊಂದಲ)

ಅಧ್ಯಕ್ಷರು :- ಮಾನ್ಯ ಕಂದಾಯ ಸಚಿವರು ಉತ್ತರವನ್ನು ಹೇಳಲಿ, ಆಮೇಲೆ ಒಬ್ಬೊಬ್ಬರೆ clarification ಕೇಳಿ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಅಧ್ಯಕ್ಷರೆ, ಎಲ್ಲರೂ ಕೂಡ ಅಧಿಕಾರ ಅನುಭವಿಸಿರತಕ್ಕಂಥವರು. ಎಲ್ಲರೂ ದೆಹಲಿಗೆ ಹೋಗಿ ಬಾಗಿಲನ್ನು ತಟ್ಟಿ ಬಂದಿದ್ದೇವೆ. CRF ಗೆ ಸಂಬಂಧಪಡುವಂಥ ವಿಚಾರಗಳಲ್ಲಿ ಕೇಂದ್ರಸರ್ಕಾರ ಮಾರ್ಗಸೂಚಿಯನ್ನು ಕೊಡುತ್ತದೆ. ಅದು ದೇಶದ ದೃಷ್ಟಿ ಇಟ್ಟುಕೊಂಡು ಒಂದು ಮಾರ್ಗಸೂಚಿಯನ್ನು ಕೊಟ್ಟಿರಬಹುದು. ಇಂಥ ವಿಚಾರಗಳಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸಿ ಎಂದು ನಾವು ಪದೇ ಪದೇ ಅನೇಕ ಸಂದರ್ಭದಲ್ಲಿ ಕೊಟ್ಟಿದ್ದೇವೆ. ಆದರೆ ಇಲ್ಲಿ ಹೇಗೆ ಆಗಿದೆಯೆಂದರೆ, ನಾವು ಒಂದು ಕಡೆಗೆ ಕಾನೂನನ್ನು ಮಾತನಾಡುತ್ತೇವೆ, ಮತ್ತೊಂದು ಕಡೆಗೆ ಅದನ್ನು ಸ್ವಲ್ಪ ಮಟ್ಟಿಗೆ ಬದಲಾವಣೆಗಳನ್ನು ಮಾಡಿಕೊಳ್ಳಿಯೆಂದು ಹೇಳುತ್ತೇವೆ. ಹಿಂದೆ ಇದೇ ವಿಚಾರದಲ್ಲಿ ಮಾನ್ಯ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ಇದ್ದಾಗ, ಅನೇಕ ಎಂ.ಎಲ್.ಎ.ಗಳು ಈ ರೀತಿ ಮಿಷನ್‌ಗಳನ್ನು ಉಪಯೋಗಿಸುತ್ತಿದ್ದರು. ಅಕ್ಕಿಯನ್ನು ಮಾರಿಕೊಂಡು ತಿಂದು ಹಾಕುತ್ತಿದ್ದರು, ಇದೆಲ್ಲಾ ಪರದೇಶಕ್ಕೆ ಹೊರಟು ಹೋಯಿತು, ಎಂದು ವಿಚಿತ್ರವಾಗಿ ಮಾತನಾಡಿದ ಮೇಲೆ ಅದೆಲ್ಲವೂ ನಿಂತು ಹೋಯಿತು.

ಆದರೆ ಆಂಧ್ರಪ್ರದೇಶದಲ್ಲಿ ಅಕ್ಕಿಯನ್ನು ನೇರವಾಗಿ auction ಮಾಡಿ ಮಾರಾಟ ಮಾಡಿದರು. ಒಂದು ಕಡೆಗೆ ಪತಿವ್ರತ ಧರ್ಮವನ್ನು ಹೇಳುವುದು, ಒಂದು ಕಡೆಗೆ ಸ್ವಲ್ಪಮಟ್ಟಿಗೆ ಹಾಗೆ ಸರಿದುಕೊಂಡು ಅನುಕೂಲ ಮಾಡಿಕೊಂಡು ಹೋಗಿ ಎಂದು ಹೇಳುವುದಾದರೆ, ಈ ದೃಷ್ಟಿಯಕೋನವನ್ನು ಇಟ್ಟುಕೊಂಡಿರುವುದರಲ್ಲಿ ಸ್ವಲ್ಪಮಟ್ಟಿಗೆ ನೀವು ಏನು ಹೇಳುತ್ತೀರಿ, ಮಿಷನ್ ಅನ್ನು ನಾವು ಉಪಯೋಗಿಸಬೇಕು. ಆ ಕಾರಣಕ್ಕಾಗಿಯೇ, ಇವತ್ತಿಗೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡಗಳನ್ನು ಹೇರುತ್ತಿದ್ದೇವೆ. ಕರ್ನಾಟಕದ ಮಟ್ಟಿಗೆ ಕೆಲವು ಸಂದರ್ಭದಲ್ಲಿ ಇದು ಒಂದು ಉಪಖಂಡದ ವ್ಯಾಪ್ತಿಯಲ್ಲಿರುವಂಥ ಭಾರತ ದೇಶದಲ್ಲಿ ಆಯಾ ರಾಜ್ಯ ಸರ್ಕಾರಗಳು ತಮ್ಮ ಪ್ರಾದೇಶಿಕ ಅನುಕೂಲಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ನಿಯಮಾವಳಿಗಳನ್ನು ರಚನೆ ಮಾಡಿಕೊಳ್ಳಿಯೆಂದು ಹೇಳುವುದಕ್ಕೆ ಅವರಿಗೆ ಏನು ಆಗುತ್ತದೆ? ಅದು ಉತ್ತರ ಭಾರತದ ಜಮ್ಮು ಕಾಶ್ಮೀರದಿಂದ ಹಿಡಿದು

ಕನ್ಯಾಕುಮಾರಿಯವರೆಗೂ ಇರುವಂಥ ಎಲ್ಲಾ ರಾಜ್ಯಗಳಿಗೂ ಕೂಡ ಅವರು ಮಾಡಿದ ಸೂತ್ರವನ್ನೆ ಅನುಸರಿಸಬೇಕೆಂದು ಹೇಳುತ್ತಾರೆ. ಇದೇ ರೀತಿಯಾಗಿ ನಿಮಗೆ ಅನುಭವಕ್ಕೆ ಬಂದಿರತಕ್ಕಂಥಾದ್ದೂ ಇದೆ.

ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಹೂಳು ತೆಗೆಯಲಿಕ್ಕೆ ಬೇಕಾಗಿರತಕ್ಕಂಥಾದ್ದಕ್ಕೆ ಮಾಡಿಕೊಟ್ಟರು. ಕೋಲಾರದಲ್ಲಿ ಎಲ್ಲ ರೈತರುಗಳು ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಹೋದರು. ಮಾನ್ಯ ಭೈರೇಗೌಡರು ಸ್ವತಃ ನಿಂತುಕೊಂಡು ಅಲ್ಲಿ ಕೆಲಸ ಮಾಡಿಸಿದರು. ಅದೇ ರೀತಿಯಾಗಿ ತುಮಕೂರು ಮೊದಲಾದಂಥ ತಾಲ್ಲೂಕುಗಳಲ್ಲಿ ಹೂಳು ತೆಗೆಯತಕ್ಕಂಥಾದ್ದರಲ್ಲಿ ಎಲ್ಲರೂ ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಂಡು ಹೋಗಿದ್ದರು. ಆ ಮಷಿನ್‌ಗೆ ಒಂದು ಗಂಟೆಗೆ ಆರು ಸಾವಿರ ಚಿಲ್ಲರೆ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದರೆ ಬಳ್ಳಾರಿ ಮತ್ತಿತರ ಕೆಲವು ಕಡೆಗಳಲ್ಲಿ ಎಂಥ ಆಲಸಿಗಳಾದ ರೈತರಿದ್ದಾರೆ ಎಂದರೆ ಯಾರೂ ಅಲ್ಲಿಗೆ ಬರಲಿಕ್ಕೆ ತಯಾರಾಗಲಿಲ್ಲ ಮತ್ತು ಅವರ ಹತ್ತಿರ ಟ್ರ್ಯಾಕ್ಟರ್‌ಗಳೂ ಇರಲಿಲ್ಲ. ಆದ್ದರಿಂದ ಹೂಳು ತೆಗೆಯತಕ್ಕಂಥ ಕೆಲಸವೂ ಆಗಲಿಲ್ಲ. Lake Authority ಯಿಂದ ಏನಾಗಿದೆ ಎನ್ನುವುದು ನಮಗೆಲ್ಲ ಗೊತ್ತಿರತಕ್ಕಂಥಾದ್ದು ಆಗಿದೆ.

ಈಗ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ 15 ಕೋಟಿ ರೂಪಾಯಿಗಳನ್ನು ಟಾಸ್ಕ್‌ಫೋರ್ಸ್‌ಗಳಿಗೆ ಹಂಚಿಕೊಡಲು ಆದೇಶ, ಪ್ರಾಯಶಃ 3–4 ದಿವಸಗಳೊಳಗಾಗಿ ಆಗುತ್ತದೆ. ಈ 15 ಕೋಟಿ ರೂಪಾಯಿಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯವರು ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿರತಕ್ಕಂಥ ಟಾಸ್ಕ್‌ಫೋರ್ಸ್‌ಗಳಿಗೆ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಲಿಕ್ಕೆ ಈಗಾಗಲೇ ನಿರ್ಧಾರ ತೆಗೆದುಕೊಂಡಿದ್ದೇವೆ. ನಾಳೆ ನಾಡಿದ್ದು ರಜೆ ಇರುವುದರಿಂದ 3–4 ದಿವಸಗಳಲ್ಲಿ ಆದೇಶವಾಗುತ್ತದೆ. ಡಿ.ಆರ್.ಪಾಟೀಲ್‌ರವರನ್ನು ಕೇಳಿ, Task Force Committee ಗಳನ್ನು ಮಾಡತಕ್ಕಂಥಾದ್ದೂ ಕೂಡ ಕಾನೂನಿಗೆ ವಿರೋಧವಾಗುತ್ತದೆ. ಅದನ್ನು ನೀವೇ ಮಾಡಿರತಕ್ಕಂಥಾದ್ದು. ಒಂದು ದೊಡ್ಡ ಸಮಾವೇಶವನ್ನು ಮಾಡಿ ಎಲ್ಲವನ್ನೂ ಅವರಿಗೆ ಕೊಡಬೇಕು ಎಂದು ನಿರ್ಧಾರ ಮಾಡಿದ್ದೀರಿ. ಆದರೂ ಕೂಡ ಅದನ್ನು ಬದಲಾವಣೆ ಮಾಡಬೇಕಾಗಿದೆ, ನಾವು ಬದಲಾವಣೆಯನ್ನು ಮಾಡಿದ್ದೇವೆ.

ಇದರ ಜೊತೆಗೆ, 50 ಕೋಟಿ ರೂಪಾಯಿಗಳನ್ನು Non C.R.F Fund ನಿಂದ ಕೊಡಬೇಕು ಎಂದು ನಿರ್ಧಾರ ಮಾಡಿದ್ದೇವೆ. ನಾಳೆ ನಾಡಿದ್ದು ರಜೆ

ಇರುವುದರಿಂದ ಸೋಮವಾರದ ದಿವಸ G.O. ಹೊರಬರುತ್ತದೆ. ನಾನು ಸದನದಲ್ಲಿ ಮಾತನಾಡುವಾಗ ಅತ್ಯಂತ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಸೋಮವಾರದ ದಿವಸ 50 ಕೋಟಿ ರೂಪಾಯಿಗಳನ್ನು Non C.R.F Fund ನಿಂದ ಬಿಡುಗಡೆ ಮಾಡುತ್ತೇವೆ. Non C.R.F Fund ಗೆ ಈ ನಿಯಮಾವಳಿಗಳು ಅಡ್ಡಬರುವುದಿಲ್ಲ. ಅದರ 50 ಕೋಟಿ ಮತ್ತು ಈಗಾಗಲೇ ಹೇಳಿದಂತೆ 15 ಕೋಟಿ, ಒಟ್ಟು 65 ಕೋಟಿ ರೂಪಾಯಿಗಳು ಬರುತ್ತದೆ. 161 ಕೋಟಿ ರೂಪಾಯಿಗಳು P.D. Account ನಲ್ಲಿದೆ.

ಶ್ರೀ ಸಿದ್ಧರಾಮಯ್ಯ :– P.D. Account ನಲ್ಲಿರುವುದು ಹಳೆಯ ಸಾಲವನ್ನು ತೀರಿಸುವುದಕ್ಕಾಗಿ.

ಶ್ರೀ ಎಂ.ಪಿ. ಪ್ರಕಾಶ್ :– ಆಯಿತು. ಹಳೆಯ ಸಾಲ ಎಲ್ಲವನ್ನೂ ತೀರಿಸುತ್ತೇವೆ. ಒಂದು ವಿಷಯವನ್ನು ನಾವು ಭರವಸೆಯಿಂದ ಹೇಳುತ್ತಿದ್ದೇವೆ, ಕುಡಿಯುವ ನೀರಿಗೆ ಸಂಬಂಧಪಟ್ಟ ನಾವು ಇನ್ನೂ ಎರಡು ತಿಂಗಳು ಹೋರಾಟವನ್ನು ಮಾಡಲೇಬೇಕಾಗುತ್ತದೆ. ನೀರು ಕೊಡಲಾರದಂಥ ಸರ್ಕಾರ ನಾಲಾಯಕ್ ಸರ್ಕಾರವಾಗುತ್ತದೆ. ಕೆಲವು ಕಡೆಗಳಿಗೆ ಕಡಿಮೆ, ಕೊರತೆಯಾಗಿರತಕ್ಕಂಥಾದ್ದು ಆಗಿರಬಹುದು. ಅನೇಕ ಕಡೆಗಳಲ್ಲಿ, ಹಿಂದೆ ಇದ್ದಂಥ ಎಂ.ಎಲ್.ಎ ಗಳು ಕ್ರಿಯಾ ಯೋಜನೆಗಳನ್ನು ಮಾಡಿಕೊಟ್ಟಿಲ್ಲ. ಈಗ ನಾವು ಎಲ್ಲರಿಗೂ ಪತ್ರವನ್ನು ಬರೆದಿದ್ದೇವೆ. ಬರಗಾಲದ ಯಾವುದೇ ವಿಚಾರಗಳನ್ನು ನಾವು ಪರಿಪೂರ್ಣವಾಗಿ, ಸಂಪೂರ್ಣವಾಗಿ ನಿವಾರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುವುದಿಲ್ಲ. ಆದರೆ, ಅವರು ಈಗಾಗಲೇ ಹೇಳಿದ ಹಾಗೆ, ಅನೇಕ ಊರುಗಳಿಗೆ ಟ್ಯಾಂಕರ್‌ಗಳಿಂದ ನೀರನ್ನು ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ.

ನಾನು ಒಂದು ಮಾತನ್ನು ಕೇಳುತ್ತೇನೆ. ನಾವು ಕೇಂದ್ರ ಸರ್ಕಾರ ಎಂದ ಕೂಡಲೇ ತಾವು ಇಷ್ಟು ಸೂಕ್ಷ್ಮವಾಗಿ ಪ್ರತಿಕ್ರಿಯೆಯನ್ನು ಮಾಡುತ್ತೀರಿ. ತಾವು ದಯವಿಟ್ಟು ನಮ್ಮೊಟ್ಟಿಗೆ ಬನ್ನಿ. ಕೇಂದ್ರ ಸರ್ಕಾರದ C.R.F guidelenes ಬದಲಾವಣೆ ಮಾಡಿ ಎಂದು ಹೇಳೋಣ. ನಿಮ್ಮ ಕಾಲದಲ್ಲಿ, ನೀವು ಉಪ ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಧರ್ಮಸಿಂಗ್‌ರವರು ಉಪ ಮುಖ್ಯಮಂತ್ರಿಗಳಾಗಿದ್ದಾಗ ಹೋಗಿದ್ದೇವೆ. ಎಸ್.ಎಂ. ಕೃಷ್ಣರವರ ಕಾಲದಲ್ಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಮಿಟಿಯ ಅಧ್ಯಕ್ಷರಾಗಿದ್ದಾಗ ಹೇಳಿದ್ದೇವೆ. ಕೇಂದ್ರ ಸರ್ಕಾರದಲ್ಲಿಯೂ ಕೂಡ ಅಧಿಕಾರಶಾಹಿಗಳ ಕೆಲಸವೇ ನಡೆಯುತ್ತದೆ. ಅಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು

ತೋರಿಸಿದರೂ ಕೂಡ ಸುತ್ತೋಲೆಯಲ್ಲಿ ಒಂದು ಬದಲಾವಣೆಯೂ ಆಗಲಿಲ್ಲ. ಬರಗಾಲದ ಸಂದರ್ಭದಲ್ಲಿ C.R.F Fund ನೀಡುವ guidelenes ಹೇಗಿದೆಯೆಂದರೆ, hay stock ಅಂದರೆ ಬಣವಿ ಸುಟ್ಟರೆ ಅದಕ್ಕೆ ಪರಿಹಾರ ಕೊಡತಕ್ಕಂಥಾದ್ದು ಇದೆ. ನಿಮ್ಮ ಕಡೆ ಅದನ್ನು ಮೆದೆ ಎಂದು ಹೇಳುತ್ತಾರೆ. ಆದರೆ ಅದೇನಾದರೂ ತೆನೆ ಸಮೇತವಾಗಿದ್ದರೆ ಪರಿಹಾರಬರುವುದಿಲ್ಲವಂತೆ.

ಯಾವುದಾದರೂ ಗುಡಿಸಲು ಸುಟ್ಟು ಹೋದರೆ, ದನಕರುಗಳು ಸುಟ್ಟು ಹೋದರೆ ಅಥವಾ agriculture implements ಸುಟ್ಟು ಹೋದರೆ ಅದಕ್ಕೆ ಪರಿಹಾರ ಕೊಡಬಾರದು ಎನ್ನತಕ್ಕಂಥಾದ್ದು ಇದೆ. ಈ ರೀತಿಯ guidelines ಅನ್ನು ಯಾರು ತಯಾರು ಮಾಡುತ್ತಾರೆ? ನಾವು ಅವರಿಗೆ ಎಷ್ಟು ಸಲ ಪತ್ರ ಬರೆಯಬೇಕು? ಮೊದಲು ಪರಿಹಾರದ ಮೊತ್ತ ಒಂದು ಲಕ್ಷ ಇದ್ದುದನ್ನು ಈಗ 50 ಸಾವಿರ ರೂಪಾಯಿಗಳು ಎಂದು ಮಾಡಿದ್ದಾರೆ. ಇದು ಒಂದು ವಿಶಾಲವಾದಂಥ ದೇಶವಾಗಿರುವುದರಿಂದ ಅನೇಕ ಸಂದರ್ಭಗಳಲ್ಲಿ ನಾವು ನೀವು ಇಂಥಾದ್ದರಿಂದ ಕಷ್ಟವನ್ನು ಅನುಭವಿಸಿದ್ದೇವೆ. ಆದರೆ, ನಾವು ಇಷ್ಟನ್ನು ಮಾತ್ರ ಹೇಳುತ್ತೇವೆ, ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ತೊಂದರೆಯಾಗದಂತೆ ಹಣಕಾಸಿನ ವ್ಯವಸ್ಥೆ ಮಾಡಿಕೊಡುತ್ತೇವೆ. ಸೋಮವಾರದ ಹೊತ್ತಿಗೆ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ Task Force Committee ಮತ್ತೆ ರಚನೆಯಾಗುತ್ತವೆ, ಅವುಗಳಿಗೆ ದುಡ್ಡನ್ನು ಕೊಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :- ಸರ್, ಉದ್ಯೋಗದ ವಿಚಾರವನ್ನು ತಾವು ಹೇಳಲೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನಮ್ಮದು 2-3 difficulties ಇವೆ. ಮೊದಲನೆಯದಾಗಿ, ಜಗದೀಶ್ ಶೆಟ್ಟರ್‌ರವರ ಹತ್ತಿರ ದುಡ್ಡಿಲ್ಲ. ನಿಮ್ಮ ಹತ್ತಿರವೂ ದುಡ್ಡಿಲ್ಲ. ಕುಡಿಯುವ ನೀರಿಗೆ minimum ಎಂದರೂ ಒಂದೊಂದು ತಾಲ್ಲೂಕಿಗೆ at least 20-25 ಲಕ್ಷ ರೂಪಾಯಿಗಳಾದರೂ ಬೇಕಲ್ಲವೇ? ಇದನ್ನಾದರೂ ತಕ್ಷಣ ಬಿಡುಗಡೆ ಮಾಡಬೇಕಲ್ಲವೇ? ಒಂದು ತಿಂಗಳಲ್ಲಿ at least 50 ಲಕ್ಷ ರೂಪಾಯಿಗಳನ್ನಾದರೂ ನೀವು ಬಿಡುಗಡೆ ಮಾಡಬೇಕಲ್ಲವೇ? ಎರಡನೆಯದಾಗಿ, Employment Guarantee Scheme ನಲ್ಲಿ ಏನಾಗಿದೆ ಎಂದರೆ, ಒಂದು ಕಡೆ ನೀವು Employment Guarantee Scheme ನಲ್ಲಿ ಹಣವಿದೆ, ಅದನ್ನು ಖರ್ಚು

ಮಾಡಿ, ಅಲ್ಲಿ C.R.F Fund ಅನ್ನಾಗಲೀ ಅಥವಾ Natural Calamity Fund ಅನ್ನಾಗಲೀ ಉಪಯೋಗಿಸಲು ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತೀರಿ. ಯಾರು Regestered labourers ಇದ್ದಾರೆ, ಅವರಿಗೆ ಮಾತ್ರ ಅಲ್ಲಿ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಉಳಿದಂಥ ರೈತರು, small farmers, marginal farmers ಮತ್ತು ಕೂಲಿಗೆ ಬರತಕ್ಕಂಥ ಬೇರೆ ಜನರಿಗೆ ಅಲ್ಲಿ ಯಾವ ಅವಕಾಶವೂ ಇಲ್ಲ. ಅದಕ್ಕಾಗಿ ನೀವು ಬರಗಾಲದ ಹಣವನ್ನು ಕೊಡದೇ ಹೋದರೆ......

ಶ್ರೀ ಜಗದೀಶ್ ಶೆಟ್ಟರ್ :- ಬರಗಾಲ ಹಣವನ್ನು ಆಯಾಯಾ ಜಿಲ್ಲೆಗಳಿಗೇ ಕೊಟ್ಟಿದ್ದೇವೆ. 188 ತಾಲ್ಲೂಕುಗಳಿಗೆ ಕೊಟ್ಟಿದ್ದೇವೆ. ಮೊದಲು ಆ ರೀತಿ ಮಾಡಿದ್ದರು. ಆಮೇಲೆ ಎಲ್ಲ ಕಡೆಗೆ ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಕೊಟ್ಟಿಲ್ಲ. ನಾನು ಯಾವಾಗಲೂ ಸಹ D.C. ಯವರ ಹತ್ತಿರ ಮತ್ತು ಬೇರೆಯವರ ಹತ್ತಿರ ಮಾತನಾಡದೇ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಮೊದಲು ಕೊಡಬಾರದು ಎಂದು ಇತ್ತು. ಆಮೇಲೆ ನಾವು ಕೊಟ್ಟೆವು. ಕೊಟ್ಟು ಈಗಾಗಲೇ 2-3 ತಿಂಗಳಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಹೇಳುವುದನ್ನು ಸ್ವಲ್ಪ ಕೇಳಿ. ಒಂದೊಂದು ಕೋಟಿ ಆದಮೇಲೆ ನೀವು ತಿರುಗಿ ಅವರಿಗೆ ಹೇಳಿದ್ದು ಏನೆಂದರೆ, ಯಾವ ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದವರು implement ಮಾಡುತ್ತಿದ್ದಾರೆ, ಅಲ್ಲಿ ಕೊಡತಕ್ಕಂಥಾದ್ದು ಅಲ್ಲ ಎಂದು ಹೇಳಿದ ಮೇಲೆ, ಅವರು ಅಲ್ಲಿ ಕುಡಿಯುವ ನೀರಿಗೆ ಮಾತ್ರ ಹಣ ಕೊಡುತ್ತಿದ್ದಾರೆಯೇ ಹೊರತಾಗಿ ಕೆಲಸ ಕೊಡುತ್ತಿಲ್ಲ. ಯಾರಿಗೇ ಕೆಲಸ ಬೇಕಾದರೂ ನೀವು National Rural Employment Guarantee Scheme ನಲ್ಲಿ ಬನ್ನಿ ಎಂದು ಹೇಳುತ್ತಿದ್ದಾರೆ. ನಾನು practically ಹೇಳುತ್ತಿದ್ದೇನೆ. ಸುಮ್ಮನೆ ಯಾರ ಮೇಲೋ allegation ಮಾಡಬೇಕು ಎಂದು ನಾನು ಹೇಳುತ್ತಿಲ್ಲ. 10 ಜಿಲ್ಲೆಗಳಲ್ಲಿ ಈ ವರ್ಷದಿಂದ National Rural Employment Guarantee Scheme ಪ್ರಾರಂಭವಾಗಿದೆ. ಜನರು ಕೆಲಸ ಮಾಡುವುದೇ ಈ ತಿಂಗಳಿನಲ್ಲಿ ಅಂದರೆ ಏಪ್ರಿಲ್, ಮೇ ಮತ್ತು ಜೂನ್ 10, 15 ನೇ ತಾರೀಖಿನವರೆಗೆ ಮಾಡುತ್ತಾರೆ. ನಂತರ ಮಳೆ ಪ್ರಾರಂಭವಾಯಿತು ಅಂದರೆ ಎಲ್ಲರೂ ಕೂಡ engage ಆಗುತ್ತಾರೆ.

ನೀವು Guidelines ಅನ್ನು ಕೊಟ್ಟಿದ್ದೀರಿ. ಆದರೆ, ನೀವು ಪದೇ ಪದೇ D.C. ಯವರ ಹತ್ತಿರ unutilized money ಇದೆ ಎಂದು ಹೇಳುತ್ತಿದ್ದೀರಿ. ಅಲ್ಲಿ ಹಣ ಇಲ್ಲ. Deputy Commissioners at a time ಏಕೆ ಹಣವನ್ನು release ಮಾಡುವುದಿಲ್ಲ ಎಂದರೆ, ಅವರು approve ಮಾಡಿದ ಕೆಲಸ ಮುಗಿದ ಮೇಲೆ ಅದಕ್ಕೆ ಕೊಡಬೇಕು ಎಂದು ಇಟ್ಟುಕೊಂಡಿದ್ದಾರೆ. ಅದು utilization ನಲ್ಲೇ ಬಂದಿರುತ್ತದೆ. ಆದರೆ ನೀವು P.D.Account ನಲ್ಲಿ ಇಷ್ಟು ದುಡ್ಡು ಇದೆ ಎಂದು ಕಾಗದದಲ್ಲಿ, Pass book ನಲ್ಲಿ ತೋರಿಸುತ್ತೀರಿ. ಉದಾಹರಣೆಗೆ, ಗುಲ್ಬರ್ಗಾದಲ್ಲಿ P.D. Account ನಲ್ಲಿ 4 ಕೋಟಿ ರೂಪಾಯಿಗಳಿವೆ ಎಂದು ತಿಳಿದುಕೊಳ್ಳಿ. 4 ಕೋಟಿ ರೂಪಾಯಿಗಳ ಕೆಲಸ 10 ತಾಲ್ಲೂಕುಗಳಲ್ಲಿ Complete ಆಗಿರುತ್ತದೆ. ಆದರೆ, formalities ಮುಗಿದಿರದ ಕಾರಣ, utilization certificate ಕೊಡದೇ ಇದ್ದ ಕಾರಣ ಆ ಹಣ ಬಿಡುಗಡೆಯಾಗಿರುವುದಿಲ್ಲ. ಬಿಡುಗಡೆಯಾಗುವವರೆಗೂ ಆ ಹಣ Account ನಲ್ಲಿರುತ್ತದೆ.

ಆದರೆ ನಿಮ್ಮ ಲೆಕ್ಕದಲ್ಲಿ unutilized money ಅದು. ಆದರೆ ನಾವು ಅಲ್ಲಿಗೆ ಹೋಗಿ ಕೇಳಿದಾಗ, ದುಡ್ಡು ಮುಗಿಯಿತು ಎಂದು ಹೇಳುತ್ತಾರೆ. ನಾನೇ 10 ಸಾರಿ phone ಮಾಡಿ ದುಡ್ಡು ಬಂತೇ ಎಂದು ಕೇಳಿದ್ದೇನೆ. ಇಲ್ಲ ಸರ್, ಈಗಾಗಲೇ ಕೊಟ್ಟ ಕೆಲಸಗಳೆಲ್ಲ ಮುಗಿದಿವೆ, ಅವುಗಳಿಗೆ ಎಷ್ಟು ದುಡ್ಡನ್ನು release ಮಾಡಬೇಕೋ ಅಷ್ಟು ದುಡ್ಡು ಇದೆ, ಉಳಿದಂತೆ ನಮ್ಮಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಆದರೆ ನೀವು ಮಾತ್ರ ಪದೇ ಪದೇ ದುಡ್ಡು ಇದೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಈ ಸಾರಿ ಅದು ಸ್ಪಷ್ಟವಾಗಬೇಕು. ಈ ತಿಂಗಳು 200 ಕೋಟಿ ರೂಪಾಯಿಗಳನ್ನು ಕಂತುಗಳಲ್ಲಿ ಬಿಡುಗಡೆ ಮಾಡಿ. ಅದರಲ್ಲಿ 100 ಕೋಟಿ ರೂಪಾಯಿಗಳು ನೀರಿಗೆ ಎಂದು ಹೇಳಿ. ಈ ವಾರದಲ್ಲಿ first instalment, second week ನಲ್ಲಿ ಎರಡನೇ instalment, third week ನಲ್ಲಿ ಮೂರನೇ instalment, 350 ಕೋಟಿ ರೂಪಾಯಿಗಳ ಯೋಜನೆ ಮಾಡಿಕೊಂಡು ಹೀಗೆ ಮೂರು instalment ಗಳಲ್ಲಿ release ಮಾಡಿ. ಅದಕ್ಕೂ ನೀವು ಅವರನ್ನು ಕೇಳುತ್ತೇನೆ, ಇವರನ್ನು ಕೇಳುತ್ತೇನೆ ಎಂದರೆ ಹೇಗೆ. ಇದರ ಬಗ್ಗೆ ನೀವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ನಿರ್ಣಯ ತೆಗೆದುಕೊಂಡು ಅದನ್ನು ಇಲ್ಲಿ ಹೇಳಬೇಕು. ಅದನ್ನು ಬಿಟ್ಟು ನೀವು, ನಾನು ಯೋಚನೆ ಮಾಡುತ್ತೇನೆ ಎಂದು ಹೇಳುತ್ತಿದ್ದರೆ, ಅಲ್ಲಿ ನಾವು ಜನರಿಗೆ ಅದನ್ನೇ ಹೇಳುವುದಕ್ಕಾಗುತ್ತದೆಯೇ? ಸರ್ಕಾರ ಯೋಚನೆ ಮಾಡುತ್ತದೆ, ಅಲ್ಲಿಯವರೆಗೆ ನೀವು ಸಮಾಧಾನದಿಂದ ಇರಿ ಎಂದು ಹೇಳುವುದಕ್ಕಾಗುತ್ತದೆಯೇ?

ನಾವು ಹಾಗೆ ಹೇಳಿದರೆ, ನೀವೇಕೆ ಇದ್ದೀರಿ, ನಾವು ನಿಮ್ಮನ್ನು ಏಕೆ ಆರಿಸಿ ಕಳುಹಿಸಿದ್ದೇವೆ ಎಂದು ಕೇಳುತ್ತಾರೆ. ಅದಕ್ಕಾಗಿ ದಯವಿಟ್ಟು ಸ್ಪಷ್ಟವಾದಂಥ ಉತ್ತರ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, PD account ಗಳು ಏನು ಎನ್ನುವುದು ಗೊತ್ತಿದೆ. ಜಿಲ್ಲಾಧಿಕಾರಿಗಳ ಹತ್ತಿರ ಹಣವಿರುತ್ತದೆ, ಅವರು ಹೇಳಿದಂತೆ utilization certificate ಬಂದಿಲ್ಲ, ಆ ಕಾರಣಕ್ಕಾಗಿಯೇ ಅದನ್ನು ತೆಗೆದಿಟ್ಟಿದ್ದೇವಂತಲ್ಲ. what is the meaning of committed payment? ಕೆಲಸ ಮಾಡಿದ್ದರೆ utilization certificate ಬಂದಾಗ ಕೊಡಬೇಕೆಂದು ಇರುವಂಥಾದ್ದು committed payment ಎಲ್ಲಾ ಕಾಲದಲ್ಲಿತ್ತು, ನಮ್ಮ ಕಾಲದಲ್ಲಿತ್ತು, ಎಲ್ಲ ಕಾಲದಲ್ಲಿತ್ತು. ನಾವು ಅವರಿಗೆ ಆದೇಶ ಕೊಟ್ಟಿರುವುದೇನೆಂದರೆ, ಅದು utilization certificate ಬಂದಾಗ ಅದು final bill settlement ಮಾಡಿ ದುಡ್ಡು ಕೊಡಬೇಕಾಗುತ್ತದೆ. ಅಲ್ಲಿಯವರೆಗೆ ಇಲ್ಲಿ ಕುಡಿಯುವ ನೀರಿಗೆ ಅಗತ್ಯವಿದೆಯೆಂದರೆ ಈ ಹಣವನ್ನು ನಿಮಗೆ ಕೊಡಿ. ಆ ಹಣವನ್ನು ಕೊಡತಕ್ಕಂಥಾದ್ದು ಇಲ್ಲದೆಯೇ ಸುಮ್ಮನೆ ಯಾರಿಗೋ ಎನ್ನುವಂಥಾದ್ದು, ಈಗ ನಿಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಆರಂಭದ ಶುಲ್ಕ ರೂ. 6,65,40,173-00 ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದು ಕಾಗದದಲ್ಲಿ ಮಾತ್ರ ಇದೆ.

ಶ್ರೀ ಎಂ.ಪಿ. ಪ್ರಕಾಶ್ :- ಎಲ್ಲರೂ ಕಾಗದದಲ್ಲಿಯೇ ತೋರಿಸುವುದು, ನೋಟೇ ಕಾಗದದಲ್ಲಿದೆಯಲ್ಲ ಸರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಹಾಗಲ್ಲ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ಈಗ ನಾನು ಹತ್ತು ಕೆಲಸವನ್ನು ಮಾಡಿಕೊಡುತ್ತೇನೆ. ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಂ.ಪಿ. ಪ್ರಕಾಶ್ :- As on 13th April. ತಮ್ಮ ಕಾಲದಲ್ಲಿ ಆದಂಥಾದ್ದು, treasury ಬಗ್ಗೆ ಮಾನ್ಯ ಸಿದ್ಧರಾಮಯ್ಯನವರಿಗೆ ಗೊತ್ತಿದೆ. 24 ತಾಸು, ನಾಳೆ ಅಂದರೆ ಇವತ್ತಿನ ಸಾಯಂಕಾಲ ಆರೂವರೆ ಗಂಟೆಗೆ ಎಲ್ಲಾ 27 ಜಿಲ್ಲೆಗಳಿಂದ treasury account balance ಇರತಕ್ಕಂಥಾದ್ದು ಇಲ್ಲಿ ಕೇಂದ್ರ control room ಗೆ ಬರುತ್ತದೆ.

ಶ್ರೀ ಸಿದ್ಧರಾಮಯ್ಯ :- ಬರಗಾಲವಿದೆಯೆನ್ನತಕ್ಕಂಥ 128 ಯಾವ್ಯಾವ ತಾಲ್ಲೂಕುಗಳಿವೆ, ಅಲ್ಲಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಅವೆಲ್ಲಾ ಖರ್ಚಾಗಿದೆ. ಈಗ D.C. ಹತ್ತಿರ ಹಣವಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ನಾನು ಇಲ್ಲಿರತಕ್ಕಂಥಾದ್ದನ್ನು ಅತ್ಯಂತ ಜವಾಬ್ದಾರಿಯಿಂದ ಹೇಳುತ್ತೇನೆ. 164 ಕೋಟಿ, ಮೊನ್ನೆ ಏಪ್ರಿಲ್ 7 ನೇ ತಾರೀಖಿನದು 171 ಕೋಟಿ ಎಂದು ಹೇಳಿದ್ದೇನೆ. ಇವತ್ತು 13 ನೇ ತಾರೀಖಿನಲ್ಲಿರತಕ್ಕಂಥಾದ್ದು ಕಂಡುಬಂದಾಗ ಎಲ್ಲ ಜಿಲ್ಲಾಧಿಕಾರಿಗಳ ಹತ್ತಿರ ಅಲ್ಲಿ ಬರೀ ಆರಂಭದ ಶುಲ್ಕ 6 ಕೋಟಿ ಅಲ್ಲ, ನಂತರ ಬಂದಿರತಕ್ಕಂಥಾದ್ದು ಸೇರಿಕೊಂಡು ಗುಲ್ಬರ್ಗಾದಲ್ಲಿದೆ.

ಶ್ರೀ ಸಿದ್ಧರಾಮಯ್ಯ :- ಇತ್ತೀಚೆಗೆ ಫೆಬ್ರುವರಿ, ಮಾರ್ಚ್ ಈ ಎರಡು ತಿಂಗಳಲ್ಲಿ additional ಆಗಿ ಏನಾದರೂ ಹಣ ಬಿಡುಗಡೆ ಮಾಡಿದ್ದೀರಾ? ಮಾಡಿದ್ದರೆ ಅದು ಯಾವುದು? ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :- ಹೌದು. ನಾವು release ಮಾಡಿದ್ದೇವೆ. ಅದನ್ನು ಹೇಳುತ್ತೇನೆ. ಈಗ 164 ಕೋಟಿ D.C.ಯವರ ಹತ್ತಿರ ಇದೆ. ತಾವು ಹೇಳಿದಂತೆ 164 ಕೋಟಿ D.C. ಯವರ ಹತ್ತಿರ review instructions ಕೇಳಿದ್ದೇವೆ. 9 ನೇ ತಾರೀಖು ಜಿಲ್ಲಾಧಿಕಾರಿಗಳ ಸಭೆಯಲ್ಲಿ 'ನೀವು ಹಣವನ್ನು immediate ಆಗಿ ಕುಡಿಯುವ ನೀರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಖರ್ಚು ಮಾಡಿ' ಎಂದು ಹೇಳಿದ್ದೇವೆ. ಇದರ ಜೊತೆಗೆ ಅವರು ಹೇಳಿದ Employment Guatrantee Scheme ಇರತಕ್ಕಂಥ ಮೊದಲಿನ 6 ಜಿಲ್ಲೆಗಳು – ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ, ಚಿತ್ರದುರ್ಗ ಇಷ್ಟು ಜಿಲ್ಲೆಗಳಲ್ಲಿ – 'ನಿಮ್ಮದು ಉದ್ಯೋಗ ದೃಢೀಕರಣ ಯೋಜನೆಯಿದೆ, ಅದರಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಬಿಟ್ಟರೆ ಬೇರೆ ಯಾವ ಜಿಲ್ಲೆಯಲ್ಲಿಯೂ ಕೂಡ ನಿರೀಕ್ಷಿತ ಪ್ರಮಾಣದಲ್ಲಿ ಖರ್ಚು ಆಗಿಲ್ಲ. ಆ ಕಾರಣಕಾಗಿಯೇ ನೀವು ಆ ಹಣವನ್ನೇ ಖರ್ಚು ಮಾಡಿ; ಎಂದು ಹೇಳಿದ್ದೇವೆ.

ಇಲ್ಲಿ ಮಾನ್ಯ ಬೋಸರಾಜುರವರು ಇದ್ದಾರೆ. ಮಾನ್ಯ ದರ್ಶನಾಪುರರವರಿದ್ದಾರೆ, ಮಾನ್ಯ ಎಂ.ವೈ. ಪಾಟೀಲರು, ಆ ಭಾಗದಿಂದ ಬಂದಿರತಕ್ಕಂಥ ಅನೇಕ ಶಾಸಕರೆಲ್ಲ ಬಂದು, 'ಇದು ಅನ್ಯಾಯ, ನಮಗೆ ಈಗಿರತಕ್ಕಂಥಾದ್ದು ನಿಮ್ಮ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಅವರ ಹೆಸರುಗಳನ್ನೆಲ್ಲ ಬರೆಯಬೇಕು, ಬ್ಯಾಂಕ್ ಖಾತೆ ತೆರೆಯಬೇಕು, ಅವರಿಗೆ cheque

ಕೊಡಬೇಕು, ಇವೆಲ್ಲವುಗಳನ್ನು ಹಾಕಿಕೊಳ್ಳುತ್ತಾ ಕುಳಿತರೆ late ಆಗುತ್ತದೆ, ನೀವು ಬೇರೆ ತಾಲ್ಲೂಕುಗಳಿಗೆ ಹೇಗೆ ಕೊಟ್ಟಿದ್ದೀರಿ ಹಾಗೆ ಕೊಡಬೇಕೆಂದು' ಹೇಳಿದರು. ಆಗ ನಾವು 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೂ ಕೂಡ–'ಇದು ಮತ್ತೆ ಭೇದಭಾವ ಆಗುತ್ತದೆ. ಎಲ್ಲ ತಾಲ್ಲೂಕುಗಳಿಗೆ ಒಂದೊಂದು ಕೋಟಿ ರೂಪಾಯಿಗಳಂತೆ ಕೊಟ್ಟಿದ್ದೀರಿ, 50 ಲಕ್ಷ ರೂಪಾಯಿಗಳನ್ನು ಕೊಟ್ಟರೆ ತಪ್ಪಾಗುತ್ತದೆಂದು' ಹೇಳಿದರು. ಅದನ್ನೂ ಮತ್ತೆ ಸರಿಪಡಿಸಿಕೊಂಡು ಉದ್ಯೋಗ ದೃಢೀಕರಣ ಯೋಜನೆ ಮೂಲಕವಲ್ಲದೆ ಮತ್ತೆ 1 ಕೋಟಿ ರೂಪಾಯಿಗಳನ್ನು ಬರ ನಿರ್ವಹಣೆಗೆ ಕೊಟ್ಟೆವು. ಅದಾದ ಮೇಲೆ ಮತ್ತೊಂದು ಕೋಟಿ ರೂಪಾಯಿಗಳ್ನು ಪುನಃ ಇತ್ತೀಚೆಗೆ ಬಿಡುಗಡೆ ಮಾಡಿದ್ದೇವೆ. ಅಂದರೆ ಪ್ರತಿ 128 ಬರ ಪೀಡಿತ ತಾಲ್ಲೂಕುಗಳಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಸನ್ಮಾನ್ಯ ಅಧ್ಯಕ್ಷರೆ, ನಿಮಗೆ ಹೇಳಬೇಕೆಂದರೆ, ಅನೇಕ ಕಡೆಗೆ ಕ್ರಿಯಾಯೋಜನೆಗಳು ಆಗಿಲ್ಲ. ನಾವು ಪ್ರತಿಸಲ review ಮಾಡಿದ್ದೇವೆ. ಕ್ರಿಯಾ ಯೋಜನೆಗಳಿಗೆ ಒಪ್ಪಿಗೆ ಕೊಡಬೇಕಾದಂಥದ್ದು ಆಗದೇ ಇದ್ದುದರಿಂದ ಕ್ರಿಯಾ ಯೋಜನೆಗಳನ್ನು ಒಂದು ವೇಳೆ ನೀವು ತರಿಸಿಕೊಂಡು ಅಲ್ಲಿರುವ ಶಾಸಕರಾಗಲಿ ಅಥವಾ ಅಧಿಕಾರಿಗಳು ಕ್ರಿಯಾ ಯೋಜನೆಯನ್ನು ಕೊಡದಿದ್ದಂಥ ಪಕ್ಷದಲ್ಲಿ ನೀವೇ ಕ್ರಿಯಾ ಯೋಜನೆಗಳನ್ನು approve ಮಾಡಿ ಆ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ತೀರ್ಮಾನ ಮಾಡಿಕೊಟ್ಟಿದ್ದೇವೆ. ಇಷ್ಟು ಸರ್ವೆ ಆದ ಮೇಲೆ, 1500 ರೂಪಾಯಿಗಳಿಗೆ ಒಂದು ಟನ್‌ನಂತೆ ಮೇವನ್ನು ಖರೀದಿ ಮಾಡಲಿಕ್ಕೆ ಆದೇಶ ಕೊಟ್ಟು ಇಲ್ಲಿಯವರೆಗೆ ಆಗಿದೆ. ಆಗ ಪಾಪ ಸಕ್ಕರೆ ಸಚಿವರಾದ ಮಾನ್ಯ ರವೀಂದ್ರನಾಥರವರು ಎಂಥ ವಾಸ್ತವ ಪರಿಸ್ಥಿತಿ, ದುರಂತ ಇದೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಟ್ಟರು. ನಾವು 900 ರೂಪಾಯಿಗಳು, 1,000 ರೂಪಾಯಿಗಳನ್ನು ಕಬ್ಬು ಟನ್ ಒಂದಕ್ಕೆ ಕೊಡುತ್ತಿದ್ದೇವೆ. ಅಲ್ಲಿ 1500 ರೂಪಾಯಿಗಳನ್ನು ಒಂದು ಟನ್ ಮೇವಿಗೆ ಕೊಡುತ್ತಿದ್ದೇವಲ್ಲಾ, ಎಂಥ ದುರ್ದಶೆ ಈ ದೇಶದ್ದು ಎಂದು ಹೇಳಿದರು.

ಇನ್ನು ಕಬ್ಬು ತಿನ್ನುವುದಕ್ಕೆ ಬರುವುದಿಲ್ಲ, ದನಗಳು ಕಬ್ಬು ತಿನ್ನುವುದಿಲ್ಲ, ಸೂಲಂಗಿ ಮಾತ್ರ ತಿನ್ನುತ್ತೇವೆ, ಏನು ಮಾಡುವುದು, ಅದು ಅನಿವಾರ್ಯವೆಂದು ಹೇಳಿದರು. 1500 ರೂಪಾಯಿಗಳಿಗೆ ಒಂದು ಟನ್ ಮೇವು ಖರೀದಿ ಮಾಡುವುದಕ್ಕೆ

ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಅಂತರರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧ ಮಾಡಿ ಎಂದು ಹೇಳಿದ್ದೇವೆ. ಅಂತರರಾಜ್ಯ ಮೇವು ಸಾಗಾಣಿಕೆ ನಿರ್ಬಂಧವಾಗಿದೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದಂತೆ ಎಲ್ಲೆಲ್ಲಿ ಗೋಶಾಲೆಗಳ ಅಗತ್ಯವಿದೆಯೋ ಅಲ್ಲಿ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ನೀವು ಹೇಳಿದಂತೆ ವಿಳಂಬವಾಗಿರಬಹುದು, ಆಲಸ್ಯವಾಗಿರಬಹುದು, ಇವತ್ತು ತಾವು ಎಚ್ಚರಿಕೆ ಘಂಟೆಯನ್ನು ಬಾರಿಸಿದ್ದೀರಿ. ನೀವೆಲ್ಲ ಮಾತನಾಡಿರತಕ್ಕಂಥಾದ್ದರಿಂದ, ನಾವು ಸಮರ್ಥವಾಗಿ ನಿರ್ವಹಿಸಿದ್ದೇವೆಂದು ಎದೆಗಾರಿಕೆಯಿಂದ ಮುಟ್ಟಿ ಹೇಳತಕ್ಕಂಥ ರೀತಿಯಲ್ಲಿ ನಾವಿಲ್ಲ.

ಯಾವುದೇ ಸರ್ಕಾರ ಕೆಲಸ ಮಾಡಿದಾಗ ಅಧಿಕಾರಿಗಳ ಮೂಲ ಅನುಷ್ಠಾನಕ್ಕೆ ತರತಕ್ಕಂಥ ಸಂದರ್ಭಗಳಲ್ಲಿ ಅಲ್ಲಿ ಓರೆ ಕೋರೆಗಳಾಗುತ್ತವೆ, ತಪ್ಪಾಗುತ್ತದೆ, ಭ್ರಷ್ಟಾಚಾರವಾಗುತ್ತದೆ, ವಿಳಂಬ ಸಹ ಆಗುತ್ತದೆ. ಈ ಎಲ್ಲ ಕಾರಣಕ್ಕಾಗಿ ಎಲ್ಲ ಸರ್ಕಾರದಲ್ಲಿಯೂ ಬಹಳ ಚೆನ್ನಾಗಿ ಹಾಲು ಜೇನು ಎಲ್ಲ ಹರಿಸಿಟ್ಟಿದ್ದೇವೆನ್ನತಕ್ಕಂಥಾದ್ದಲ್ಲ. ಆದ್ದರಿಂದ ಈಗಲೂ ಕೂಡ ನಾವು ಅದನ್ನು ಒಪ್ಪಿಕೊಳ್ಳಲು ತಯಾರಿದ್ದೇವೆ. ಆದರೆ, ತಾವು ಇವತ್ತು ಮಾತನಾಡಿ ಈ ಚರ್ಚೆಯನ್ನು ವಿರೋಧ ಪಕ್ಷದ ನಾಯಕರು ಮಾಡಿರುವುದು ನಮಗೆ ಎಚ್ಚರಿಕೆಯ ಘಂಟೆಯಾಗಿದೆ. ಇನ್ನು ಮೇಲೆ ಈ ಅಧಿವೇಶನ ಮುಗಿದ ತಕ್ಷಣ ಅವರು, ನಾವು ಎಲ್ಲೆಲ್ಲಿ ಸಾಧ್ಯವೋ ಜಿಲ್ಲಾ ಮಂತ್ರಿಗಳು ಆಗಿರತಕ್ಕಂಥವರು ಪ್ರತಿ ತಾಲ್ಲೂಕಿಗೆ ಹೋಗುವ ಕಾರ್ಯಕ್ರಮವನ್ನು ಮಾಡುತ್ತೇವೆ. ನೀವೆಲ್ಲರೂ ಮೆಚ್ಚುವ ರೀತಿಯಲ್ಲಿ ಹಣ ಬಿಡುಗಡೆ ಮಾಡುತ್ತೇವೆ. ಒಂದು ವೇಳೆ ನಮ್ಮಲ್ಲಿ ಹಣವಿಲ್ಲದಿದ್ದರೆ ಬೇರೆ, ಅಂದರೆ ನೀವು ಆವಾಗ ಏನು ಹೇಳುತ್ತಿದ್ದಿರಿ, non plan ಆ ವಿಚಾರಗಳಿಗೆ ಸಂಬಂಧಪಟ್ಟ ಹಣವೇನಿರುತ್ತದೆ, ಆ ಹಣವನ್ನು ಕೊಡತಕ್ಕಂಥದ್ದನ್ನು ಸ್ಥಗಿತಗೊಳಿಸಿ ಇದಕ್ಕೆ ಹಣವನ್ನು ಕೊಡುತ್ತೇವೆ.

ಕೇಂದ್ರ ಸರ್ಕಾರ ನಮ್ಮ ಸಹಾಯಕ್ಕೆ ಬರಲಿ ಅಥವಾ ಬರದಿರಲಿ, ಇಲ್ಲಿಯವರೆಗೆ ಬಂದ ಹಣವನ್ನು ಖರ್ಚು ಮಾಡಿದ್ದೇವೆ. ನಿಮ್ಮ ಪ್ರಭಾವವಿತ್ತು. ಮಾನ್ಯ ಶರದ್‌ಪವಾರ್‌ರವರು ಆವತ್ತಿನ ದಿವಸ ಬಂದರು. ಪ್ರವಾಹ ಆವತ್ತು ದೊಡ್ಡ ಪ್ರಮಾಣದಲ್ಲಿತ್ತು. ಇವತ್ತು ಆ ಪ್ರವಾಹವಿಲ್ಲ. ಇಲ್ಲಿ ಬರಗಾಲಕ್ಕಾದರೂ ಬರಲಿ ಎಂದು. NCCF ನೊಳಗೆ ಇಲ್ಲಿ ಕೊಡತಕ್ಕಂಥಾದ್ದು ಏನೂ ಇಲ್ಲ. ತಾವು ಪ್ರಸ್ತಾಪ ಮಾಡಿರತಕ್ಕಂಥಾದ್ದು ಜನಸಾಮಾನ್ಯರ ಪ್ರಶ್ನೆಯಾಗಿದೆ. ಆ ಕಾರಣಕ್ಕಾಗಿಯೇ ನಾವು

ಖಂಡಿತವಾಗಿ ನಿಮ್ಮ ನಿರೀಕ್ಷೆಗೆ ಅನುಗುಣವಾದಂಥ ರೀತಿಯಲ್ಲಿ, ನಿಮ್ಮ ನಿರೀಕ್ಷೆ ಸುಳ್ಳಾಗಂಥ ರೀತಿಯಲ್ಲಿ ನಾವು ಸರ್ಕಾರದಲ್ಲಿ ಹಣವನ್ನು ಎಲ್ಲ ಎಂ.ಎಲ್.ಎ ಗಳಿಗೆ ಬಿಟ್ಟುಕೊಡುತ್ತೇವೆ. ಈ ಸದನದ ಮೂಲಕವಾಗಿ ಎಲ್ಲ ಶಾಸಕ ಮಿತ್ರರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಕ್ರಿಯಾ ಯೋಜನೆಗಳನ್ನು ಕಾಲ ಕಾಲಕ್ಕೆ ಸಭೆಗಳನ್ನು ಕರೆಯಬೇಕು. ಅನೇಕ ಸಂದರ್ಭಗಳಲ್ಲಿ ಸಭೆ ಆಗದಿರುವುದು ಇರುತ್ತದೆ. ಆ ಕಾರಣಕ್ಕಾಗಿಯೇ ಕಾಲ ಕಾಲಕ್ಕೆ ಕರೆದು ಒಪ್ಪಿಗೆ ಕೊಡುವುದಾಗಬೇಕು..... ಟಾಸ್ಕ್‌ಫೋರ್ಸ್ ಅನ್ನು ಸೋಮವಾರದ ದಿವಸ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ವಿನಾಯಿತಿ ಕೊಡಬೇಕಾದರೆ ಸಾಲಮಿತಿ ಬೇಕಲ್ಲವೇ?

(ಗೊಂದಲ)

ಶ್ರೀ ಡಿ.ಆರ್. ಪಾಟೀಲ್ :- ಮಾನ್ಯ ಕಾನೂನು ಸಚಿವರೆ, ಉದ್ಯೋಗದ ಬಗ್ಗೆ ಏನೂ ಹೇಳಲಿಲ್ಲ. ನೀವು ಗುದ್ದಲಿ ಹಿಡಿದುಕೊಂಡು ಬಂದವರಿಗೆ ವಾರದಲ್ಲಿ ಎಷ್ಟು ದಿವಸ ಉದ್ಯೋಗ ಕೊಡುತ್ತೀರಿ? ಅದನ್ನೊಂದು difinite commit ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ :- ಉದ್ಯೋಗ ದೃಢೀಕರಣ ಯೋಜನೆಯಲ್ಲಿ ತಮಗೆಲ್ಲ ಗೊತ್ತಿದ್ದಂತೆ, 5.ಕಿಮೀ. ವ್ಯಾಪ್ತಿಯಲ್ಲಿ 3 ದಿವಸಗಳ ಕಾಲ ಜಿಲ್ಲೆಗಳಲ್ಲಿ ಕೆಲಸ ಕೊಡಬೇಕೆಂದಿದೆ. ಈಗ 10 ಜಿಲ್ಲೆಗಳಿಗೆ ಈ ಯೋಜನೆ ಬಂದಿದೆ. ಆ 10 ಜಿಲ್ಲೆಗಳಲ್ಲಿ ಬಂದಾಗಲೂ ಕೂಡ ಮಾನ್ಯ ಕೃಷ್ಣ ಬೈರೇಗೌಡರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟರು. ಬಳ್ಳಾರಿ ಒಂದನ್ನು ಬಿಟ್ಟರೆ ಎಲ್ಲ ಮಲೆನಾಡಿನ ಜಿಲ್ಲೆಗಳನ್ನು ಸೇರಿಸಿಕೊಂಡಿದ್ದೀರಿ, ಇವತ್ತು ಕೊಪ್ಪಳ, ಗದಗ ಮುಂತಾದ ಪ್ರದೇಶಗಳನ್ನು ಕೈಬಿಟ್ಟಿದ್ದೀರಿ, ನಿಮ್ಮ ಮಾನದಂಡವೇನು? ಎಂದು ಕೇಳಿದರೆ, ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿರುವ ಜಿಲ್ಲೆಗಳಿಗೆ ನಾವು ಮಾನದಂಡ ಮಾಡಿದ್ದೇವೆಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಕೃಷ್ಣಭೈರೇಗೌಡರು ಹೇಳಿದರು, ಇನ್ನು ಮೇಲಿಂದ ನಮ್ಮ ಊರಿಗೆ ಹೋಗಿ ಹೆಚ್ಚು ಜನ ನೀವು ಆತ್ಮಹತ್ಯೆ ಮಾಡಿಕೊಳ್ಳಿರಪ್ಪ, ಆಗ ನಮಗೆ ಉದ್ಯೋಗ ದೃಢೀಕರಣ ಯೋಜನೆ ಬರುತ್ತದೆ ಎಂದು ಹೇಳಬೇಕಾದಂಥ ಪರಿಸ್ಥಿತಿ ಬಂತಲ್ಲಾ ಎಂದು ಅವರು ಹೇಳಿದರು. ಅದೇನಾದರೂ ಇದ್ದುಕೊಳ್ಳಲಿ, ಈಗ ನಾವು Employment Guarantee Scheme ರೀತಿಯಲ್ಲಿಯೇ ಉದ್ಯೋಗ ದೃಢೀಕರಣ ಯೋಜನೆಗೆ ಬೇಕಾಗಿರತಕ್ಕಂಥ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :- ವಾರದಲ್ಲಿ ಎಷ್ಟು ದಿವಸ ಉದ್ಯೋಗವನ್ನು ಕೊಡುತ್ತೀರೆನ್ನುವುದನ್ನು ಹೇಳಿಬಿಡಿ ಅಷ್ಟೆ.

ಶ್ರೀ ಎಂ.ಪಿ. ಪ್ರಕಾಶ್ :- It is need based. ಉದ್ಯೋಗ ದೃಢೀಕರಣ ಯೋಜನೆಯಲ್ಲಿ 100 ದಿವಸ ಎನ್ನತಕ್ಕಂಥಾದ್ದು ಇದೆ. (ಗೊಂದಲ) ನಾನು ಹೇಳುತ್ತಿರುವುದು, any famine relief works are need based.

ಶ್ರೀ ಸಿದ್ಧರಾಮಯ್ಯ :- ಬರ ಪೀಡಿತ 128 ತಾಲ್ಲೂಕುಗಳು ಆ 6 ಜಿಲ್ಲೆಗಳಲ್ಲಿಯೇ ಬರುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ :- ಈಗ 128 ತಾಲ್ಲೂಕುಗಳಲ್ಲಿ ಅಗತ್ಯಕ್ಕೆ ಬಂದಂತೆ ಯಾರ್‍ಯಾರು ಕೇಳುತ್ತಾರೆ, (ಗೊಂದಲ) ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಸಿದ್ಧರಾಮಯ್ಯ :- ಬೇರೆ ಕಡೆ ಏನು ಮಾಡುತ್ತಿರೆನ್ನುವುದನ್ನು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :- ಇಷ್ಟೇ ಎಂದು ನಿರ್ದಿಷ್ಟವಾದ ದಿನಾಂಕವನ್ನು ಹೇಳುವುದಿಲ್ಲ. ಆದರೆ, ಅಲ್ಲಿರತಕ್ಕಂಥವರು ನಾವು ಕೆಲಸ ಮಾಡುತ್ತೇವೆಂದು ಮುಂದೆ ಬಂದರೆ ಕೆಲಸವನ್ನು ಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಕಾನೂನು ಸಚಿವರೇ ತಾವು ಏನು ಹೇಳಿದಿರೆಂದರೆ ಕುಡಿಯುವ ನೀರಿನ ಸಲುವಾಗಿ 50 ಕೋಟಿ ರೂಪಾಯಿಗಳ ಬಿಡುಗಡೆಗೆ ಸೋಮವಾರ order ಮಾಡುತ್ತೇವೆಂದು ಹೇಳಿದಿರಿ. All right. ಈ ಉದ್ಯೋಗ ಕೊಡಬೇಕಲ್ಲವೇ? ಒಂದು ತಾಲ್ಲೂಕಿಗೆ 2 ಕೋಟಿ ರೂಪಾಯಿಗಳಂತೆ 128 ತಾಲ್ಲೂಕುಗಳಿಗೆ ಕೊಟ್ಟಿರಬಹುದು. ಅದಕ್ಕೆ ಈಗಾಗಲೇ ಕ್ರಿಯಾ ಯೋಜನೆಗಳನ್ನು ಮಾಡಿ ಕೆಲಸಗಳೆಲ್ಲ ಮುಗಿದುಹೋಗಿ ಹಣ ಕೂಡ ಮುಗಿದಿದೆ.

(8 : 00 pm)

ಆ 2 ಕೋಟಿ ರೂಪಾಯಿಗಳಲ್ಲದೆ, ಇನ್ನೇನೂ D.C. ಹತ್ತಿರ ಹಣ ಉಳಿದಿಲ್ಲ. ಎಲ್ಲ ಹಣ ಖರ್ಚಾಗಿದೆ. ಒಂದು ವೇಳೆ, ನಿಮ್ಮ D.C. ಗಳ ಹತ್ತಿರ ಹಣ ಉಳಿದಿದೆ ಎಂದರೆ, ಆ ಹಣವನ್ನು ಆ 2 ಕೋಟಿ ರೂಪಾಯಿಗಳ ಕೆಲಸವಿದೆಯಲ್ಲ, ಅದಕ್ಕೆ ಕೊಡಬೇಕಾಗಿರುವ ಹಣ ಉಳಿದಿದೆ. ಆ committed work ಮಾತ್ರ

ಉಳಿದುಕೊಂಡಿದೆಯೇ ಹೊರತು ಅವರ ಹತ್ತಿರ additional ಆಗಿ ಹಣ ಇಲ್ಲ. ಮುಂದೆ ಅವರು ಕೆಲಸ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :– ಅದರ ಜೊತೆಗೆ, ಹಿಂದೆ ಮಾಡಿದಂಥ ಕೆಲಸಗಳಿಗೆ ಗುಲಬರ್ಗಾ ಜಿಲ್ಲೆಗೆ 6 ಕೋಟಿ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಸಿದ್ಧರಾಮಯ್ಯ :– ಗುಲಬರ್ಗಾ ಒಂದೇ ಅಲ್ಲ, ಮೈಸೂರು ಜಿಲ್ಲೆಯಲ್ಲಿ ಕೊಟ್ಟಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಹಾಸನ ಜಿಲ್ಲೆಗೆ 3 ಅಥವಾ 4 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ಧರಾಮಯ್ಯ :– I do not know whether you have got my point or not.

ಶ್ರೀ ಕೆ.ಆರ್. ರಮೇಶ್ ಕುಮಾರ್ :– No, No, He gets the point. That is his style of replying.

ಶ್ರೀ ಸಿದ್ಧರಾಮಯ್ಯ :– ನಮಗೇನಾದರೂ ದಾರಿ ತಪ್ಪಿಸುತ್ತಿದ್ದಾರೆಯೇ? ಆ ತರಹ ಏನಿಲ್ಲವೇ? ಏಕೆಂದರೆ, ಅವರು ಹೇಳುವುದು ಆ ತರಹ.

ಶ್ರೀ ಎಂ.ಪಿ. ಪ್ರಕಾಶ್ :– Regular Budget allocations ಇದೆ. ಕೆಲಸ ಮಾಡುತ್ತೇವಲ್ಲ.

ಶ್ರೀ ಸಿದ್ಧರಾಮಯ್ಯ :– No, my point is, admittedly, 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆ 2 ಕೋಟಿ ರೂಪಾಯಿಗಳಲ್ಲಿ ಈಗಾಗಲೇ Soil conservation ನವರಿಗೆಷ್ಟು, ಮೇವಿಗೆಷ್ಟು ಕೊಡಬೇಕೆಂದು, ಕುಡಿಯುವ ನೀರಿಗೆಷ್ಟು ಇದೆಲ್ಲ mark ಮಾಡಿ ಹಂಚಿರುವುದರಿಂದ ಹಣವೆಲ್ಲ ಮುಗಿದು ಹೋಗಿದೆ. ಕ್ರಿಯಾ ಯೋಜನೆಗಾಗಿ 2 ಕೋಟಿ ರೂಪಾಯಿಗಳ ಕೆಲಸವೇನಿತ್ತಲ್ಲ, ಅದಕ್ಕೆ ಕೊಡಬೇಕಾಗಿರುವ ಹಣ ಉಳಿದುಕೊಂಡಿದೆಯೇ ಹೊರತು, D.C.ಗಳ ಹತ್ತಿರವೇನಾದರೂ ಹಣ ಉಳಿದಿದ್ದರೆ, ಆ 2 ಕೋಟಿ ರೂಪಾಯಿ ಬಿಟ್ಟರೆ, additional ಆಗಿ ಬೇರೆ ಹಣ ಅವರ ಹತ್ತಿರವಿಲ್ಲ. Apart from 2 crores, ಬೇರೆ ಹಣ ಬಿಡುಗಡೆ ಮಾಡಿದ್ದೀರಾ, ಇಲ್ಲ, ಬಿಡುಗಡೆ ಮಾಡಿಲ್ಲ. ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜನರು ಕೆಲಸ

ಮಾಡಿಸಬೇಕಾದರೆ, ಆ ಆರು ಜಿಲ್ಲೆಗಳಲ್ಲಿ Employment Guarantee Scheme ಆಗುತ್ತಿದೆ, ಅಲ್ಲಿ ಆಗುತ್ತದೆ. ಅದಲ್ಲದೇ, ಅಲ್ಲಿ ಕೆಲಸ ಬೇಕಾದವರು ಬೇರೆ ಜನರಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :– ಅಲ್ಲಿಯೂ ಕೂಡ ಉದ್ಯೋಗ ದೃಢೀಕರಣ ಯೋಜನೆಯಡಿಯಲ್ಲಿ ಫೆಬ್ರುವರಿ, ಮಾರ್ಚ್, ಏಪ್ರಿಲ್ ಈ ಮೂರು ತಿಂಗಳಲ್ಲಿ ಮಾತ್ರ ಮಾಡುವುದು. ಈಗ ಅವರು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಸಿದ್ಧರಾಮಯ್ಯ :– ಈಗ ಅಲ್ಲಿಯೂ ಹಣ ಖರ್ಚಾಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಅಲ್ಲಿ ಖರ್ಚಾಗಲಿಲ್ಲ.

ಶ್ರೀ ಸಿದ್ಧರಾಮಯ್ಯ :– ಅಲ್ಲಿಯೂ ಕೆಲಸ ಬೇಕಾದವರಿಗೆ ಕೆಲಸ ಕೊಡಲಿಲ್ಲ. ಇದೊಂದು ಭಾಗ. ಬೇರೆ ಜನರಿಗೆ ಕೆಲಸ ಬೇಕಲ್ಲವೇ? ಜನರೆಲ್ಲ ಗುಳೆ ಹೋಗುತ್ತಿದ್ದಾರಲ್ಲ. ಅವರನ್ನು ತಡೆಗಟ್ಟಬೇಕಲ್ಲವೇ? ಅದಕ್ಕೆಷ್ಟು ಹಣ ಬಿಡುಗಡೆ ಮಾಡುತ್ತೀರಿ? ಮಾನ್ಯ ಖರ್ಗೆಯವರೇನು ಹೇಳಿದರೆಂದರೆ, ಅದಕ್ಕೆ 200 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿ, ಮೇವಿಗೆ 2 ಕೋಟಿ 85 ಲಕ್ಷ ರೂಪಾಯಿ ಎಂದರೆ, ನೀವು ಮೇವಿಗೆ ಇನ್ಯಾವ ಹಣ ಬಿಡುಗಡೆ ಮಾಡಿದ್ದೀರಿ? ಮೇವು ಬ್ಯಾಂಕ್ ಅನ್ನು ಎಲ್ಲಿ creat ಮಾಡಿದ್ದೀರಿ? ಮೇವನ್ನು ಯಾವ ಊರಿನಿಂದ ತೆಗೆದುಕೊಂಡು ಬಂದಿದ್ದೀರಿ? ಮೇವನ್ನು ಎಲ್ಲಿ ಬೆಳೆದಿದ್ದೀರಿ? ಈ ರಾಜ್ಯಕ್ಕೆ ಮೇವು ಎಷ್ಟು ಬೇಕೆಂದು ನೀವು ಅಂದಾಜು ಮಾಡಿದ್ದೀರಾ? ಮೇವು ಎಷ್ಟು ಬೇಕೆಂದು ಜಿಲ್ಲಾಧಿಕಾರಿಗಳು ಪಟ್ಟಿ ಕೊಟ್ಟಿದ್ದಾರೆಯೇ? 2 ಕೋಟಿ 85 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಬಿಡುಗಡೆ ಮಾಡಿದ್ದೀರಾ? ಅದಕ್ಕಿಂತ ಎಷ್ಟು ಹೆಚ್ಚು ಹಣ ಬಿಡುಗಡೆ ಮಾಡಿದ್ದೀರಿ ಹೇಳಿ ನೋಡೋಣ? ನಿಮ್ಮ ಅಂಕಿ–ಅಂಶಗಳ ಪ್ರಕಾರ, 2 ಕೋಟಿ 85 ಲಕ್ಷ ರೂಪಾಯಿಗಳನ್ನು ಮೇವಿಗೆ ಕೊಟ್ಟಿದೇವೆಂದು ಹೇಳಿದ್ದೀರಿ. ಅದಲ್ಲದೇ additional ಆಗಿ ಯಾವಾಗ ಕೊಟ್ಟಿದ್ದೀರಿ? ಎಷ್ಟು ಮೇವು ಬ್ಯಾಂಕ್‌ಗಳನ್ನು ತೆರೆದಿದ್ದೀರಿ? ಏನೂ ಮಾಡಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಸಿದ್ಧರಾಮಯ್ಯನವರು ಮತ್ತು ಹಿರಿಯರೆಲ್ಲರಿಗೂ ಗೊತ್ತಿದೆ. ಮೇವಿನ ಬ್ಯಾಂಕ್‌ಗಳನ್ನು ತೆರೆಯಬೇಕೆಂದು ಇವತ್ತೇ ಮಾತನಾಡುತ್ತಿಲ್ಲ. ಇದರ ಬಗ್ಗೆ 10–20 ವರ್ಷಗಳಿಂದಲೂ ಮಾತನಾಡುತ್ತಿದ್ದೇವೆ. ಆದರೆ, ಕೆಲವು ಕಡೆ ಆಗಿದೆ, ಕೆಲವು ಕಡೆ ಆಗಿಲ್ಲ.

ಶ್ರೀ ಸಿದ್ಧರಾಮಯ್ಯ :- ಬರಗಾಲ continuous ಆಗಿ ಕಳೆದ ವರ್ಷ ಮತ್ತು ಈ ವರ್ಷ ಇದೆಯಲ್ಲ. ಈ ವರ್ಷ ಹೊಸದೇನಲ್ಲ. ಕಳೆದ ವರ್ಷ ಬರಗಾಲವಿರುವಾಗ ಮುಂದಿನ ವರ್ಷವೇ ಬರಗಾಲ ಬಂದಿದೆ. ಈ ವರ್ಷ ಬರಗಾಲ ಬಂದಿದೆ ಎಂದು ಏನೂ ಸಿದ್ಧತೆ ಮಾಡಿಕೊಳ್ಳಲಾಗಲಿಲ್ಲವೆಂದು ಹೇಳಬಹುದು. ಕಳೆದ ವರ್ಷ ಮತ್ತು ಈ ವರ್ಷವೂ ಬರಗಾಲ ಬಂದಿದೆ. ನೀವೇನು ಸಿದ್ಧತೆಯನ್ನು ಮಾಡಿಕೊಂಡಿದ್ದೀರಿ?

ಶ್ರೀ ಕೆ. ಶ್ರೀನಿವಾಸಗೌಡ :- ನಮ್ಮಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಿಮ್ಮಿಂದ ಎರಡನೇ phase ನಲ್ಲಿ ಬಿಜಾಪುರ, ಕೊಪ್ಪಳ, ಹಾವೇರಿ, ಗದಗ, ಬಳ್ಳಾರಿ, ಕೋಲಾರ, ತುಮಕೂರು, ಚಾಮರಾಜನಗರ ಇದೆ. ಆದರೆ, ಕೇಂದ್ರಸರ್ಕಾರಕ್ಕೆ ನೀವು ಪತ್ರ ಬರೆದಿದ್ದೀರಿ. ಅಲ್ಲಿಂದ ಏನು ಬಂದಿದೆ ಎಂದರೆ, ಬಳ್ಳಾರಿ, ಬೆಳಗಾಂ, ಚಿಕ್ಕಮಗಳೂರು, ಹಾಸನ ಶಿವಮೊಗ್ಗ, ಕೊಡಗು. ಇದರ ಒಳಗುಟ್ಟೇನು? ಬಳ್ಳಾರಿ ಜಿಲ್ಲೆ ಬಿಟ್ಟರೆ, ಬೇರೆ ಜಿಲ್ಲೆಗಳು ಕೇವಲ ಬಿಜೆಪಿ ಜೆಡಿ(ಎಸ್) ಶಾಸಕರಿರುವಂಥ ಜಿಲ್ಲೆಗಳಾಗಿವೆ. ಅಂದರೆ, ಈ ಜಿಲ್ಲೆಗಳನ್ನು ಆರಿಸುವುದಕ್ಕೆ ನೀವೇನು ತಂತ್ರ ಮಾಡಿದ್ದೀರಿ? ನಿಮಗೆ ಕೋಲಾರ ಜಿಲ್ಲೆ ಕಾಣಿಸಲಿಲ್ಲವೇ? ಬಿಜಾಪುರ ಜಿಲ್ಲೆ ಕಾಣಿಸಲಿಲ್ಲವೆ? ಕೊಪ್ಪಳ, ಹಾವೇರಿ, ಗದಗ ಜಿಲ್ಲೆಗಳು ಕಾಣಿಸಲಿಲ್ಲವೇ? ಇದರಲ್ಲಿಯೂ ಕೂಡ ರಾಜಕಾರಣ ಮಾಡಬೇಕೆ? ನೀವು ಮಾಡಿದ್ದೀರಿ. ಆಯಾ ಜಿಲ್ಲಾ ಎಂ.ಪಿ. ಗಳಿಗೆ ಪತ್ರ ಬರೆದು, ಈ ತರಹ ಉದ್ಯೋಗ ಖಾತರಿ ಯೋಜನೆ ಇದೆ, ನಿಮ್ಮ ಜಿಲ್ಲೆಯನ್ನು ನಾವು ಆಯ್ಕೆ ಮಾಡಿ ಕಳುಹಿಸಿದ್ದೇವೆ, ಕೇಂದ್ರ ಸರ್ಕಾರದಲ್ಲಿ ನೋಡಿ ಎಂದು ಹೇಳಬಹುದಾಗಿತ್ತು. ನೀವು ಹಾಸನ ಜಿಲ್ಲೆಯನ್ನು ಆಯ್ಕೆ ಮಾಡಬಹುದು! ನೀವು ಶಿವಮೊಗ್ಗ ಜಿಲ್ಲೆಯನ್ನು ಆಯ್ಕೆ ಮಾಡಬಹುದು. (ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ :- ಕೊಡಗು ಜಿಲ್ಲೆಯಲ್ಲಿ ಆತ್ಮಹತ್ಯೆಯಾಗಿದೆ. ಅದಕ್ಕೆ ಮಾಡಿದ್ದಾರೆ. (ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :- ಅದಕ್ಕೆ ನನ್ನ ವಿರೋಧವಿಲ್ಲ. (ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :- ಇದನ್ನು ಕೇಂದ್ರ ಸರ್ಕಾರ ಮಾಡಿದ್ದು.

ಶ್ರೀ ಕೆ. ಶ್ರೀನಿವಾಸಗೌಡ :- ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಅವರು ಸ್ವತಃ ಮಾಡುತ್ತಾರೆಯೇ? (ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ :- ಆತ್ಮಹತ್ಯೆ ಎಲ್ಲಿ ಆಗಿದೆ, ಯಾವ್ಯಾವ ಜಿಲ್ಲೆಗಳಲ್ಲಿ ಜಾಸ್ತಿಯಾಗಿದೆಯೋ, ಅದರ ಆಧಾರದಲ್ಲಿ ಕೊಟ್ಟಿದ್ದಾರೆ. (ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ :- ಇವರೇ ಹೋಗಿ ಇದನ್ನು change ಮಾಡಿದ್ದಾರೆ. ಇದೇನು ಅನ್ಯಾಯ? ಯಾವ ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿ ಬಾಧೆಗೊಳಗಾಗುತ್ತಿವೆ, ಅದರ ಬಗ್ಗೆ ನಿಮಗೆ care ಇಲ್ಲ, ನಿಮ್ಮ ನಿಮ್ಮ ರಾಜಕೀಯಗೋಸ್ಕರ ಈ ರೀತಿ ಮಾಡುತ್ತಿದ್ದೀರಿ. ಇದೇನು ಅನ್ಯಾಯ?

ಶ್ರೀ ಎಂ.ಪಿ. ಪ್ರಕಾಶ್ :- ಆಗಿಂದಾಗ್ಗೆ ಬದಲಾವಣೆಯಾದಾಗ, ಇಂಥ ಒತ್ತಡಗಳಿಂದ, ರಾಜಕೀಯ ಪ್ರಭಾವದಿಂದಾಗಿದೆ ಎಂದು ಹೇಳುತ್ತಾರೆ. ಅದು ತಪ್ಪಾದಂಥ ಮಾನದಂಡ. ಅದಕ್ಕೆ ನಾವು ಪ್ರಾಯಶ್ಚಿತ್ತ ಮಾಡಲೇಬೇಕಾಗುತ್ತದೆ. ಒಂದು ವೇಳೆ, ನೀವು ಹೇಳಿದಂತೆ ಕೇಂದ್ರ ಸರ್ಕಾರದ ಮೇಲೆ ಯಾರೋ ಪ್ರಭಾವ ತಂದರೆಂದು ವಾದಕ್ಕಾಗಿ ಇಟ್ಟುಕೊಳ್ಳೋಣ. ಪ್ರಭಾವ ತಂದರೆಂದರೂ ಕೂಡ ಯಾವ ಮಾನ ದಂಡವನ್ನಿಟ್ಟುಕೊಂಡು ಅವರು ಬದಲಾವಣೆ ಮಾಡಿದರು? ಅವರು ಮಾಡಬಾರದಾಗಿತ್ತು.

ಶ್ರೀ ಕೆ. ಶ್ರೀನಿವಾಸಗೌಡ :- ನಾನು ಮಾತನಾಡುವಾಗ ನೀವೇಕೆ ಮಧ್ಯದಲ್ಲಿ ಮಾತನಾಡುತ್ತೀರಿ? ಸಂಬಂಧಪಟ್ಟ ಎಂ.ಪಿ.ಗಳಿಗೆ ಹೇಳಿದ್ದರೆ, ನಮ್ಮ ರಾಜ್ಯದಿಂದ ಈ ತರಹ recommendation ಹೋಗಿದೆ, ಇದನ್ನು ನೀವು ನೋಡಿ ಎಂದು ಅದರ ಒಂದು ಕಾಪಿಯನ್ನು ಕಳುಹಿಸಿದ್ದರೂ ಕೂಡ ಯಾವುದೇ ಪಾರ್ಟಿಯ ಎಂ.ಪಿ ಇದ್ದರೂ ಅವರು ಹೋಗಿ ನೋಡುತ್ತಿದ್ದರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :- ಹೀಗೇಕೆ ಮಾಡುತ್ತೀರಿ? ತಿಂಗಳಿಗೆ 15 ದಿವಸ ದೆಹಲಿಯಲ್ಲಿಯೇ ಇರುತ್ತೀರಲ್ಲ. ಈಗ ಒತ್ತಾಯ ಮಾಡುವುದಾದರೆ ಮಾಡಿ ವಿಶೇಷವಾಗಿ ಕೋಲಾರಕ್ಕೆ ಕೊಡಿಸಿ ಎಂದು ಬೇಕಾದರೆ ಮಾಡಿ ಕಳುಹಿಸಿ, ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ರೇವಣ್ಣನವರೆ, ನೀವು ಪದೇ ಪದೇ ಹಾಗೆ ಹೇಳಬೇಡಿ. ಪದೇ ಪದೇ ಹೇಳಿದರೆ, electric shok ಹೊಡೆಯುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :– ಶ್ರೀನಿವಾಸಗೌಡರು ಗುಲಬರ್ಗಾ ಬಿಟ್ಟು ಹಾಸನ ತೆಗೆದುಕೊಂಡಿದ್ದಾರೆಂದು ಪದೇ ಪದೇ ಹೇಳುತ್ತಿದ್ದಾರೆ. ಅದಕ್ಕೆ ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಪದೇ ಪದೇ ಹೇಳಬೇಡಿ. current shock ಹೊಡೆಯುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಇಲ್ಲಿಂದ ಆಯ್ಕೆಯಾಗಿ ಹೋದಂಥ ಎಂ.ಪಿ.ಗಳು ಮತ್ತು ಮಂತ್ರಿಗಳು ಏನು ಮಾಡುತ್ತಿದ್ದರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಯಾರ ಪ್ರಭಾವಕ್ಕೊಳಕ್ಕಾಗಿ ಕೊಟ್ಟಿದ್ದಾರೆಂದರೆ, ಹಾಸನಕ್ಕೆ ದೇವೇಗೌಡರ ಪ್ರಭಾವ, ಚಿಕ್ಕಮಗಳೂರಿಗೆ ಶ್ರೀಕಂಠಯ್ಯನವರ ಪ್ರಭಾವ, ಬೆಳಗಾಂಕ್ಕೆ ಅಂಗಡಿಯವರ ಪ್ರಭಾವ, ಮಂಗಳೂರಿಗೆ ಸದಾನಂದಗೌಡರ ಪ್ರಭಾವ. ಇವರೆಲ್ಲ ಏನು ಪ್ರಭಾವ ಮಾಡಿದ್ದಾರೆ ಹಾಸನ, ಚಿಕ್ಕಮಗಳೂರು, ಕೊಡಗು, ಬೆಳಗಾಂ ಇವರ ಪ್ರಭಾವದಿಂದ ಆಗಿದೆಯಲ್ಲ, ಅದಕ್ಕೆ ಒಪ್ಪಿಕೊಳ್ಳೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ನಮ್ಮ ಚಿಕ್ಕೋಡಿ ತಾಲ್ಲೂಕಿನ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಿದ್ಧರಾಮಯ್ಯ ಮತ್ತು ಹಿರಿಯ ಸದಸ್ಯರೆಲ್ಲ ಸೇರಿ suicide package ಬಗ್ಗೆ ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಕೇಳಿದ್ದರು. ಕೇಂದ್ರ ಸರ್ಕಾರದವರು ದಿನಾಂಕ :– 10–10–2006 ರಲ್ಲಿ suicide package ಗೆ ಒಂದು ಆದೇಶವನ್ನು ಕಳುಹಿಸಿಕೊಟ್ಟರು. ಅವರಿಂದ ಮಾರ್ಗದರ್ಶನ ಬರಬೇಕಾದರೆ ಸುಮಾರು ಒಂದು ತಿಂಗಳ ಕಾಲವಾಯಿತು. ಅದಾದಮೇಲೆ, ಸಚಿವ ಸಂಪುಟ ಸಭೆಯಲ್ಲಿ ದಿನಾಂಕ 03–11–2006 ರಲ್ಲಿ Cabinet Sub-Committee ಯನ್ನು ರಚಿಸಲಾಯಿತು. ದಿನಾಂಕ 03–11–2006 ರಲ್ಲಿ ಮಾಡಿದ ತಕ್ಷಣ Cabinet Sub-Committeeಯ ಮೊದಲನೇ ಸಭೆ ದಿನಾಂಕ 23–11–2006 ರಲ್ಲಿ ನಡೆಯಿತು. ಅದರಲ್ಲಿ ಸುಮಾರು ಆರು ಜಿಲ್ಲೆಗಳನ್ನು ಸೇರಿಸಿದ್ದಾರೆ. ರಾಜ್ಯದಲ್ಲಿ ಸುಮಾರು 2,689.64 ಕೋಟಿ ರೂಪಾಯಿಗಳಿಗೆ ಅನುಮೋದಿಸಿ, ಅದರ ಪೈಕಿ 1,568 ಕೋಟಿ ರೂಪಾಯಿಗಳು ಸಹಾಯಧನವಾಗಿದ್ದು, ಉಳಿಕೆ 1,121 ಕೋಟಿ ರೂಪಾಯಿಗಳು ಸಾಲವಾಗಿರುತ್ತದೆ. ಇದು suicide package ಸಿದ್ಧರಾಮಯ್ಯನವರು

ಏನು ಮಾಡಿದ್ದೀರಿ, ಏನು ಖರ್ಚು ಮಾಡಿಲ್ಲವೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- PWD ಮತ್ತು Power Ministry ಯೊಳಗೆ ಏನು interest ತೆಗೆದುಕೊಂಡಿದ್ದೀರಿ, ಅದೇ ರೀತಿ ಈ package ನಲ್ಲಿ interest ತೆಗೆದುಕೊಂಡಿಲ್ಲವೆಂದು ಹೇಳಿದರು.

ಶ್ರೀ ಎನ್. ಧರ್ಮಸಿಂಗ್ :- ರೇವಣ್ಣನವರೆ ಸುಮ್ಮನೆ ಹೇಳಿ ಮೈಮೇಲೆ ಹಾಕಿಕೊಳ್ಳಬೇಡಿ.

ಶ್ರೀ ಹೆಚ್.ಡಿ. ರೇವಣ್ಣ :- ಸಾರ್ ನಾನು ಎರಡು ನಿಮಿಷ ಹೇಳಿಬಿಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ :- ನಾನು ಹೇಳಿ ಬಿಡುತ್ತೇನೆ, ನೀವು ತಪ್ಪು ಹೇಳುತ್ತಿದ್ದೀರಿ. ಈಗ 2680, ರೈತರ ಆತ್ಮಾಹುತಿ ಏನಾಗುತ್ತಿದೆ ಅಷ್ಟು ಕೋಟಿ ರೂಪಾಯಿ ಈಗಾಗಲೇ ಕೇಂದ್ರ ಸರ್ಕಾರ ಮಾಡಿದೆ. Already they have released 361 crores. ಎಲ್ಲಿ Action Plan ಮಾಡಿದ್ದೀರಿ? ಎಲ್ಲಿ ಕೆಲಸ ಪ್ರಾರಂಭ ಮಾಡಿದಿರಿ? ಏನೂ ಮಾಡುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ನಾನು ಎರಡು ನಿಮಿಷದಲ್ಲಿ ಹೇಳುತ್ತೇನೆ. ತಾವು ತಾಳ್ಮೆಯಿಂದ ಇದ್ದರೆ ಹೇಳುತ್ತೇನೆ. ಇಲ್ಲದಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಸ್ವಾಮಿ, ಇದಾದ ತಕ್ಷಣವೇ 23 ನೇ ತಾರೀಖು ಸಚಿವ ಸಂಪುಟದ ಉಪ ಸಮಿತಿಯ ಸಭೆ ಕರೆದು ಅವತ್ತೇ ತೀರ್ಮಾನ ಮಾಡಿದ್ದೇವೆ. ಅವತ್ತೇ ತೀರ್ಮಾನ ಮಾಡಿ ಆ ಇಲಾಖೆಗೆ ಸಂಬಂಧಪಟ್ಟಂತೆಯೆ ಯಾವ್ಯಾವ ಇಲಾಖೆಗೆ ಕೇಂದ್ರ ಸರ್ಕಾರದಿಂದ ಕಳುಹಿಸಿ ಕೊಟ್ಟಿದ್ದಾರೆ, ಪೂರ್ಣವಾಗಿ ಆ ಇಲಾಖೆಯ ಕಾರ್ಯದರ್ಶಿಗಳಿಗೆ ಅಧಿಕಾರ ಕೊಟ್ಟು, ಮೊದಲನೆಯದಾಗಿ ಜಿಲ್ಲಾಧಿಕಾರಿಗಳಿಗೆ 50 ಲಕ್ಷ ರೂಪಾಯಿನಂತೆ ಪ್ರತಿ ಜಿಲ್ಲಾಧಿಕಾರಿಗಳಿಗೆ......

ಶ್ರೀ ಎನ್. ಧರ್ಮಸಿಂಗ್ :- ನಿಮ್ಮ ಕಾಲದಲ್ಲಿ ಏನು ಆಯಿತು ಅಷ್ಟು ಹೇಳಿ ಸಾಕು.

ಶ್ರೀ ಹೆಚ್.ಡಿ. ರೇವಣ್ಣ :- ಎರಡೇ ನಿಮಿಷ ನಾನು ಉತ್ತರಿಸುವುದಕ್ಕೆ ಅವಕಾಶ ಕೊಡಿ ಸಾರ್. ನನಗೆ ನಿಮ್ಮಷ್ಟು ಅನುಭವ ಇಲ್ಲ. ನನಗೆ ಐದು ನಿಮಿಷ

ಹೇಳುವುದಕ್ಕೆ ಬಿಡಿ ಸಾರ್. ಜಿಲ್ಲಾಧಿಕಾರಿಗಳು 50 ಲಕ್ಷ ರೂಪಾಯಿ ನೇರವಾಗಿ ಬಿಡುಗಡೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಈಗ ಸುಮಾರು 1059 ಫಲಾನುಭವಿಗಳನ್ನು ಆಯ್ಕೆ ಮಾಡಿ, ಅದರಲ್ಲಿ 60 ಲಕ್ಷ 91 ಸಾವಿರ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಂದ ಖರ್ಚು ಮಾಡಿದ್ದಾರೆ. ಆರು ಜಿಲ್ಲಾಧಿಕಾರಿಗಳಿಗೆ ಅವರು ಮೂರು ವರ್ಷದಲ್ಲಿ 50 ಲಕ್ಷದಂತೆ ಖರ್ಚು ಮಾಡಬೇಕೆಂದು ಕೊಟ್ಟಿದ್ದಾರೆ. ಎರಡನೆಯದಾಗಿ ಬ್ಯಾಂಕ್ ಬಡ್ಡಿ ಮನ್ನಾ ಮಾಡಬೇಕೆಂದು 355 ಕೋಟಿಯೆಂದು ಇಟ್ಟಿದ್ದಾರೆ. 355 ಕೋಟಿಯಲ್ಲಿ 200 ಕೋಟಿ ರೂಪಾಯಿಗಳ ಬಡ್ಡಿ ಮನ್ನಾದ ಪ್ರಸ್ತಾವನೆ ಬಂದಿದ್ದು ಈ ಪೈಕಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು 100 ಕೋಟಿ 42 ಲಕ್ಷದಂತೆ ಇದಕ್ಕೆ ಖರ್ಚು ಮಾಡಿದ್ದಾರೆ.

ಮತ್ತೆ ಬಿತ್ತನೆ ಬೀಜ ವಿತರಣೆ 50% ಎಂದು ಸುಮಾರು 23 ಕೋಟಿ ಅಲ್ಲಿಂದ ಬಂದಿತ್ತು. ನಾವು ಈ ಬಿತ್ತನೆ ಬೀಜದಲ್ಲಿ 50% ರಲ್ಲಿ 24 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅದೇ ರೀತಿ ಕೆರೆಗಳನ್ನು ತೆಗೆದುಕೊಳ್ಳುವುದಕ್ಕೆ ಹನಿ ನೀರಾವರಿಗೆ 64 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಹನಿ ನೀರಾವರಿ ಎಂದರೆ drip irrigation ಗೋಸ್ಕರ ಅದನ್ನು 75% ಕೊಟ್ಟು ಫೆಬ್ರುವರಿಗೆ ಒಂದು ಕೋಟಿ 29 ಲಕ್ಷ ರೂಪಾಯಿ ವೆಚ್ಚವಾಗಿರುತ್ತದೆ. ಸಣ್ಣ ನೀರಾವರಿ ಕೆರೆಗಳಿಗೆ ಸುಮಾರು 450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 458 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ Cabinet Sub-Committee ಒಳಗೆ ತೀರ್ಮಾನ ಮಾಡಿ, ಅಂದಾಜು ಎಲ್ಲಾ ಆಗಿ, ನಬಾರ್ಡ್ ಲೋನ್ ನಲ್ಲಿ ಅದನ್ನು 458 ಕೋಟಿ ಕೊಡುತ್ತಾರೆ. ನಬಾರ್ಡ್‌ಗೆ 458 ಕೋಟಿ ರೂಪಾಯಿ ಕಳುಹಿಸಿಕೊಟ್ಟಿದ್ದೇವೆ, ಅಲ್ಲಿ ಮಂಜೂರಾತಿ ಆಗಿ ಬಂದ ತಕ್ಷಣ ಟೆಂಡರ್ ಕರೆಯುತ್ತೇವೆ. ಅದೇ ರೀತಿ major irrigation ಗೆ 1207 ಕೋಟಿ, ಇದು ಮೂರು ವರ್ಷಕ್ಕೆ, 458 ಕೋಟಿ ಆರು ಜಿಲ್ಲೆಗೆ ಮೂರು ವರ್ಷಕ್ಕೆ major irrigation ನಲ್ಲಿ 1200 ಕೋಟಿ ಅದನ್ನು ಮೂರು ವರ್ಷಕ್ಕೆ, ಇದನ್ನು ಈಗಾಗಲೇ estimate ಮಾಡಿ ಅದನ್ನು ಸಹ ನಬಾರ್ಡ್‌ಗೆ ಕಳುಹಿಸಿ ಕೊಡುತ್ತಿದ್ದೇವೆ.

Government of India ಗೆ ಕಳುಹಿಸಿ ಅಲ್ಲಿಂದ approval ಆಗಬೇಕು. ಅದನ್ನು ಈಗಾಗಲೇ ಅಂದಾಜು ತಯಾರಿಸಿ 1208 ಕೋಟಿ ರೂಪಾಯಿಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. 458 ಕೋಟಿ ರೂಪಾಯಿದು ನಬಾರ್ಡ್‌ಗೆ ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಹತ್ತಿರ ಉಳಿಸಿರುವುದು ಮೀನುಗಾರಿಕೆಗೆ 1 ಕೋಟಿ

65 ಲಕ್ಷ ಇದೆ, ಅದನ್ನು ಆ ಇಲಾಖೆಯವರಿಗೆ ಹೇಳಿದ್ದೇವೆ. ಪಶುಸಂಗೋಪನಾ ಇಲಾಖೆಗೆ 16 ಕೋಟಿ ಕೊಟ್ಟಿದ್ದಾರೆ. ಆ ಇಲಾಖೆಗೆ ಒಂದು ತಿಂಗಳಲ್ಲಿ ಖರ್ಚು ಮಾಡಬೇಕೆಂದು ನಾವು ಈಗಾಗಲೇ ಆ ಇಲಾಖೆಯ ಕಾರ್ಯದರ್ಶಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಆ ಇಲಾಖೆಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದ ಏನು guidelines ಇದೆ ಆ ರೀತಿ ಮಾಡಿದ್ದೇವೆ. ಇದರಲ್ಲಿ ಈಗಾಗಲೇ 4–5 ಸಭೆಗಳನ್ನು ಮಾಡಿದ್ದೇವೆ. ಇದರಲ್ಲಿ ನಾವು ಯಾವುದೇ ತರಹ ಹಿಂದೆ ಬಿದ್ದಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ಮಾನ್ಯ ಸಿದ್ಧರಾಮಯ್ಯನವರಿಗೆ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಕೃಷ್ಣ ಭೈರೇಗೌಡ :– ಕುಡಿಯುವ ನೀರಿಗಾಗಿ ಹಣ ವಿತರಣೆಯ ಬಗ್ಗೆ ಒಂದು ಸಣ್ಣ ಸಲಹೆ ಇದೆ. ಅವಶ್ಯಕತೆಗೆ ಆಧಾರವಾಗಿ ಹಣ ಬಿಡುಗಡೆ ಮಾಡುವುದು ಒಳ್ಳೆಯದು. ಈಗ ಉದ್ಯೋಗ ಸೃಷ್ಟಿ ಮಾಡುವುದು, ಕೂಲಿ ಕಾರ್ಮಿಕರ ಸಂಖ್ಯೆ ಎಷ್ಟು ಎಂದು ಪ್ರತಿ ಜಿಲ್ಲೆಯಲ್ಲಿ ಇರುತ್ತದೆ. ಅದರ ಆಧಾರವಾಗಿ ಮಾಡಿ. ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಹಣವನ್ನು ಆಯಾಯ ತಾಲ್ಲೂಕು ಅಥವಾ ಜಿಲ್ಲೆಗೆ ಏನು ಅವಶ್ಯಕತೆ ಇರುತ್ತದೆ. ಮಾನ್ಯ ಪ್ರಕಾಶ್ ಸಾಹೇಬ್ರು, ಒಂದೇ ಒಂದು ಸಣ್ಣ ಸಲಹೆ ದಯಮಾಡಿ ಕೇಳಬೇಕು. ಕುಡಿಯುವ ನೀರಿಗೆ ಎಲ್ಲಾ ತಾಲ್ಲೂಕುಗಳಲ್ಲೂ......

ಶ್ರೀ ಜೆ.ಸಿ. ಮಾಧುಸ್ವಾಮಿ :– ಬೇರೆ ಏನಾದರೂ ತೆಗೆದುಕೊಳ್ಳುತ್ತೀರೋ ಇದು ಕೊನೆಯ ವಿಷಯವೇ?

ಶ್ರೀ ಕೃಷ್ಣ ಭೈರೇಗೌಡ :– ಸಾರ್ ಎರಡು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಎರಡೇ ಎರಡು ನಿಮಿಷ ಕೊಡಿ ಎಂದರೆ ತಾವು ಆಗಲೇ ನನಗೆ ಮಾತನಾಡಲಿಕ್ಕೆ ಬಿಡಲಿಲ್ಲ. ಈಗ ಆರಾಮವಾಗಿ ಚರ್ಚೆ ಮಾಡುವುದಕ್ಕೆ ಬಿಟ್ಟು ಬಿಟ್ಟರೆ ಹೇಗೆ?

ಅಧ್ಯಕ್ಷರು :– ಕ್ಲ್ಯಾರಿಫಿಕೇಷನ್ ಕೇಳುತ್ತಿದ್ದೀರಲ್ಲ.

(ಗೊಂದಲ)

ಶ್ರೀ ಕಾಕಾಸಹೇಬ್ ಪಾಂಡುರಂಗ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಿನ್ನೆ ನಿಪ್ಪಾಣಿ ತಂಬಾಕು ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿಕೆ ಮಾಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು :- ಆಯಿತು ಈಗ ಅದೇನು ಕ್ಲ್ಯಾರಿಫಿಕೇಷನ್ ಹೇಳಿಬಿಡಿ ಸ್ವಾಮಿ ಇದು ಮುಕ್ತಾಯವಾಗಲಿ.

ಶ್ರೀ ಕೃಷ್ಣ ಭೈರೇಗೌಡ :- ಕುಡಿಯುವ ನೀರಿಗೆ ಮಾತ್ರ ಅವಶ್ಯಕತೆಯ ಆಧಾರದ ಮೇಲೆ ಹಣ ಕೊಟ್ಟರೆ ಒಳ್ಳೆಯದಾಗಬಹುದು. ಏಕೆಂದರೆ, ಎಲ್ಲಾ ಕಡೆನೂ ಒಂದೇ ರೀತಿಯ ಸಮಸ್ಯೆಯಿಲ್ಲ. ಎಲ್ಲಿ ತೀವ್ರವಾದಂಥ ಸಮಸ್ಯೆ ಇದೆ ಅಲ್ಲಿ ಹೆಚ್ಚಿಗೆ ಒತ್ತು ಕೊಡಬೇಕು. especially CRF ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಆದರೆ, CRF ನಲ್ಲಿ ಕೊಳವೆ ಬಾವಿ ಕೊರೆಯುವುದಕ್ಕೆ ಕೊಡುವುದಕ್ಕೆ ಆಗುವುದಿಲ್ಲ. ಬಹುಶಃ ತಮಗೆ ಗೊತ್ತಿರಬಹುದು. Non CRF ನಿಂದ ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಅವಶ್ಯಕತೆಯ ಅನುಗುಣವಾಗಿ ಕೊಡಲಿಕ್ಕೆ ತಾವು ದಯವಿಟ್ಟು ಪರಿಗಣಿಸಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಿನ್ನೆ ನಿಪ್ಪಾಣಿ ತಂಬಾಕು ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿಕೆ ಮಾಡುತ್ತೇನೆಂದು ಹೇಳಿದ್ದರು. ಅದರ ಬಗ್ಗೆ ಉತ್ತರ ಹೇಳಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಪ್ರಕಾಶ್‌ರವರೇ, ಎಲ್ಲರದ್ದೂ ಸೇರಿಸಿ ಉತ್ತರ ಹೇಳಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ :- ತಂಬಾಕಿನ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಡುವ ಬಗ್ಗೆ ಹಣಕಾಸಿನ ಮಂತ್ರಿಗಳಿಗೆ ಹೇಳಿದ್ದರು. ನಮ್ಮ ಹಣಕಾಸಿನ ಕಾರ್ಯದರ್ಶಿಗಳು ರಜೆಯ ಮೇಲೆ ಇದ್ದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದಾರೆ. ಸೋಮವಾರ ದಿವಸ ಅದಕ್ಕೆ ಸಂಬಂಧಪಟ್ಟಂಥ ಆದೇಶ ಅವರು ಮಾಡುತ್ತಾರೆ. ಆದ್ದರಿಂದ ಇವತ್ತು ಅದರ ಬಗ್ಗೆ ಹೇಳಿಕೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು :- ಚರ್ಚೆ ಮುಕ್ತಾಯವಾಯಿತು. ಮಾಧುಸ್ವಾಮಿಯವರೆ,

ಶ್ರೀ ಕೆ.ಜಿ. ಬೋಪಯ್ಯ :- ಮಾನ್ಯ ಅಧ್ಯಕ್ಷರೆ, ನಮ್ಮ ವಿಷಯ ತೆಗೆದುಕೊಳ್ಳಿ.

ಅಧ್ಯಕ್ಷರು :- ಸ್ವಲ್ಪ ಕುಳಿತುಕೊಳ್ಳಿ. ಒಂದು ಬಿಲ್ ಇದೆ.

ಶ್ರೀ ಜಗದೀಶ್ ಶೆಟ್ಟರ್ :- ಕಂದಾಯ ಇಲಾಖೆಯದು ಒಂದು ಬಿಲ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ಮಾತನಾಡುವುದಕ್ಕೆ ಎದ್ದರೆ ಇನ್ನೊಂದು ಬಿಲ್ ತೆಗೆದುಕೊಳ್ಳಿ, ನೀವು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೀರಲ್ಲ.

ಶ್ರೀ ಎನ್. ಧರ್ಮಸಿಂಗ್ :- ಇದು ಮುಗಿಯಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ :- ಆಯಿತು ನಾನು ಮನವಿ ಮಾಡುತ್ತಿದ್ದೇನೆ ಅಷ್ಟೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡರ್ :- ಇನ್ನೂ ಸ್ಪಷ್ಟೀಕರಣ ಸರಿಯಾಗಿ ಬರಲಿಲ್ಲ. ನಾವು ಇನ್ನು ಸ್ವಲ್ಪ ಪ್ರಶ್ನೆ ಕೇಳೋಣ ಎಂದರೆ ನೀವು ಬಿಲ್ ತೆಗೆದುಕೊಳ್ಳಲಿಕ್ಕೆ ಹೇಳುತ್ತಿರಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಬೇರೆ ವಿಷಯಕ್ಕೆ ಹೋದರಲ್ಲ ಅದಕ್ಕೆ ನಾನು ಹೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬರಗಾಲದ ಉತ್ತರ ಮುಗಿಯತೇ?

ಶ್ರೀ ಅಪ್ಪಾಜಿ ಎಸ್. ನಾಡಗೌಡರ್ :- ನಮ್ಮ ಕೆಲವು ಕ್ಲ್ಯಾರಿಫಿಕೇಷನ್‌ಗಳಿಗೆ ಅವರು ಸ್ಪಷ್ಟನೆ ಕೊಡಬೇಕಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ :- ಇನ್ನು ಏನು ಕ್ಲ್ಯಾರಿಫಿಕೇಷನ್ ಇದೆ ಅದನ್ನು ಕೇಳಿ.

ಅಧ್ಯಕ್ಷರು :- ಆಯಿತು ಅವರು ಹೇಳುತ್ತಾರೆ ಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಸಾರ್ ಅದು ಬಿಲ್. ಬೇರೆ ಹೇಳುವುದಲ್ಲ. ಅವರು ಬಿಲ್ introduce ಮಾಡುತ್ತಾರೆ.

ಶ್ರೀ ಎನ್. ಧರ್ಮಸಿಂಗ್ :- ನಾವೆಲ್ಲರೂ ಕೂಡ ಚರ್ಚೆಯಲ್ಲಿ ಏನು ಹೇಳಿದ್ದೇವೆಂದರೆ, ಕುಡಿಯುವ ನೀರಿನ ಸಮಸ್ಯೆ ಬಹಳ ಕಠಿಣ ಇದೆ. ಈಗ ಎಲ್ಲರೂ ನಮ್ಮ ನಮ್ಮ ಕ್ಷೇತ್ರಕ್ಕೆ ಹೋಗಬೇಕಾಗಿದೆ. ನಾವಾಗಲಿ, ಸಿದ್ಧರಾಮಯ್ಯನವರು,